ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 41 | ಅಕ್ಟೋಬರ್ 4-10, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಅಸ್ಸಾಂ : ಬಿಜೆಪಿ ಸರ್ಕಾರದ ಅಮಾನುಷ ಭೂಕಬಳಿಕೆ





ಪ್ರಧಾನಿಗಳ ಅಮೆರಿಕಾ ಭೇಟಿ 2021
ಈಗಲೂ ವಿವೇಕ ಬಂದಿಲ್ಲ


ಶ್ರೀಲಂಕಾದ ಆಹಾರದ ತುರ್ತು ಪರಿಸ್ಥಿತಿ?













ಸೆಪ್ಟೆಂಬರ್ 27



ಮಂಗಳೂರು : ಸಂಘ ಪರಿವಾರ ಪೊಲೀಸ್ ಗಿರಿ ಮತ್ತು ಪೊಲೀಸರ ಸಾಫ್ಟ್ ಕಾರ್ನರ್

ಇತಿಹಾಸ ನಿರ್ಮಿಸಿದ ಭಾರತ್ ಬಂದ್

ರೈತ-ಕಾರ್ಮಿಕ ಐಕ್ಯತೆಯ ಅಭಿವ್ಯಕ್ತಿ

ಅಸ್ಸಾಂನ ಧಾಲ್ಪುರ ಪ್ರದೇಶದಲ್ಲಿ ಸಂವಿಧಾನ ಮತ್ತು ಕಾನೂನು ಅಮಾನತ್ತಿನಲ್ಲಿದೆಯೇ?
ರಾಜ್ಯದ ಮುಖ್ಯಮಂತ್ರಿಗೆ ಬೃಂದಾ ಕಾರಟ್ ಪತ್ರ



ಅಸ್ಸಾಂನ ದರ್ರಾಂಗ್ ಜಿಲ್ಲೆಯ ಧಾಲ್ಪುರದಲ್ಲಿ ಸೆಪ್ಟಂಬರ್ 23ರಂದು ಸುಮಾರು 1000 ಕುಟುಂಬಗಳನ್ನು 'ಕಾನೂನುಬಾಹಿರ ವಲಸಿಗ'ರೆಂದು ತೆರವು ಮಾಡಿಸುವ ಪೋಲೀಸ್ ಕಾರ್ಯಾಚರಣೆಯಲ್ಲಿ ಗೋಲೀಬಾರ್ ಮತ್ತು ಇಬ್ಬರ ಸಾವಿನ ಘಟನೆ ಇಡೀ ದೇಶದ ಗಮನ ಸೆಳೆದಿದೆ. ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ನೇತೃತ್ವದಲ್ಲಿ ಸಿಪಿಐ(ಎಂ) ನಿಯೋಗವೊಂದು ಆ ಸ್ಥಳಕ್ಕೆ ಭೇಟಿ ನೀಡಿದಾಗ ತಿಳಿದು ಬಂದ ಸಂಗತಿಗಳು ದಿಗಿಲುಗೊಳಿಸುವಂತದ್ದು ಎಂದು ಅವರು ಹೇಳಿದ್ದಾರೆ. ಈ ಕುರಿತು ಅವರು ರಾಜ್ಯದ ಮುಖ್ಯಮಂತ್ರಿ ಡಾ. ಹಿಮಂತ ಬಿಸ್ವ ಶರ್ಮಾರವರನ್ನು ಭೇಟಿ ಮಾಡಲು ಹೋದಾಗ ಅವರು ಪ್ರವಾಸದಲ್ಲಿದ್ದರಿಂದ ಅವರಿಗೆ ಈ ಕುರಿತು ಪತ್ರ ಬರೆದು ತಕ್ಷಣವೇ ಈ ತೆರವು ಕಾರ್ಯಾಚರಣೆಯನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ಪ್ರದೇಶದಲ್ಲಿ ಸಂವಿಧಾನ ಮತ್ತು ಕಾನೂನು ಚೌಕಟ್ಟು ಅಮಾನತಿನಲ್ಲಿ ಇರುವಂತೆ ಕಾಣುತ್ತದೆ ಎಂದು ಹೇಳಿರುವ ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ಎತ್ತಿರುವ ಅಂಶಗಳು ಹೀಗಿವೆ:

1. ಕಳೆದ 50 ವರ್ಷಗಳಿಗಿಂತಲೂ ಹೆಚ್ಚು ಸಮಯದಿಂದ ಇಲ್ಲಿ ಸಾಗುವಳಿ ಮಾಡುತ್ತಿರುವ ಸುಮಾರು 1000 ಬಡ ರೈತ ಕುಟುಂಬಗಳನ್ನು ಅಲ್ಲಿಂದ ಸಶಸ್ತ್ರ ಪೋಲೀಸ್ ಪಡೆಯ ನೆರವಿನಿಂದ ತೆರವುಗೊಳಿಸಲಾಗಿದೆ. ಅವರ ಕಠಿಣ ಶ್ರಮದಿಂದಾಗಿ ಆ ಭೂಮಿ ಸಾಗುವಳಿಯೋಗ್ಯವಾಗಿತ್ತು, ಅಲ್ಲಿ ಅವರು ತರಕಾರಿ, ಭತ್ತ ಮತ್ತು ವಿವಿಧ ಬೆಳೆಗಳನ್ನು ಬೆಳೆದು ಬದುಕು ನಡೆಸುತ್ತಿದ್ದರು. ತಮ್ಮ ವೃತ್ತಿ ಮತ್ತು ಕೆಲವು ಸಂದರ್ಭಗಳಲ್ಲಿ ಒಡೆತನದ ದಾಖಲೆಗಳು ಅವರ ಬಳಿ ಇವೆ. ಈ ನಿಯೋಗ ನಡೆಸಿದ ಸಾರ್ವಜನಿಕ ವಿಚಾರಣೆಯಲ್ಲಿ ನಾವೇ ಅವನ್ನು ನೋಡಿದ್ದೇವೆ. ಈ ಭೂಮಿಯನ್ನು ಒತ್ತುವರಿ ಮಾಡಲಾಗಿದೆ ಎಂಬ ಸರಕಾರದ ದಾವೆ ಸರಿಯಿದೆ ಎಂದು ಭಾವಿಸಿದರೂ, ಈ ಜನಗಳ ದಾವೆಗಳನ್ನು ಪರೀಕ್ಷಿಸಲು ಅಥವ ತಿರಸ್ಕರಿಸಲು ಯಾವುದೇ ಸರ್ವೆಯನ್ನು ಅದು ನಡೆಸಿಲ್ಲ. ಅಲ್ಲದೆ, ತೆರವು ಮಾಡಿಸಲು 12 ಗಂಟೆಗಳಿಗಿಂತಲೂ ಕಡಿಮೆ ಕಾಲಾವಧಿ ಕೊಡಲಾಗಿತ್ತು. ಈ ಇಡೀ ಪ್ರಕ್ರಿಯೆ ಸಂಪೂರ್ಣವಾಗಿ ಕಾನೂನುಬಾಹಿರ ಮತ್ತು ಅಮಾನವೀಯ.
2. ಯಾವುದೇ ಪುನರ್ವಸತಿ ಯೋಜನೆ ಇರಲಿಲ್ಲ, ಅಥವ ಅವರಿಗೆ ಬೇರೆ ಯಾವ ಭೂಮಿಯನ್ನೂ ಕೊಡುವ ಬಗ್ಗೆ ಹೇಳಿಲ್ಲ. ತದ್ವಿರುದ್ಧವಾಗಿ, ಸಶಸ್ತ್ರ ಪೋಲೀಸರ ಹಲವು ತಂಡಗಳು ಅಡ್ಡಾಡುತ್ತಿರುವುದನ್ನು ನೋಡಿದೆವು. ಇದು ಭೀತಿ ಪಡಿಸುವ ಪ್ರಯತ್ನವಲ್ಲದೆ ಬೇರೇನೂ ಅಲ್ಲ. ಸರಕಾರ ಟ್ರಾಕ್ಟರುಗಳನ್ನು ಆ ಭೂಮಿಯಲ್ಲಿ ಓಡಾಡಿಸುತ್ತಿರುವುದನ್ನೂ ನೋಡಿದೆವು. ಇಲ್ಲಿಯೂ ದಾವೆಗಳನ್ನು ಇತ್ಯರ್ಥ ಮಾಡದೆಯೇ ಸರಕಾರ ಕಾನೂನುಬಾಹಿರವಾಗಿ ಆ ಭೂಮಿಯನ್ನು ಕಬಳಿಸಿದೆ.
3. ಸೆಪ್ಟಂಬರ್ 23ರಂದು ಆಡಳಿತ ಮತ್ತು ಪೋಲೀಸಿನ ಪಾತ್ರ ಆಕ್ರಮಿಸಿಕೊಂಡ ಪಡೆಗಿಂತಲೂ ಕೆಟ್ಟದಾಗಿತ್ತು. ಸ್ವಲ್ಪ ಸಮಯ ಕೊಡಿ ಎಂದು ಜನ ಬೇಡಿಕೊಳ್ಳುತ್ತಿದ್ದರು, ಹೆಂಗಸರು ಮತ್ತು ಮಕ್ಕಳು ಭಯಭೀತರಾಗಿದ್ದರು, ಆದರೆ ಸಮಯ ಕೊಡಲಿಲ್ಲ, ಅವರ ಮನೆಗಳನ್ನು ನೆಲಸಮ ಮಾಡಲಾಯಿತು, ಅವರ ಬಳಿಯಿದ್ದ ಅಲ್ಪಸ್ವಲ್ಪ ಸಾಮಾನುಗಳನ್ನೂ ಧ್ವಂಸ ಮಾಡಲಾಯಿತು. ಪೋಲೀಸರು ಜನಗಳ ಮೇಲೆ ನೇರವಾಗಿಯೇ ಗೋಲೀಬಾರ್ ನಡೆಸಿ ಇಬ್ಬರ ಪ್ರಾಣ ತೆಗೆದುಕೊಂಡರು. ಹಲವರು ಗಾಯಗೊಂಡರು. ಇನ್ನೂ ನಾಚಿಕೆಗೇಡಿನ ಸಂಗತಿಯೆಂದರೆ, ಪೋಲೀಸರು ತಾವೇ ಕರೆತಂದಿದ್ದ ಒಬ್ಬ ಫೋಟೋಗ್ರಾಫರ್ ಅತ್ಯಂತ ದ್ವೇಷಪೂರ್ಣ ,ಬರ್ಬರ ಕೃತ್ಯ ನಡೆಸುತ್ತಿದ್ದಾಗ ಪ್ರೇಕ್ಷಕರಂತೆ ನೋಡುತ್ತ ನಿಂತಿದ್ದರು. ಆತ ಗೋಲೀಬಾರಿಗೆ ಬಲಿಯಾಗಿ ಬಿದ್ದಿದ್ದವನ ಮೇಲೆ ಮತ್ತೆ–ಮತ್ತೆ ನೆಗೆದಾಡುತ್ತಿದ್ದ. ಇಂತಹ ಒಂದು ಅತ್ಯಾಚಾರದಲ್ಲಿ ಶಾಮೀಲಾದುದಕ್ಕೆ ಯಾವ ಪೋಲೀಸ್ ಸಿಬ್ಬಂದಿಯನ್ನೂ ಹೊಣೆಗಾರನಾಗಿ ಮಾಡಿಲ್ಲ ಎಂಬುದು ನಿಜಕ್ಕೂ ಅಭೂತಪೂರ್ವ ಸಂಗತಿ.
4. ಸ್ಥಾನಪಲ್ಲಟಗೊಂಡಿರುವ ಜನಗಳ ಸ್ಥಿತಿ ಯುದ್ಧಕೈದಿಗಳಿಗಿಂತಲೂ ಕೆಟ್ಟದಾಗಿದೆ. ಪುನರ್ವಸತಿಗೆ ಒಂದು ಪೈಸಾನೂ ಕೊಟ್ಟಿಲ್ಲ. ನೀರಿಲ್ಲ, ಶೌಚಾಲಯಗಳಿಲ್ಲ, ಸೂರಿಲ್ಲ, ಆಹಾರವಿಲ್ಲ, ವೈದ್ಯಕೀಯ ಸೌಲಭ್ಯಗಳಿಲ್ಲ ಎಂದು ಹಲವಾರು ಹೆಂಗಸರು, ಮಕ್ಕಳು ನಮ್ಮಲ್ಲಿ ಅಳುತ್ತ ತಮ್ಮ ಸಂಕಟ ತೋಡಿಕೊಂಡರು. ಮಕ್ಕಳು ಕೊಳಕು ನದಿ ನೀರನ್ನು ಕುಡಿಯಬೇಕಾಗಿ ಬಂದಿದೆ. ಪ್ರತಿಯೊಂದು ಕುಟುಂಬದಲ್ಲೂ ರೋಗಗ್ರಸ್ತ ಮಕ್ಕಳು, ಹೆಂಗಸರು ಇದ್ದಾರೆ. ಇದು ಸರಕಾರ ಉಂಟುಮಾಡಿರುವ ದುಸ್ವಪ್ನದ ಸ್ಥಿತಿ. ಹತ್ತಿರದಲ್ಲಿ ಶಾಲೆಗಳು ತೆರೆದಿದ್ದರೂ ಇಲ್ಲಿಯ ಮಕ್ಕಳು ಶಾಲೆಗೆ ಹೋಗಲಾರದಂತಹ ಪರಿಸ್ತಿತಿ ಇರುವುದು ಕಂಡು ಬಂತು. ಆಡಳಿತ ಇಲ್ಲಿಯ ಎಲ್ಲ ರಸ್ತೆಗಳನ್ನು ಬಂದ್ ಮಾಡಿದೆ, ಇದರಿಂದಾಗಿ ವೈದ್ಯಕೀಯ ನೆರವನ್ನು ಪಡೆಯುವುದೂ ಕಷ್ಟಕರವಾಗಿದೆ.
5. ನಾಲ್ಕು ಮಸೀದಿಗಳನ್ನು ಒಡೆದಿರುವುದು ಕಂಡು ಬಂತು. ಕನಿಷ್ಟ ಒಂದನ್ನು ಸುಟ್ಟು ಹಾಕಲಾಗಿದೆ., ಸ್ಮಶಾನಗಳನ್ನು ಧ್ವಂಸ ಮಾಡಲಾಗಿದೆ. ಹತ್ತಾರು ಮಕ್ಕಳು ಓದುತ್ತಿದ್ದ ಒಂದು ಮದರಸಾವನ್ನು ಕೂಡ ಒಡೆದು ಹಾಕಲಾಗಿದೆ.
6. ಈ ಭೂಮಿಯನ್ನು "ಮೂಲನಿವಾಸಿ" ಜನಗಳನ್ನು ದುಡಿಸಿಕೊಂಡು ಒಂದು ಫಾರ್ಮ್ ಆಗಿ ಪರಿವರ್ತಿಸಲಾಗುವುದು ಎಂಬ ಸರಕಾರದ ಘೋಷಣೆ ಒಂದು ಗೂಢವಾಗಿ ಕಾಣುತ್ತಿದೆ. ಏಕೆಂದರೆ ಈ ಪ್ರದೇಶ ಈಗಾಗಲೇ ಬೇಸಾಯದ ಪ್ರದೇಶವಾಗಿದೆ, ಸ್ಥಳೀಯ ಜನಗಳ ಅಗತ್ಯಗಳನ್ನಲ್ಲದೆ, ಗುವಾಹಾಟಿಯ ತರಕಾರಿ ಮಾರುಕಟ್ಟೆಗಳಿಗೂ ಪೂರೈಕೆ ಮಾಡುತ್ತಿತ್ತು. ಈ ರೀತಿ ತೆರವು ಮಾಡಿಸದೆಯೇ ಸರಕಾರೀ ಫಾರ್ಮ್‌ಗಳನ್ನು ಅಭಿವೃದ್ಧಿ ಪಡಿಸಲು ಬೇಕಾದಷ್ಟು ಭೂಮಿ ಇಲ್ಲಿದೆ. ಈ ತಾರ್ಕಿಕ ಹೆಜ್ಜೆಯನ್ನು ಸರಕಾರ ಏಕೆ ಇಟ್ಟಿಲ್ಲ?
7. ದುರದೃಷ್ಟವಶಾತ್, ಮತ್ತು ಖೇದಕರ ಸಂಗತಿಯೆಂದರೆ ಸರಕಾರದ ಈ ಕ್ರಮಕ್ಕೆ ಏಕೈಕ ಕಾರಣ ಅದರ ಸಂಕುಚಿತ ರಾಜಕೀಯವೇ ಎಂದು ಕಂಡು ಬರುತ್ತದೆ. ಅವರೆಲ್ಲ ಭಾರತೀಯ ನಾಗರಿಕರು ಎಂದು ಸರಕಾರಕ್ಕೇ ಗೊತ್ತಿದ್ದರೂ ಕೂಡ ಅಲ್ಪ ಸಂಖ್ಯಾತ ಸಮುದಾಯಗಳಿಗೆ ಅವುಗಳ ಹಕ್ಕುಗಳನ್ನು ವಂಚಿಸುವ ಸಂಕುಚಿತ ರಾಜಕೀಯ ಅಜೆಂಡಾ ಇಲ್ಲಿ ಕಾಣ ಬರುತ್ತಿದೆ. ಮುಸ್ಲಿಮರೆಂಬ ಒಂದೇ ಕಾರಣಕ್ಕೆ ಈ ಪ್ರದೇಶದಲ್ಲಿ ಅವರ ಹಕ್ಕುಗಳನ್ನು ವಂಚಿಸಲಾಗುತ್ತಿದೆ.
8. ಇಲ್ಲಿನ ಸನ್ನಿವೇಶ ಮಾನವ ಹಕ್ಕುಗಳ ಒಂದು ಸ್ಪಷ್ಟ ಉಲ್ಲಂಘನೆಯಾಗಿದೆ. ಇದು ಸಂವಿಧಾನದ ಮೇಲೆ, ತೆರವು, ಮರುನೆಲೆ, ಮರುವಸತಿಯ ಕಾನೂನುಗಳ ಮೇಲೆ ನಡೆಸಿರುವ ಒಂದು ಹಲ್ಲೆ.

ಆದ್ದರಿಂದ 1. ಸರಿಯಾದ ಸರ್ವೆ ಮತ್ತು ಪರೀಕ್ಷಣೆ ಇಲ್ಲದ ಈ ಎಲ್ಲ ತೆರವು ಕ್ರಮಗಳನ್ನು ಮತ್ತು ಭೂಕಬಳಿಕೆಯನ್ನು ತಕ್ಷಣವೇ ನಿಲ್ಲಿಸಬೇಕು; 2. ಸಾವು ಉಂಟಾದ ಮತ್ತು ಗಾಯಗೊಂಡವರ ಕುಟುಂಬಗಳಿಗೆ ಪರಿಹಾರ ಕೊಡಬೇಕು. ತಮ್ಮ ಮನೆ ಸಾಮಾನುಗಳನ್ನು ಮತ್ತು ಜೀವನೋಪಾಯಗಳನ್ನು ಕಳಕೊಂಡವರಿಗೂ ಪರಿಹಾರ ತೆರಬೇಕು; 3. ಆಹಾರ, ನೀರು, ತಾತ್ಕಾಲಿಕ ಶೌಚಾಲಯ, ಸೂರುಗಳು ಮುಂತಾದ ತಕ್ಷಣದ ಪರಿಹಾರಗಳನ್ನು ಒದಗಿಸಬೇಕು.; 4. ಹತ್ಯೆಗಳಿಗೆ ಕಾರಣರಾದ ಮತ್ತು ಫೋಟೋಗ್ರಾಫರ್‌ನ ಬರ್ಬರ ಕೃತ್ಯಗಳಲ್ಲಿ ಶಾಮೀಲಾದ ಪೋಲಿಸ್ ಸಿಬ್ಬಂದಿಯ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸಿಪಿಐ(ಎಂ) ನಿಯೋಗ ಆಗ್ರಹಿಸಿದೆ.

ಈ ನಿಯೋಗದಲ್ಲಿ ಬೃಂದಾಕಾರಟ್ ಜತೆಗೆ ಕೇಂದ್ರ ಸಮಿತಿ ಸದಸ್ಯ ಸುಪ್ರಕಾಶ್ ತಾಲುಕ್‌ದಾರ್, ಸಿಪಿಐಎಂ) ಶಾಸಕ ಮನೋರಂಜನ್ ತಾಲುಕ್‌ದಾರ್ ಮತ್ತಿತರ ರಾಜ್ಯ ಮುಖಂಡರು ಇದ್ದರು.

ಈ ಭೇಟಿಯ ನಂತರ ಬೃಂದಾ ಕಾರಟ್ ಪ್ರತಿಕಾಗೋಷ್ಠಿಯೊಂದನ್ನು ಉದ್ದೇಶಿಸಿ ತಮ್ಮ ನಿಯೋಗಕ್ಕೆ ಕಂಡು ಬಂದ ಸಂಗತಿಗಳನ್ನು ಪತ್ರಕರ್ತರಿಗೆ ತಿಳಿಸಿದರು. ಇದು ಕೇವಲ ಅಸ್ಸಾಂಗೆ ಸೀಮಿತವಾದ ಪ್ರಕರಣ ಅಲ್ಲ, ಈ ಬರ್ಬರ ಕಾರ್ಯಾಚರಣೆಯ ವಿರುದ್ಧ ರಾಜ್ಯದಲ್ಲಿ ಮತ್ತು ದೇಶದಲ್ಲೂ ಇನ್ನಷ್ಟು ಪ್ರತಿಭಟನೆಗಳು ನಡೆಯುತ್ತವೆ ಎಂದು ಅವರು ಹೇಳಿದರು.




ಅಸ್ಸಾಂನಲ್ಲಿ ಪೋಲೀಸ್ ಪಾಶವೀ ಕೃತ್ಯಗಳು
–ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಅಸ್ಸಾಂನ ದರ್ರಾಂಗ್ ಜಿಲ್ಲೆಯ ಧೋಲ್ಪುರ್–ಗೊರುಖುತಿ ಪ್ರದೇಶದಲ್ಲಿ ಪೋಲಿಸ್ ಪಾಶವೀ ಕೃತ್ಯಗಳನ್ನು ನಡೆಸಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಖಂಡಿಸಿದೆ, ಇದು ರಾಜ್ಯ–ಪ್ರಾಯೋಜಿತ ಪಾಶವೀತನ ಎಂದು ಅದು ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿದೆ.

ಪೋಲಿಸರ ನೇರ ಗೋಲೀಬಾರಿನಲ್ಲಿ ಇಬ್ಬರು ವ್ಯಕ್ತಿಗಳ ಹತ್ಯೆಯಾಗಿದೆ, ಹಲವರು ಗಾಯಗೊಂಡಿದ್ದಾರೆ. 'ಶಂಕಿತ ಕಾನೂನುಬಾಹಿರ ವಲಸೆಗಾರ'ರನ್ನು ಸರಕಾರೀ ಭೂಮಿಯಿಂದ ತೆರವುಗೊಳಿಸುವ ಹೆಸರಿನಲ್ಲಿ ಅಸ್ಸಾಂ ಸರಕಾರ ಭಾರತದ ನಾಗರಿಕರ ಮೇಲೆ, ದಶಕಗಳಿಂದ ಆ ನೆಲದಲ್ಲಿ ಉಳುಮೆ ಮಾಡುತ್ತಿದ್ದ ಬಡ ರೈತರ ಮೇಲೆ ಹಿಂಸಾಚಾರವನ್ನು ಹರಿಯ ಬಿಟ್ಟಿದೆ. ಈ ಇಡೀ ಕಾರ್ಯಕ್ರಮವನ್ನು ಕೋಮುವಾದಿ ದೃಷ್ಟಿಯಿಂದಲೇ ರೂಪಿಸಲಾಗಿದೆ, ಸಂಪೂರ್ಣವಾಗಿ ಸ್ಥಳೀಯ ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯಗಳ ವಿರುದ್ಧವೇ ಗುರಿಯಿಡಲಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಇದು ಭಾರತದ ಎಲ್ಲ ನಾಗರಿಕರಿಗೆ ಸಮಾನತೆ ಮತ್ತು ಭದ್ರತೆಯ ಸಂವಿಧಾನಿಕ ಖಾತ್ರಿಯ ಮೇಲೆ ನಡೆಸಿರುವ ನೇರ ಪ್ರಹಾರ ಎಂದು ವರ್ಣಿಸಿದೆ.

ಕ್ಯಾಮರಾದಲ್ಲಿ ಸೆರೆಯಾಗಿರುವ ರೈತರ ಮೇಲೆ ಭೀಕರ ಪಾಶವೀ ಹಲ್ಲೆಗಳಲ್ಲಿ ತೊಡಗಿದ್ದ ಪೋಲೀಸ್ ಸಿಬ್ಬಂದಿಯ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳಬೇಕಾಗಿದೆ. ಗುವಾಹಾಟಿ ಹೈಕೋರ್ಟಿನ ಹಾಲಿ ನ್ಯಾಯಾಧೀಶರೊಬ್ಬರ ಅಡಿಯಲ್ಲಿ ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು, ಎಲ್ಲ ತೆರವು ಕ್ರಮಗಳನ್ನೂ ನಿಲ್ಲಿಸಬೇಕು, ಸಾಯಿಸಲ್ಪಟ್ಟವರು ಮತ್ತು ಗಾಯಗೊಂಡವರಿಗೆ ಪರಿಹಾರ ನೀಡಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಅಸ್ಸಾಂನ ಬಿಜೆಪಿ ಸರಕಾರದ ವಿಷಕಾರೀ ಕೋಮುವಾದಿ ದ್ವೇಷ ರಾಜಕೀಯವನ್ನು ಬಯಲಿಗೆಳೆಯುವ ಮತ್ತು ಅದನ್ನು ಎದುರಿಸಿ ಹೋರಾಡುವ ಅಸ್ಸಾಂನ ಜಾತ್ಯತೀಥ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಪ್ರಯತ್ನಗಳಿಗೆ ಬೆಂಬಲ ವ್ಯಕ್ತಪಡಿಸಿದೆ.





ಸಂಪಾದಕೀಯ

ರೈತರೇ, ನಿಮ್ಮ ಹಿತಶತ್ರುವನ್ನು ಹಿಮ್ಮೆಟ್ಟಿಸಿ

ರಾಜ್ಯದ ಹಾನಗಲ್ ಮತ್ತು ಸಿಂಧಗಿ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೆ ದಿನಾಂಕ ಘೋಷಣೆಯಾಗಿದೆ. ಅಕ್ಟೋಬರ್ 30 ರಂದು ಎರಡೂ ಕ್ಷೇತ್ರಗಳಿಗೆ ಮತದಾನ ನಡೆಯಲಿದ್ದು ನವೆಂಬರ್ 2 ರಂದು ಮತ ಎಣಿಕೆ ನಡೆಯಲಿದೆ. ಮಾಜಿ ಸಚಿವ ಸಿ.ಎಂ. ಉದಾಸಿ ನಿಧನದಿಂದ ತೆರವಾಗಿರುವ ಹಾವೇರಿ ಜಿಲ್ಲೆಯ ಹಾನಗಲ್ ವಿಧಾನಸಭಾ ಕ್ಷೇತ್ರ ಮತ್ತು ಮಾಜಿ ಸಚಿವ ಎಂ.ಸಿ. ಮನಗೂಳಿ ನಿಧನದಿಂದ ತೆರವಾದ ವಿಜಯಪುರ ಜಿಲ್ಲೆಯ ಸಿಂದಗಿ ಕ್ಷೇತ್ರಕ್ಕೆ ಉಪ ಚುನಾವಣೆ ನಡೆಸಲು ಕೇಂದ್ರ ಚುನಾವಣಾ ಆಯೋಗ ಅಧಿಸೂಚನೆ ಪ್ರಕಟಿಸಿದೆ. ಉಭಯ ಕ್ಷೇತ್ರಗಳಿಗೆ ನಡೆಯಲಿರುವ ಈ ಉಪಚುನಾವಣೆಯ ಫಲಿತಾಂಶ ಮುಂದಿನ ವಿಧಾನ ಸಭಾ ಚುನಾವಣೆಗೆ ಸ್ಪಷ್ಟ ದಿಕ್ಸೂಚಿಯಾಗಲಿದೆ.

ಸಂಬಂಧಪಟ್ಟ ಈ ಎರಡೂ ಕ್ಷೇತ್ರಗಳು ವ್ಯವಸಾಯ ಪ್ರಧಾನ ಪ್ರದೇಶಗಳಾಗಿದ್ದು ಇಲ್ಲಿನ ರೈತರಿಗೂ ಇದೊಂದು ಮಹತ್ವದ ಚುನಾವಣೆ ಆಗಲಿದೆ. ನಮ್ಮ ದೇಶದ ಅನ್ನದಾತರು ದೇಶದ ಪ್ರಧಾನಿ ಮೋದಿ ಅವರ ಮಾತುಗಳಿಗೆ ಮರುಳಾಗಿ ಚುನಾವಣೆಗಳಲ್ಲಿ ಪದೇ ಪದೇ ಚುನಾಯಿಸಲ್ಪಟ್ಟಿದ್ದಾರೆ. ಮೋದಿಯವರ ಮಾತುಗಳು ಜನರನ್ನು ಮೋಡಿ ಮಾಡಿವೆ. ಅವರೊಬ್ಬ ರೈತರ ಹಿತಚಿಂತಕ ಎನ್ನುವ ಭಾವನೆ ದೇಶವನ್ನು ಆವರಿಸಿಕೊಂಡಿತ್ತು. ಆದರೆ ಅವರೊಂದು ರೈತರ ಹಿತಶತ್ರು ಸರ್ಕಾರದ ನೇತಾರರಾಗಿದ್ದಾರೆ ಎಂಬುದನ್ನು ದೇಶದ ರೈತರು ಗ್ರಹಿಸಲಾರಂಭಿಸಿದ್ದಾರೆ.

ಪ್ರಧಾನಿ ಮೋದಿಯವರ ಮಾತುಗಳನ್ನು ನಂಬಿ ಮೋಸ ಹೋದ ರೈತರು ದೇಶದ ರಾಜಧಾನಿಯ ಗಡಿಯಲ್ಲಿ ಕುಳಿತು ತಾವು ನಂಬಿದ ಪ್ರಧಾನಿಯೊಂದಿಗೆ ಮಾತನಾಡಲು ಬಯಸಿ ಶಾಂತಿಯುತ ಸತ್ಯಾಗ್ರಹದಲ್ಲಿ ತೊಡಗಿದ್ದಾರೆ. ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕೆಂದು ಅವರು ಆಗ್ರಹಿಸುತ್ತಿದ್ದಾರೆ. ಆದರೆ ರೈತರೊಂದಿಗೆ ಮುಕ್ತವಾದ ಚರ್ಚೆ ನಡೆಸಲು ಮೋದಿರವರು ಮುಂದಾಗುತ್ತಿಲ್ಲ. ಕನಿಷ್ಠ ಬೆಂಬಲ ಬೆಲೆ ಖಾತ್ರಿ ಪಡಿಸುವ ಕಾನೂನನ್ನು ಜಾರಿಗೆ ತರುವುದು ರೈತರ ಬೇಡಿಕೆಯಾಗಿದೆ. ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆಯನ್ನು ಹಾಗೂ ವಿದ್ಯುತ್ ತಿದ್ದುಪಡಿ ಕಾಯ್ದೆಯನ್ನು ಹಿಂಪಡೆಯಬೇಕೆಂಬುದು ರೈತರ ಕೋರಿಕೆಯಾಗಿದೆ. ಆದರೆ ಮೋದಿಯವರಿಗೆ ರೈತರ ಹಿತಕ್ಕಿಂತಲು ಕಾರ್ಪೊರೇಟ್ ಕಂಪನಿಗಳ ಹಿತ ಕಾಯುವುದು ಮುಖ್ಯವಾಗಿದೆ. ಕೊರೊನಾ ಹಾವಳಿಗೆ ತುತ್ತಾಗಿ ಜನ ಸಾಯುತ್ತಿದ್ದಾಗ ಮೋದಿಯವರು ಈ ರೈತ ವಿರೋಧಿ ಕಾಯ್ದೆಗಳನ್ನು ಅತ್ಯಂತ ತರಾತುರಿಯಲ್ಲಿ, ಸಂಸತ್ತಿನಲ್ಲಿ ಸರಿಯಾದ ಚರ್ಚೆಗೂ ಅವಕಾಶ ಕೊಡದೆ ಜಾರಿಗೆ ತಂದಿದ್ದಾರೆ. ಇಂತಹ ಮನುಷ್ಯತ್ವ ಇಲ್ಲದ ಪ್ರಧಾನಿಯನ್ನು ಈ ದೇಶ ಹಿಂದೆಂದೂ ಕಂಡಿರಲಿಲ್ಲ.

ಮೋದಿಯವರ ಆಡಳಿತದ ಬಗ್ಗೆ ದೇಶದ ರೈತರು ಭ್ರಮನಿರಸನಗೊಂಡಿದ್ದಾರೆ. ಕೇಂದ್ರ ಸರ್ಕಾರದ ದೇಶ ವಿರೋಧಿ ನೀತಿಗಳ ಎದುರು ಅಸಹಾಯಕರಾಗಿದ್ದಾರೆ. ಅವರ ಅತೃಪ್ತಿ ಬೆಳೆಯತೊಡಗಿದೆ. ಇತ್ತೀಚೆಗೆ ನಡೆದ 4 ರಾಜ್ಯಗಳ ವಿಧಾನ ಸಭಾ ಚುನಾವಣೆಗಳ ಫಲಿತಾಂಶದಲ್ಲಿ ಇದು ವ್ಯಕ್ತವಾಗಿದೆ. ಅದರ ಎಲ್ಲ ತಂತ್ರ ಕುತಂತ್ರಗಳಿಂದಲೂ ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ಗೆಲ್ಲಲಾಗಲಿಲ್ಲ. ತಮಿಳುನಾಡಿನಲ್ಲಿ ಬಿಜೆಪಿಗೆ ಎಐಡಿಎಂಕೆ ಜೊತೆ ಕೈಜೋಡಿಸಿಕೊಂಡರೂ ಗೆಲ್ಲಲಾಗಲಿಲ್ಲ. ಕೇರಳದಲ್ಲಿ ಒಂದೇ ಒಂದು ಸ್ಥಾನವನ್ನು ಸಹ ಬಿಜೆಪಿಗೆ ಗೆಲ್ಲಲಾಗಲಿಲ್ಲ. ಕೇವಲ ಅಸ್ಸಾಂನಲ್ಲಿ ಮಾತ್ರ ಕೇವಲ 1% ಮತಗಳ ಅಂತರದಿಂದ ಅದು ಅಧಿಕಾರವನ್ನು ಉಳಿಸಿಕೊಂಡಿದೆ.

ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ದೇಶದಲ್ಲಿ ಜನರ ಸಂಕಷ್ಟಗಳು ಹೆಚ್ಚಾಗಿವೆ. ಬಡವರ ಮತ್ತು ಶ್ರೀಮಂತರ ನಡುವಿನ ಅಂತರ ಹೆಚ್ಚಾಗಿವೆ. ಬಡವರ ಬದುಕು ಅಸಹನೀಯವಾಗುತ್ತಿದೆ. ನಿರುದ್ಯೋಗ ಸ್ಫೋಟಕ ಹಂತಕ್ಕೆ ಹತ್ತಿರವಾಗುತ್ತಿದೆ. ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರಗಳಿಗೆ ತಡೆ ಇಲ್ಲದಂತಾಗಿದೆ. ದಲಿತರ ಮೇಲಿನ ದೌರ್ಜನ್ಯಗಳು ವ್ಯಾಪಕಗೊಂಡಿವೆ. ಅಲ್ಪಸಂಖ್ಯಾತರ ಮೇಲಿನ ದಾಳಿ ದಮನಗಳಿಂದಾಗಿ ಆ ಸಮುದಾಯದ ಯುವಕರಲ್ಲಿ ಸೇಡಿನ ಪ್ರವೃತ್ತಿ ಆತಂಕಕಾರಿಯಾಗಿ ಬೆಳೆಯುತ್ತಿದೆ. ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಈ ಬೆಳವಣಿಗೆಗಳ ಕುರಿತು ತಲೆ ಕೆಡಿಸಿಕೊಳ್ಳುತ್ತಿಲ್ಲ.

"ಹೌದೋ ಬಸವಣ್ಣಾ, ಹೌದು, ಅಲ್ಲವೋ ಬಸವಣ್ಣಾ, ಅಲ್ಲಾ" ಎನ್ನುವ ಸರ್ಕಾರ ರಾಜ್ಯದಲ್ಲಿದೆ, ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಅನ್ಯಾಯವಾಗುತ್ತಿದ್ದರೂ ಮುಖ್ಯಮಂತ್ರಿ ಏನನ್ನೂ ಕೇಳುವಂತಿಲ್ಲ. ನೂರಕ್ಕೂ ಹೆಚ್ಚು ತಾಲೂಕುಗಳು ಭೀಕರ ಮಳೆ ಮತ್ತು ಪ್ರವಾಹದಿಂದ ಹಾನಿ ಅನುಭವಿಸಿವೆ. ಬಿದ್ದು ಹೋದ ಅವರ ಮನೆಗಳು, ಕೊಚ್ಚಿ ಹೋದ ಜಾನುವಾರುಗಳು, ನಾಶವಾದ ಬೆಳೆಗಳಿಗೆ ಇದುವರೆಗೂ ಪರಿಹಾರ ಸಿಕ್ಕಿಲ್ಲ. ಕೊರೊನಾ ಹಾವಳಿಗೆ ತುತ್ತಾದ ಕುಟುಂಬಗಳಿಗೆ ಕೊಟ್ಟ ಭರವಸೆ ಪ್ರಕಾರ ಇದುವರೆಗೂ ಯಾವುದೇ ಆರ್ಥಿಕ ನೆರವು ಸಿಕ್ಕಿಲ್ಲ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರುವ, ಯೋಜನೆಯನ್ನು ವಿಸ್ತರಿಸುವ, ವೇತನವನ್ನು ಹೆಚ್ಚಿಸುವ ಎಳ್ಳಷ್ಟು ಕಾಳಜಿ ಸರ್ಕಾರಕ್ಕಿಲ್ಲ.

ಬೊಮ್ಮಾಯಿ ಸರ್ಕಾರ ಕೇಂದ್ರ ಸರ್ಕಾರದ ಧೋರಣೆಗಳಿಗೆ ಬದ್ಧವಾಗಿರುವ ಸರ್ಕಾರ. ಅದರ ಧೋರಣೆಗಳು ಬದಲಾಗರಾರವು. ಆದ್ದರಿಂದ ರೈತರಿಗೆ, ಕಾರ್ಮಿಕರಿಗೆ ಉಳಿದಿರುವುದು ಒಂದೇ ಮಾರ್ಗ, ಅದು ಈ ಸರ್ಕಾರವನ್ನು ಕಿತ್ತುಹಾಕುವುದು. ಸರ್ಕಾರದ ನೀತಿಗಳು ಜನಪರವಾಗಿ ಬದಲಾಗದಿದ್ದರೆ ಅಂತಹ ಸರ್ಕಾರವನ್ನೇ ಬದಲಾಯಿಸುವುದು ಅನಿವಾರ್ಯವಾಗಲಿದೆ. ದೇಶದ ರೈತರು ಆ ಅಂತಿಮ ಘಟ್ಟಕ್ಕೆ ತಲುಪಿದಂತೆ ಭಾಸವಾಗುತ್ತಿದೆ.

ಕರ್ನಾಟಕದಲ್ಲಿ 2 ವಿಧಾನ ಸಭಾ ಕ್ಷೇತ್ರಗಳಿಗೆ ನಡೆಯುತ್ತಿರುವ ಉಪಚುನಾವಣೆಗಳು ಬೊಮ್ಮಾಯಿ ಸರ್ಕಾರಕ್ಕೆ ಒಂದು ಎಚ್ಚರಿಕೆಯ ಗಂಟೆಯಾಗಬೇಕು. 10 ತಿಂಗಳಿಂದ ಶಾಂತಿಯುತವಾದ ಹೋರಾಟ ನಡೆಸುತ್ತಿರುವ ರೈತರ ಮತ್ತು ಕೃಷಿ ಕೂಲಿಕಾರರು ಸೆಪ್ಟಂಬರ್ 27 ರಂದು 'ಭಾರತ್ ಬಂದ್' ಆಚರಿಸುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಅಹಿಂಸಾತ್ಮಕ ಹೋರಾಟವನ್ನು ಸರ್ಕಾರ ಬಲವಂತದ ಕ್ರಮಗಳಿಂದ ನಾಶಮಾಡಲು ಹೊಂಚುಹಾಕುತ್ತಿದೆ. ಇದರಿಂದ ಮೋದಿ ಸರ್ಕಾರ ರೈತರ ಹಿತೈಷಿ ಸರ್ಕಾರವಲ್ಲ ಎಂಬುದು ಸ್ಪಷ್ಟವಾಗುತ್ತದೆ. ಈ ಸರ್ಕಾರಕ್ಕೆ ರೈತರೆಲ್ಲರೂ ಕೂಡಿ ಪಾಠ ಕಲಿಸಬೇಕಾಗಿದೆ. ಮೋದಿ ಸರ್ಕಾರ ರೈತರ ಹಿತ ರಕ್ಷಕ ಸರ್ಕಾರವಲ್ಲ. ಅದು ರೈತರ ಹಿತಶತ್ರು. ಹಾನಗಲ್ ಮತ್ತು ಸಿಂಧಗಿ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಬಿಜೆಪಿಯನ್ನು ಹಿಮ್ಮೆಟ್ಟಿಸಿ ತಕ್ಕ ಪಾಠ ಕಲಿಸಬೇಕು. ಮುಂದಿನ ವಿಧಾನಸಭಾ ಚುನಾವಣೆಗೆ ಇದು ಮೊದಲ ಮೆಟ್ಟಿಲು ಆಗಬೇಕು.

ಮಂಗಳೂರಿನಲ್ಲಿ ಹೆಚ್ಚಾಗುತ್ತಿದೆ ಅನೈತಿಕ ಪೊಲೀಸ್‌ಗಿರಿ ಸಂಘಪರಿವಾರದವರ ಬಗ್ಗೆ ಪೊಲೀಸರಿಗೆ ಸಾಫ್ಟ್ ಕಾರ್ನರ್ ಯಾಕೆ?

ಮಂಗಳೂರಿನಲ್ಲಿ ದಿನೇ ದಿನೇ ಹೆಚ್ಚಾಗುತ್ತಿದೆ ಅನೈತಿಕ ಪೊಲೀಸ್ ಗಿರಿ. ಪೊಲೀಸರ ಎದುರಿನಲ್ಲಿಯೇ ನಡೆಯುತ್ತಿದೆ ಸಂಘಪರಿವಾರದ ಗೂಂಡಾಗಿರಿ, ಆರೋಪಿಗಳ ಬಗ್ಗೆ ಸರಕಾರಕ್ಕೆ ಸಾಫ್ಟ್ ಕಾರ್ನರ್ ಯಾಕೆ ಇದೆ? ಸಂಘಪರಿವಾರದವರ ಗುಂಡಾಗಿರಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದನ್ನು ತೋರಿಸುತ್ತಿದೆಯಾ? ಎಂಬ ಪ್ರಶ್ನೆಗಳು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿವೆ.

ಮಂಗಳೂರಿನಲ್ಲಿ ಮತ್ತೆ ಅನೈತಿಕ ಪೊಲೀಸ್ ಗಿರಿ ಸದ್ದು ಮಾಡಿದೆ. ದೇರಳಕಟ್ಟೆಯ ಖಾಸಗಿ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳ ಮೇಲೆ ಬಜರಂಗದಳದ ಕಾರ್ಯಕರ್ತರು ಹಲ್ಲೆಯನ್ನು ನಡೆಸಿದ್ದಾರೆ. ಮಂಗಳೂರಿನ ಕೆ ಎಸ್ ಹೆಗ್ಡೆ ಮೆಡಿಕಲ್ ಕಾಲೇಜಿನ ಕ್ರಿಶ್ಚಿಯನ್ –ಮುಸ್ಲಿಂ ಯುವಕ–ಯುವತಿಯರು ಸೇರಿ ಒಟ್ಟು 6 ಜನ ಸ್ನೇಹಿತರು ರವಿವಾರ ಸಾಯಂಕಾಲ ಮಲ್ಪೆ ಬೀಚ್ ಗೆ ಹೋಗಿ ವಾಪಸ್ ಬರುವಾಗ ಮಂಗಳೂರಿನ ಸುರತ್ಕಲ್ ಟೋಲ್‌ಗೇಟ್ ಬಳಿ ಭಜರಂಗ ದಳ ಕಾರ್ಯಕರ್ತರು ಕಾರನ್ನು ತಡೆದು ಹಲ್ಲೆಯನ್ನು ನಡೆಸಿದ್ದಾರೆ. ಸ್ಥಳದಲ್ಲೆ ಇದ್ದ ಪೊಲೀಸ್ ಅಧಿಕಾರಿಯೊಬ್ಬರು ಹಲ್ಲೆ ನಡೆಸದಂತೆ ಮನವಿ ಮಾಡಿದ್ರೂ ಅದಕ್ಕೆ ಸ್ಪಂದಿಸದೆ ಹಲ್ಲೆಯನ್ನು ನಡೆಸಲು ಮುಂದಾಗುತ್ತಾರೆ. ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ. ಸಧ್ಯ ಆ ವಿಡಿಯೋ ವೈರಲ್ ಆಗಿದ್ದು, ಬಜರಂಗದಳದ ಕಾರ್ಯಕರ್ತರ ವರ್ತನೆಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.

ಘಟನೆಗೆ ಸಂಬಂಧಿಸಿದಂತೆ 5 ಮಂದಿಯನ್ನು ಬಂಧಿಸಲಾಗಿದೆ. ಭಜರಂಗದಳ ಜಿಲ್ಲಾ ಮುಖಂಡರಾದ ಅರ್ಶಿತ್, ಪ್ರೀತಂ ಶೆಟ್ಟಿ, ಶ್ರೀನಿವಾಸ್, ರಾಕೇಶ್ ಮತ್ತು ಅಭಿಷೇಕ್ ಅವರನ್ನು ಬಂಧಿಸಿ ಸೆಕ್ಷನ್ 341, 323 ಅಡಿಯಲ್ಲಿ ಕೇಸು ದಾಖಲಿಸಲಾಗಿದೆ. ಬಂದಿತರನ್ನು ವಿಚಾರಣೆ ನಡೆಸಿ ಕೆಲವೇ ಘಂಟೆಗಳಲ್ಲಿ ಬಿಡುಗಡೆ ಮಾಡಲಾಗಿದೆ. ಇದು ಸಾಕಷ್ಟು ಪ್ರಶ್ನೆಯನ್ನು ಹುಟ್ಟಿಹಾಕಿದೆ. ಪೊಲೀಸ್ ಅಧಿಕಾರಿಯ ಸಮ್ಮುಖದಲ್ಲಿಯೇ ಹಲ್ಲೆ ನಡೆಸಿರುವ ಸಾಕ್ಷಿ ಇರುವಾಗ ಇವರನ್ನು ಠಾಣೆಯಲ್ಲೆ ಜಾಮೀನು ಪಡೆದ ಬಿಟ್ಟಿದ್ದು ಯಾಕೆ? ಪೊಲೀಸರು ಈ ವಿಚಾರದಲ್ಲಿ ಸಾಫ್ಟ್ ಕಾರ್ನರ್ ತೋರಿದಂತೆ ಕಾಣುತ್ತಿದೆ. ಯಾಕೆ ಅಂದ್ರೆ ಅವರ ಮೇಲೆ ಹಾಕಿರುವ ಸೆಕ್ಷನ್ ಗಳನ್ನು ಗಮನಿಸಿದರೆ ಅದು ನಮಗೆ ಗೊತ್ತಾಗುತ್ತದೆ. ದುರ್ಬಲವಾದ ಸೆಕ್ಷನ್‌ಗಳನ್ನು ಹಾಕಿ ಬಿಡುಗಡೆ ಮಾಡಿದ್ದರೆ. ಪೊಲೀಸರ ಈ ಕ್ರಮ ಅಪರಾಧಿಗಳು ಇನ್ನಷ್ಟು ಬಲಗೊಳ್ಳುವದಕ್ಕೆ ಕಾರಣವಾಗುತ್ತದೆ ಎಂಬುದು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿರುವ ಆರೋಪವಾಗಿದೆ.

ಇದೇ ವರ್ಷ ಆಗಸ್ಟ್ 27 ರಂದು ಅನೈತಿಕ ಪೊಲೀಸ್‌ಗಿರಿ ನಡೆದಿತ್ತು, ಮಂಗಳೂರಿನ ಕಾಲೇಜೊಂದರ ಅನ್ಯ ಕೋಮಿನ ವಿದ್ಯಾರ್ಥಿಗಳ ಜೊತೆ, ಇನ್ನೊಂದು ಕೋಮಿನ ವಿದ್ಯಾರ್ಥಿನಿಯರು ಗುಡ್ಡದಲ್ಲಿರುವ ದೇವಾಲಯಕ್ಕೆ ಸಂಜೆಯ ಹೊತ್ತು ಪ್ರವಾಸಕ್ಕೆಂದು ಹೋಗಿದ್ದರು. ಈ ವೇಳೆ ವಿದ್ಯಾರ್ಥಿಗಳನ್ನು ತಡೆದ ಹಿಂದೂ ಸಂಘಟನೆಯ ಕಾರ್ಯಕರ್ತರು ವಿದ್ಯಾರ್ಥಿಗಳನ್ನು ತಡೆದು ಅನ್ಯ ಕೋಮಿನ ಯುವಕರ ಮೇಲೆ ಹಲ್ಲೆ ನಡೆಸಿದ್ದಾರು. ಈ ಘಟನೆಗೆ ಸಂಬಂಧಿಸಿದಂತೆ ಮೂವರನ್ನು ಬಂಧಿಸಲಾಗಿತ್ತು. ಇಂತಹ ಪ್ರಕರಣಗಳು ಹೆಚ್ಚಾಗುತ್ತಿರುವುದು ನಿಜಕ್ಕೂ ಮಂಗಳೂರಿಗರನ್ನು ಮತ್ತು ಮಂಗಳೂರಿಗೆ ಪ್ರವಾಸಕ್ಕೆ ಹೋಗುವವರಿಗೆ ಆತಂಕವನ್ನು ತಂದೊಡ್ಡಿವೆ.

ಈ ಘಟನೆಯನ್ನು ವಿಪಕ್ಷ ನಾಯಕ ಸಿದ್ಧರಾಮಯ್ಯ ಖಂಡಿಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿದ್ದಾರೆ. "ಸನ್ಮಾನ್ಯ ಮುಖ್ಯಮಂತ್ರಿ ಅವರೇ ಮಂಗಳೂರಿನಲ್ಲಿ ಇರುವುದು ಬಿಜೆಪಿ ಸರ್ಕಾರನಾ?, ತಾಲಿಬಾನ್‌ಗಳದ್ದಾ?" ಎಂದು ಪ್ರಶ್ನೆ ಮಾಡಿದ್ದಾರೆ. ಸರಕಾರ ಯಾಕೆ ಅನೈತಿಕ ಪೊಲೀಸ್ ಗಿರಿಯನ್ನು ನಿಯಂತ್ರಿಸುತ್ತಿಲ್ಲ ಎಂದು ಅಪಾದನೆ ಮಾಡಿದ್ದಾರೆ. ಇನ್ನೂ ಈ ಘಟನೆಗೆ ಸಂಬಂಧಿಸಿದಂತೆ ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಪ್ರತಿಕ್ರಿಯೆ ನೀಡಿದ್ದು, ಗೂಂಡಾಧಾರಿಗಳ ಹಿಂದೆ ಸುರತ್ಕಲ್ ಶಾಸಕ ಭರತ್ ಶೆಟ್ಟಿ, ಸಂಸದ ನಳಿನ್ ಕುಮಾರ್ ಕಟೀಲ್ ಬೆಂಬಲವಾಗಿ ನಿಂತಿದ್ದಾರೆ. ಪೊಲೀಸರ ಕೈ ಕಟ್ಟಿ ಹಾಕಿ, ಮತೀಯ ಕ್ರಿಮಿನಲ್ ಗಳನ್ನು ವಿಜೃಂಭಿಸಲು ಅವಕಾಶ ಮಾಡಿಕೊಡುವುದು ಕರಾವಳಿ ಜಿಲ್ಲೆಯ ದುರಂತವಾಗಿದೆ. ಎಂದು ಮುನೀರ್ ಪ್ರತಿಕ್ರಿಯೆ ನೀಡಿದ್ದಾರೆ.

ಈ ಎಲ್ಲಾ ಬೆಳವಣಿಗೆಯನ್ನು ಗಮನಿಸುತ್ತಿದ್ದರೆ, ಮಂಗಳೂರಿನಲ್ಲಿ ಸಂಘಪರಿವಾರದವರ ಪುಂಡಾಟಿಕೆ ಹೆಚ್ಚಾಗುತ್ತಿರುವುದನ್ನು ತೋರಿಸುತ್ತಿದೆ. ಮುಖ್ಯಮಂತ್ರಿ ಮತ್ತು ಗೃಹ ಸಚಿವರು ಅನೈತಿಕ ಪೊಲೀಸ್‌ಗಿರಿ, ಗೂಂಡಾಗಿರಿಯನ್ನು ತಡೆಗಟ್ಟಲು ಮುಂದಾಗಬೇಕಿದೆ. ಸೌಹಾರ್ದ ಕರ್ನಾಟಕವನ್ನು ಉಳಿಸಲು ಮುಂದಾಗಬೇಕಿದೆ.

ದಲಿತರಿಗೆ ಭೂಮಿ ಹಕ್ಕಿಗಾಗಿ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನೆ



ದಲಿತ ಬಗರ್ ಹುಕುಂ ಸಾಗುವಳಿದಾರರ ಮೇಲೆ ನಡೆಯುತ್ತಿರುವ ಭೂಮಿ ದೌರ್ಜನ್ಯಗಳನ್ನು ಖಂಡಿಸಿ ಗುರುವಾರದಂದು ದಲಿತ ಹಕ್ಕುಗಳ ಸಮಿತಿ ಹಾಗೂ ಕರ್ನಾಟಕ ರಾಜ್ಯ ಶೋಷಿತ ಸಮುದಾಯಗಳ ವೇದಿಕೆ ವತಿಯಿಂದ ತುಮಕೂರು ಜಿಲ್ಲಾಧಿಕಾರಿಗಳ ಕಛೇರಿ ಎದುರು ಬೃಹತ್ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು.

ರಾಜ್ಯ ಸಂಚಾಲಕ ಗೋಪಾಲಕೃಷ್ಣ ಹರಳಹಳ್ಳಿ ಮಾತನಾಡಿ, ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ದಲಿತರಿಗೆ ಭೂಮಿ ಸಿಗುತ್ತಿಲ್ಲ, ಭೂಮಿಯ ಮೇಲಿನ ಹಕ್ಕು ದೊರೆಯದೇ ಭೂಮಿಯನ್ನು ಬಲಾಢ್ಯರ ಅತಿಕ್ರಮಣದಿಂದ ರಕ್ಷಿಸಿಕೊಳ್ಳಲು ಆಗದೇ, ಪೊಲೀಸ್ ಠಾಣೆಗಳಲ್ಲಿ ರಕ್ಷಣೆಯೂ ಸಿಗದೆ ಬಡ ದಲಿತರು ಒದ್ದಾಡುತ್ತಿದ್ದಾರೆ. ಶೀಘ್ರವೇ ಸಮಿತಿ ಸಭೆಯನ್ನು ಕರೆದು ದಲಿತ ಉಳಿಮೆದಾರರಿಗೆ ಭೂಮಿ ಹಕ್ಕಿನ ಒಡೆತನ ಕೊಡಬೇಕು? ಎಂದು ಒತ್ತಾಯಿಸಿದರು.

ತುಮಕೂರು ಜಿಲ್ಲಾ ಸಂಚಾಲಕ ರಾಜು ವೆಂಕಟಪ್ಪ, ಇತ್ತೀಚೆಗೆ ಕುಣಿಗಲ್ ತಾಲ್ಲೂಕಿನಲ್ಲಿ ಬಗರ್ ಹುಕುಂ ಭೂಮಿ ವ್ಯಾಜ್ಯಗಳು ಹೆಚ್ಚುತ್ತಿದೆ ಪೊಲೀಸ್ ಇಲಾಖೆ ಹಾಗೂ ಕಂದಾಯ ಇಲಾಖೆ ಪರಸ್ಪರ ವಿಳಂಬ ನೀತಿ ಅನುಸರಿಸುತ್ತಿವೆ, ಪೊಲೀಸ್ ಠಾಣೆಯಲ್ಲಿ ನೊಂದವರಿಗೆ ಅದರಲ್ಲೂ ದಲಿತರ ದೂರುಗಳು ವಿಳಂಬವಾಗುತ್ತಿವೆ, ಇದರಿಂದ ಸಮಸ್ಯೆ ಬಗೆಹರಿಯದೆ ಗ್ರಾಮೀಣ ಭಾಗದಲ್ಲಿ ಶಾಂತಿ ಸೌಹಾರ್ದತೆ ಹಾಳಾಗಿ ಜಾತಿ ವೈಷಮ್ಯಕ್ಕೆ ಕಾರಣವಾಗುತ್ತಿದೆ. ಆದ್ದರಿಂದ ಪೊಲೀಸ್ ಅಧಿಕಾರಿಗಳು ಹಾಗೂ ತಾಲ್ಲೂಕು ಆಡಳಿತ ತಕ್ಷಣ ಮಧ್ಯ ಪ್ರವೇಶಿಸಿ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ತಿಳಿಸಿದರು.

ಸಂಘಟನೆಗಳ ವತಿಯಿಂದ ನೊಂದ ದಲಿತರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಪ್ರತಿಭಟನೆಯ ಮೂಲಕ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಶೋಷಿತ ಸಮುದಾಯಗಳ ವೇದಿಕೆ ಜಿಲ್ಲಾಧ್ಯಕ್ಷರಾದ ಪ್ರಶಾಂತ್ ಕುಮಾರ್, ಕುಣಿಗಲ್ ತಾಲ್ಲೂಕು ಅಧ್ಯಕ್ಷರಾದ ಶಿವರಾಜು ಜಿ.ಬಿ, ತಿಮ್ಮಪ್ಪ ಟಿ.ಎಮ್, ಗೌರಮ್ಮ, ದಲಿತ ಹಕ್ಕುಗಳ ಸಮಿತಿ ರಾಜ್ಯ ಸಮಿತಿ ಸದಸ್ಯ ಹೆಚ್. ಜಿ.ನಾಗಣ್ಣ, ಶ್ರೀನಿವಾಸ್ ಕಗ್ಗೆರೆ, ಶ್ರೀನಿವಾಸ್ ಯಲಿಯೂರು, ಗೋವಿಂದರಾಜು ಮಾದಿಹಳ್ಳಿ, ರಾಜು ತುವ್ವೇಕೆರೆ ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.





ಆಟೋರಿಕ್ಷಾಗಳಿಗೆ ಮೀಟರ್ ದರ ಹೆಚ್ಚಿಸಲು ಎಆರ್‌ಡಿಯು ಆಗ್ರಹ

ಪ್ರಸಕ್ತ ನಗರದಲ್ಲಿ ಎರಡು ಲಕ್ಷ ಆಟೋ ಚಾಲಕರುಗಳಿದ್ದು, ಇವರನ್ನು ನಂಬಿಕೊಂಡು ಅವರ ಕುಟುಂಬಗಳು ಮತ್ತು ಇತರೆ ಅವಲಂಬಿತರು ಸೇರಿ ಸುಮಾರು 10 ಲಕ್ಷ ಕುಟುಂಬಗಳು ಬದುಕು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಬೆಲೆ ಏರಿಕೆಯ ಪರಿಣಾಮವಾಗಿ ಜೀವನ ದುಸ್ತರವಾಗಿದೆ ಕೂಡಲೇ ಸಾರಿಗೆ ಸಚಿವರು ಮಧ್ಯಪ್ರವೇಶಿಸಿ ಆಟೋ ಮೀಟರ್ ದರ ಹೆಚ್ಚಿಸಬೇಕೆಂದು ಎಆರ್‌ಡಿಯು ಸಂಘಟನೆ ಆಗ್ರಹಿಸಿದೆ.

ಆಟೋ ಚಾಲಕ ವರ್ಗಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಯಾವುದೇ ಸೌಲಭ್ಯಗಳು ಸಿಗುತ್ತಿಲ್ಲ. ಬದಲಾಗಿ ಈ ವರ್ಗದ ಮೇಲೆ ಹಲವಾರು ರೀತಿಯಲ್ಲಿ ಬೆಲೆ ಏರಿಕೆಯ ಪರಿಣಾಮವಾಗಿ ಇಂದಿನ ಬದುಕು ಕಷ್ಟಕರವಾಗಿದೆ. ಅಲ್ಲದೆ, ಆಟೋ ಮೀಟರ್‌ನ ಈಗಿನ ದರ ಬೆಲೆ ಏರಿಕೆಗೆ ಅನುಗುಣವಾಗಿಲ್ಲ ಎಂದು ಆರೋಪಿಸಿದ್ದಾರೆ.

ಕೇಂದ್ರ ಸರ್ಕಾರ, ವಾಹನಗಳಿಗೆ ಉಪಯೋಗಿಸುವ ಇಂಧನಗಳಾದ ಪೆಟ್ರೋಲ್, ಡೀಸೆಲ್, ಆಟೋ ಎಲ್‌ಪಿಜಿ ದರಗಳನ್ನು ಜಾಗತೀಕರಣದಿಂದಾಗಿ ಅಂತರಾಷ್ಟ್ರೀಯ ಮಾರುಕಟ್ಟೆ ಅನುಸಾರವಾಗಿ ಪ್ರತಿ ತಿಂಗಳು ಏರಿಕೆ ಮಾಡುತ್ತಿದೆ. ಇದರ ಭಾಗವಾಗಿ ಬೆಂಗಳೂರು ನಗರದಲ್ಲಿ ಆಟೋ ಎಲ್‌ಪಿಜಿ ಇಂಧನದ ಈಗಿನ ಬೆಲೆ ರೂ.57.88 ಇದೆ.

ಈಗಾಗಲೇ ಸಂಚಾರಿ ನಿಯಮ ಉಲ್ಲಂಘನೆಗಳಿಗೆ ದುಬಾರಿ ದಂಡ, ಆಹಾರ ಪದಾರ್ಥಗಳ ಬೆಲೆ ಏರಿಕೆ, ಆಟೋರಿಕ್ಷಾಗಳ ಖರೀದಿ ಬೆಲೆ, ಎಲ್‌ಪಿಜಿ ಆಟೋ ಇಂಧನ, ಆಟೋರಿಕ್ಷಾಗಳ ಬಿಡಿ ಭಾಗಗಳು, ಆಯಿಲ್, ಟೈರ್, ವಾಹನಗಳ ವಿಮಾ ಪ್ರೀಮಿಯಂ ದರ, ಆರ್‌ಟಿಓ ಶುಲ್ಕಗಳು, ಮನೆ ಬಾಡಿಗೆ, ಹಾಲಿನ ದರ, ನೀರಿನ ದರ, ವಿದ್ಯುತ್ ದರ, ಅಡುಗೆ ಅನಿಲ, ಮಕ್ಕಳ ವಿದ್ಯಾಭ್ಯಾಸದ ಖರ್ಚು, ದುಬಾರಿ ಬಡ್ಡಿ ಇನ್ನೂ ಮುಂತಾದ ದಿನ ಬಳಕೆಯ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಚಾಲಕರು ಕಷ್ಟಪಡುತ್ತಿದ್ದಾರೆ.

ಕೋವಿಡ್-19 ನಿಂದಾಗಿ ಜನರ ಆರ್ಥಿಕ ಪರಿಸ್ಥಿತಿ ಸಂಪೂರ್ಣವಾಗಿ ಹದಗೆಟ್ಟಿದೆ. ಇಂತಹ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಆಹಾರ ಪದಾರ್ಥಗಳ ಬೆಲೆಯನ್ನು ಪದೇಪದೇ ಏರಿಸುತ್ತಿದೆ. ಇದರಿಂದಾಗಿ ಉದ್ಯೋಗವಿಲ್ಲದೆ, ವೇತನಗಳಿಲ್ಲದೆ ಜನ ಜೀವನ ನಡೆಸಲು ಕಷ್ಟಪಡುತ್ತಿದ್ದಾರೆ. ಈ ಎಲ್ಲಾ ಬೆಲೆ ಏರಿಕೆಗಳು ಆಟೋ ಚಾಲಕರಾದ ನಮಗೆ ತಟ್ಟುತ್ತಿವೆ ಎಂದು ಎಆರ್‌ಡಿಯು ಸಂಘಟನೆಯು ತಿಳಿಸಿದೆ.

ಈ ಬೆಲೆ ಏರಿಕೆ ಸರ್ಕಾರದ ಕಣ್ಣಿಗೆ ಕಾಣುವುದಿಲ್ಲವೆ? ಇದು ಸಾರ್ವಜನಿಕರಿಗೆ ಹೊರೆಯಲ್ಲವೆ? ಸರ್ಕಾರ ಆಟೋರಿಕ್ಷಾ ಮೀಟರ್ ದರ ಹೆಚ್ಚಳ ಮಾಡಿ ಎಂಟು (30 ಡಿಸೆಂಬರ್ 2013) ವರ್ಷಗಳು ಕಳೆದಿವೆ. ಈಗಲಾದರೂ ಮೀಟರ್ ದರವನ್ನು ಹೆಚ್ಚಿಸಲು ಎಆರ್‌ಡಿಯು ಮನವಿ ಮಾಡಿದೆ.

ಬೆಲೆ ಏರಿಕೆಗೆ ಅನುಗುಣವಾಗಿ ಮೀಟರ್ ದರ ಹೆಚ್ಚಳ ಮಾಡುವ ಅಧಿಕಾರ ಸಂಬಂಧಪಟ್ಟ ಸಾರಿಗೆ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳಿಗೆ ಇರುತ್ತದೆ. ಹಾಗಾಗಿ ಈ ವಿಚಾರವಾಗಿ ಸಾರಿಗೆ ಸಚಿವರ ಮಧ್ಯಪ್ರವೇಶಿಸಿ ಕ್ರಮಕ್ಕೆ ಮುಂದಾಗಬೇಕೆಂದು ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್(ಎಆರ್‌ಡಿಯು)(ರಿ) (ಸಿಐಟಿಯು ಸಂಯೋಜಿತ) ಜಿಲ್ಲಾ ಸಮಿತಿ ಅಧ್ಯಕ್ಷ ಮೀನಾಕ್ಷಿ ಸುಂದರಂ ಹಾಗೂ ಪ್ರಧಾನ ಕಾರ್ಯದರ್ಶಿ ಸಿ.ಎನ್.ಶ್ರೀನಿವಾಸ್ ಸರ್ಕಾರವನ್ನು ಆಗ್ರಹಿಸಿದ್ದಾರೆ.

ನರೇಗಾ ಕೂಲಿಯಲ್ಲೂ ಮೋಸ: ದಿನಕ್ಕೆ 100 ರೂ. ಕೊಡುತ್ತಿದ್ದಾರೆಂದು ಕಾರ್ಮಿಕರಿಂದ ಪ್ರತಿಭಟನೆ



ಬೆಳಗಾವಿ ಜಿಲ್ಲೆಯ ಕಡೋಲಿ ಗ್ರಾಮದ ಹತ್ತಿರ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ(ನರೇಗಾ)ಯಡಿ ಕೆಲಸ ಮಾಡುವ ಕಾರ್ಮಿಕರಿಗೆ ದಿನಕ್ಕೆ ಕೇವಲ 100 ರೂಪಾಯಿ ವೇತನ ನೀಡಲಾಗುತ್ತಿದೆ ಎಂದು ಕಾರ್ಮಿಕರು ತಮಗಾಗುತ್ತಿರುವ ಮೋಸದ ಬಗ್ಗೆ ವಿವರಿಸಿದ್ದಾರೆ.

ನರೇಗಾ ಯೋಜನೆಯಡಿ ಸರ್ಕಾರದ ನಿಗದಿ ಮಾಡಿರುವುದು ದಿನಕ್ಕೆ 289 ರೂಪಾಯಿ ವೇತನವನ್ನು ನೀಡಬೇಕೆಂದು ಆದರೆ ಅದಕ್ಕಿಂತ ಕಡಿಮೆ ನೀಡಲಾಗುತ್ತಿದೆ ಎಂದು ಗ್ರಾಮ ಪಂಚಾಯಿತಿ ಕಚೇರಿ ಎದುರು ನಿನ್ನೆ ಪ್ರತಿಭಟನೆ ನಡೆಸಿದ್ದಾರೆ. ಕಡೋಲಿ ಗ್ರಾಮ ಪಂಚಾಯತ್‌ನಲ್ಲಿ 2,000 ಕ್ಕೂ ಹೆಚ್ಚು ಸಕ್ರಿಯ ಕಾರ್ಮಿಕರು ನರೇಗಾ ಯೋಜನೆಗೆ ನೋಂದಾಯಿಸಿಕೊಂಡಿದ್ದಾರೆ. ಕೆರೆ ಅಭಿವೃದ್ಧಿ, ಕಾಲುವೆಗಳು, ನದಿಗಳು ಮತ್ತು ಸರೋವರಗಳ ನಿರ್ಜಲೀಕರಣ, ಸ್ವಚ್ಛಗೊಳಿಸುವಿಕೆ ಮತ್ತು ಹೊಸ ಕಂದಕಗಳನ್ನು ರಚಿಸುವುದು, ಅರಣ್ಯ ಪ್ರದೇಶಗಳಲ್ಲಿ ನೀರಿನ ಟ್ಯಾಂಕ್‌ಗಳನ್ನು ನಿರ್ಮಿಸುವ ಕೆಲಸ ಮಾಡುತ್ತಾರೆ.

ಕಾರ್ಮಿಕರ ಪ್ರಕಾರ, ಅರಣ್ಯ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಹಗಲಿರುಳು ಕೆಲಸ ಮಾಡುತ್ತಿದ್ದರೂ ಅವರಲ್ಲಿ ಹಲವರಿಗೆ ದಿನಕ್ಕೆ 100 ರೂಪಾಯಿ ವೇತನ ನೀಡಲಾಗಿದೆ. ತಮಗೆ ನೀಡಲಾಗುತ್ತಿರುವ ವೇತನ ಸಾಲುತ್ತಿಲ್ಲ ಎಂದು ಆರೋಪಿಸಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿ ಗ್ರಾಮ ಪಂಚಾಯಿತಿ ಕಚೇರಿ ಮುಂದೆ ಧರಣಿ ನಡೆಸಿದರು.

ನಿಗದಿತ ಕೂಲಿಯನ್ನು ಸರ್ಕಾರ ನಿಗದಿ ಮಾಡಿದರೂ ಸಹ ನಿಗದಿತ ಕೂಲಿಯೂ ಸಿಗುತ್ತಿಲ್ಲ ಎಂದು ಪಂಚಾಯತ್ ಅಧಿಕಾರಿಗಳನ್ನು ಕೇಳಿದರೆ ಪ್ರತಿಯೊಬ್ಬ ಕೆಲಸಗಾರರ ಕೆಲಸಕ್ಕೆ ಸರಿಯಾಗಿ ವೇತನ ನಿಗದಿ ಮಾಡಲಾಗಿದೆ ಎಂದಷ್ಟೇ ಹೇಳುತ್ತಿದ್ದಾರೆ. ಆದರೆ ಗ್ರಾಮಸ್ಥರು ತಮಗೆ ಕಡಿಮೆ ವೇತನ ನೀಡಲಾಗುತ್ತಿದೆ ಎಂದಿದ್ದಾರೆ.

ಕಡೋಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸ್ವಲ್ಪ ಸಮಯದವರೆಗೆ ಯಾವುದೇ ಉದ್ಯೋಗಗಳು ಇರಲಿಲ್ಲ, ಈ ಕಾರ್ಮಿಕರು ಉದ್ಯೋಗಗಳಿಗಾಗಿ 20 ಕಿಮೀ ದೂರ ಹೋಗಬೇಕಾಗಿತ್ತು. ಕಾರ್ಮಿಕರಿಗೆ ದಿನನಿತ್ಯದ ವೇತನವಾಗಿ 275 ರೂಪಾಯಿ, ಉದ್ಯೋಗ ಕಾರ್ಡ್ ಹೊಂದಿರುವ ಪ್ರತಿ ಕುಟುಂಬಕ್ಕೂ 100 ದಿನಗಳ ಕೆಲಸ ನೀಡಲಾಗುತ್ತದೆ. ಆದರೆ, ಕೆಲವು ಪಂಚಾಯಿತಿ ಅಧಿಕಾರಿಗಳು ವಿವಿಧ ಕಾರಣಗಳನ್ನು ಮುಂದಿಟ್ಟುಕೊಂಡು ವೇತನವನ್ನು ಕಡಿತಗೊಳಿಸುತ್ತಿದ್ದಾರೆ.

ಪಂಚಾಯತ್ ಅಧಿಕಾರಿಗಳು ಮತ್ತು ಕೆಲಸದ ಮೇಲ್ವಿಚಾರಣೆ ಮಾಡಿದ ಎಂಜಿನಿಯರ್ ಕಡಿಮೆ ವೇತನ ನೀಡುವ ನಿರ್ಧಾರವನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರು, ಕಾರ್ಮಿಕರು ಕೆಲಸದ ಪ್ರಮಾಣವನ್ನು ಪೂರ್ಣಗೊಳಿಸಿಲ್ಲ. ಆದರೆ, ಕೆಲಸಗಳು ನಡೆಯುತ್ತಿರುವಾಗ ಎಂಜಿನಿಯರ್ ಮತ್ತು ಪಂಚಾಯತ್ ಅಧಿಕಾರಿಗಳು ಕೆಲಸದ ಸ್ಥಳಕ್ಕೆ ಭೇಟಿ ನೀಡಲಿಲ್ಲ ಎಂದು ಕಾರ್ಮಿಕರು ಆರೋಪಿಸುತ್ತಾರೆ.

ನಾವು ಯಾವುದೇ ಕೆಲಸವನ್ನು ಮಧ್ಯದಲ್ಲಿ ಬಿಡಲಿಲ್ಲ. ನಮಗೆ ವಹಿಸಿದ ಕೆಲಸ ಪೂರ್ಣಗೊಳಿಸಿದ್ದೇವೆ. ಈ ಬಾರಿ ಯಾವುದೇ ಕಾರಣವಿಲ್ಲದೆ ಅಧಿಕಾರಿಗಳು ನಮ್ಮ ವೇತನವನ್ನು ಕಡಿತಗೊಳಿಸಿದ್ದಾರೆ. ತಮ್ಮ ತಪ್ಪಿನ ಅರಿವಾದ ನಂತರ, ಇಂಜಿನಿಯರ್ ಈಗ ನಮಗೆ ಸಂಪೂರ್ಣ ವೇತನದ ಭರವಸೆ ನೀಡಿದ್ದಾರೆ. ಅಲ್ಲದೆ, ಮಾಡಿದ ಕೆಲಸಗಳನ್ನು ಪರಿಶೀಲಿಸುವುದಾಗಿ ಪಂಚಾಯತ್ ಅಧಿಕಾರಿಗಳು ತಿಳಿಸಿರುತ್ತಾರೆ.

ಈ ಬಗ್ಗೆ ಮಾಧ್ಯಮಗಳು ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಜಿಲ್ಲಾ ಪಂಚಾಯತ್ ಸಿಇಒ ದರ್ಶನ್ ಎಚ್ ವಿ ಅವರನ್ನು ಹಲವು ಸಂಪರ್ಕಿಸಲು ಪ್ರಯತ್ನಿಸಿದರೂ ಸರಿಯಾದ ಉತ್ತರ ಸಿಗಲಿಲ್ಲ ಎಂದು ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಸುದ್ದಿಸಂಸ್ಥೆ ವರದಿ ಮಾಡಿದೆ.

ನೌಕರಿ ಹೆಸರಲ್ಲಿ ವಂಚನೆ: ವಿಧಾನಸೌಧವೇ ಇವರ ಅಡ್ಡ!

ಗೃಹ ಇಲಾಖೆಯಲ್ಲಿ ನೌಕರಿ ಆಮಿಷ
ವಿಧಾನಸೌಧದ ಸಿಬ್ಬಂದಿಯಿಂದ ವಂಚನೆ
ಮೋಸಕ್ಕೊಳಗಾದ ಪತ್ರಕರ್ತನಿಂದ ದೂರು ದಾಖಲು

ಸಚಿವಾಲಯದ ಒಳಾಡಳಿತ ಇಲಾಖೆಯಲ್ಲಿ ಉದ್ಯೋಗ ಕೊಡಿಸುವು ದಾಗಿ ನಂಬಿಸಿ ಸುಮಾರು 50 ಮಂದಿಯಿಂದ 1.61 ಕೋಟಿ ರೂಪಾಯಿ ಪಡೆದು ನಕಲಿ ಆದೇಶ ಪತ್ರಗಳನ್ನು ನೀಡಿ ವಂಚಿಸಿದ್ದ ಇಬ್ಬರು ಸರ್ಕಾರಿ ನೌಕರರನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸರ್ಕಾರದ ಒಳಾಡಳಿತ ಇಲಾಖೆಯಲ್ಲಿ ಕಡತ ನಿರ್ವಾಹಕರಾಗಿದ್ದ ಶ್ರೀಲೇಖ ಮತ್ತು ವಿಧಾನಸೌಧದಲ್ಲಿ ಗ್ರೂಪ್ ಡಿ ನೌಕರ (ದಲಾಯತ್) ಮೋಹನ್ ಅಲಿಯಾಸ್ ಸಂಪತ್ ಕುಮಾರ್ ಬಂಧಿತ ಆರೋಪಿಗಳು.

ಪತ್ರಕರ್ತ ಮಂಜುನಾಥ್ ನೀಡಿದ ದೂರಿನ ಅನ್ವಯ ಪ್ರಕರಣ ದಾಖಲಾಗಿದ್ದು ಪ್ರಮುಖ ಆರೋಪಿ ರಾಧಾ ಉಮೇಶ್ ತಲೆ ಮರೆಸಿಕೊಂಡಿದ್ದು, ಬಂಧನಕ್ಕಾಗಿ ಪೊಲೀಸರು ಬಲೆ ಬೀಸಿದ್ದಾರೆ.

ಪ್ರಕರಣ ಏನು?:

2019ನೇ ಸಾಲಿನಲ್ಲಿ ತಮ್ಮನ್ನು ಕೆಪಿಸಿಸಿ ಕಾರ್ಮಿಕ ವಿಭಾಗದ ಉಪಾಧ್ಯಕ್ಷರೆಂದು ಪರಿಚಯಿಸಿಕೊಂಡ ರಾಧಾ ಉಮೇಶ್ ಎಂಬಾಕೆ ತಮಗೆ ವಿಧಾನಸೌಧದಲ್ಲಿ ಹಿರಿಯ ಅಧಿಕಾರಿಗಳ ಪರಿಚಯವಿದೆ. ಕಾರ್ಮಿಕರ ಬಗೆಗಿನ ಕೆಲಸಗಳನ್ನು ಅವರಿಂದ ಮಾಡಿಸಿಕೊಡುತ್ತೇನೆ ಎಂದು ಹೇಳಿದ್ದಾರೆ.

ಇದನ್ನು ಗಮನಿಸಿದ ಪತ್ರಕರ್ತ ಮಂಜುನಾಥ್ ಎಂಬುವವರು ಅವರ ತಮ್ಮನಿಗೆ ಯಾವುದೇ ಉದ್ಯೋಗವಿಲ್ಲದ ಕಾರಣ ಆತನಿಗೆ ಸಚಿವಾಲಯದಲ್ಲಿ ದಿನಗೂಲಿ ನೌಕರರ ಏಜೆನ್ಸಿ ಕೊಡಿಸಿಕೊಡಿ ಎಂದು ಕೇಳಿದ್ದರು. ಇದಕ್ಕಾಗಿ ತುಂಬಾ ಹಣ ಖರ್ಚಾಗುತ್ತದೆ ಎಂದು ಹೇಳಿ ಮಂಜುನಾಥ್ ಅವರಿಂದ 4 ಕಂತುಗಳಲ್ಲಿ 15 ಲಕ್ಷ ರೂ.ಗಳನ್ನು ವಸೂಲಿ ಮಾಡಿದ್ದಾರೆ ಎನ್ನಲಾಗಿದೆ.



ಬಳಿಕ ಏಜೆನ್ಸಿಯ ಬಗ್ಗೆ ಮಂಜುನಾಥ್ ಅವರು ಪ್ರಶ್ನಿಸಿದಾಗ, ತಮಗೆ ಸರಕಾರಿ ಒಳಾಡಳಿತ ಇಲಾಖೆಯಲ್ಲಿ ಕಡತ ನಿರ್ವಾಹಕರಾಗಿರುವ ಶ್ರೀಲೇಖಾ ಎಂಬುವವರ ಪರಿಚಯವಿದೆ, ಅವರು ನಿಮ್ಮ ಏಜೆನ್ಸಿ ಕೆಲಸ ಮಾಡಿಕೊಡುತ್ತಾರೆ ಎಂದು ಪರಿಚಯ ಮಾಡಿಕೊಟ್ಟಿದ್ದಾರೆ.

ಶ್ರೀಲೇಖಾ ಅವರು ಏಜೆನ್ಸಿ ಕೊಡಿಸಲು ತಡವಾಗಲಿದ್ದು, ಸಚಿವಾಲಯದ ಒಳಾಡಳಿತ ಇಲಾಖೆಯಲ್ಲಿ ನೇರ ನೇಮಕಾತಿ ಮೂಲಕ ಕಿರಿಯ ಸಹಾಯಕರು, ಹಿರಿಯ ಸಹಾಯಕರು ಮತ್ತು ಅಧೀಕ್ಷಕರ ಹುದ್ದೆಗಳ ನೇಮಕಾತಿಗಳನ್ನು ನಿಮಗೆ ಪರಿಚಯವಿರುವವರಿಗೆ ಮಾಡಿಸಿಕೊಡುತ್ತೇನೆಂದು ನಂಬಿಸಿದ್ದಾರೆ ಎಂದು ಹೇಳಲಾಗುತ್ತಿದೆ.

ಇದನ್ನು ನಂಬಿದ ಮಂಜುನಾಥ್ ಅವರು ಉದ್ಯೋಗಾಕಾಂಕ್ಷಿಗಳಿಗೆ ಸರಕಾರಿ ಉದ್ಯೋಗ ಕೊಡಿಸಬಹುದು ಎಂದು ಸುಮಾರು 55 ಮಂದಿಯನ್ನು ಸಂಪರ್ಕಿಸಿ ಆ. 15 ರಿಂದ ಸೆ.20 ರವರೆಗೆ 76.54 ಲಕ್ಷ ರೂ. ಗಳನ್ನು ಆರೋಪಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಿದ್ದಾರೆ. ಜತೆಗೆ, 56.40 ಲಕ್ಷ ರೂ.ಗಳನ್ನು ಶ್ರೀಲೇಖಾ ಅವರಿಗೆ ನಗದು ರೂಪದಲ್ಲಿ ಕೊಟ್ಟಿರುತ್ತಾರೆ ಎಂದು ತಿಳಿದುಬಂದಿದೆ.

ನಕಲಿ ನೇಮಕಾತಿ ಪತ್ರ :

ಶ್ರೀಲೇಖಾ ಸೂಚನೆಯಂತೆ, ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಪ್ರತಿಗಳನ್ನು ವಿಕಾಸಸೌಧದಲ್ಲಿ ಕೆಲಸ ಮಾಡುವ ಮೋಹನ್ ಎಂಬುವವರು ಮಂಜುನಾಥ್ ಅವರಿಗೆ ತಂದುಕೊಟ್ಟಿದ್ದಾರೆ. ಇತ್ತೀಚಿಗೆ ಅಲ್ಲಿನ ಸಿಬ್ಬಂದಿ ಆದೇಶ ಪತ್ರವನ್ನು ಪರಿಶೀಲಿಸಿ ಈ ರೀತಿ ಯಾವುದೇ ನೇಮಕಾತಿಗಳನ್ನು ಇಲಾಖೆಯಲ್ಲಿ ಮಾಡುತ್ತಿಲ್ಲವೆಂದು ತಿಳಿಸಿ ಇದೊಂದು ನಕಲಿ ಆದೇಶ ಪತ್ರವೆಂದು ಹೇಳಿದ್ದಾರೆ.

ತಕ್ಷಣ ಅಭ್ಯರ್ಥಿಯೊಬ್ಬರು ಮಂಜುನಾಥ್ ಅವರನ್ನು ಸಂಪರ್ಕಿಸಿ ವಿಷಯ ತಿಳಿಸಿದಾಗ ಪ್ರಕರಣ ಬೆಳಕಿಗೆ ಬಂದಿದೆ.

ವಿಧಾನಸೌಧವೇ ಇವರ ಅಡ್ಡ!:

ಉದ್ಯೋಗ ಆಕಾಂಕ್ಷಿಗಳಿಗೆ ವಂಚನೆ ಮಾಡುವ ಸಲುವಾಗಿ ವಿಧಾನಸೌಧವನ್ನೇ ಆರೋಪಿಗಳು ಅಡ್ಡ ಮಾಡಿಕೊಂಡಿದ್ದರು. ಕೆಲಯುವಕರನ್ನು ವಿಧಾನಸೌಧಕ್ಕೆ ಕರೆದುಕೊಂಡು ಹೋಗಿ ಅಧಿಕಾರಿಗಳನ್ನು ತೋರಿಸಿ ನಕಲಿ ನೇಮಕಾತಿ ಆದೇಶ ಪತ್ರ ಕೊಟ್ಟಿದ್ದಾರೆ. ಗೃಹ ಇಲಾಖೆಯಲ್ಲೇ ನೌಕರಿ ಆಮಿಷ ಒಡ್ಡಿದ್ದು, ಪೊಲೀಸರಿಗೆ ಸವಾಲಾಗಿದೆ. ಇಂತಹ ಪ್ರಕರಣಗಳು ರಾಜ್ಯದಲ್ಲಿ ದಿನೆ ದಿನೆ ಹೆಚ್ಚಾಗುತ್ತಿವೆ. ಇತ್ತೀಚೆಗೆ ರಾಜ್ಯ ಮತ್ತು ದೇಶದಲ್ಲಿ ನಡೆಯುತ್ತಿರುವ ವಂಚನೆ ಪ್ರಕರಣಗಳ ಬಗ್ಗೆ ಜನಶಕ್ತಿ ಮೀಡಿಯಾ ಬೆಳಕು ಚೆಲ್ಲಿತ್ತು. ಜನ ಜಾಗೃತರಾಗಬೇಕಿದೆ. ಹಣ ನೀಡಿ ನೌಕರಿ ಪಡೆಯುವುದು, ಅಥವಾ ಹಣ ಪಡೆದು ನೌಕರಿ ಕೊಡಿಸುವುದು ಅಸಾಧ್ಯ ಎಂಬದನ್ನು ಜನ ಅರಿಯಬೇಕಿದೆ. ಇಲ್ಲದೆ ಹೋದಲ್ಲಿ ಇಂತಹ ಮೋಸಗಳು ನಡೆಯುತ್ತಿರುತ್ತವೆ.

ಸಮುದಾಯ ಆರೋಗ್ಯ ಕೇಂದ್ರ ಅವ್ಯವಸ್ಥೆ ವಿರುದ್ಧ ಆಕ್ರೋಶ

ಸಮುದಾಯ ಆರೋಗ್ಯ ಕೇಂದ್ರದ ಅವ್ಯವಸ್ಥೆ ಖಂಡಿಸಿ ತಾಲೂಕ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಆಸ್ಪತ್ರೆಯಲ್ಲಿ ಸ್ವಚ್ಛತೆ ಮತ್ತು ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಕೆಪಿಆರ್‌ಎಸ್, ಸಿಐಟಿಯು, ಡಿವೈಎಫ್‌ಐ ಸಂಘಟನೆಗಳು ಜಂಟಿಯಾಗಿ ಒತ್ತಾಯ ಪಡಿಸಿವೆ.

ರಾಯಚೂರು ಜಿಲ್ಲೆಯ, ದೇವದುರ್ಗ ತಾಲ್ಲೂಕಿನ ಚಾಲಹಳ್ಳಿಯಲ್ಲಿರುವ ಆರೋಗ್ಯ ಸಿಬ್ಬಂದಿಗಳು ಹಳ್ಳಿಗಳಿಂದ ಬಂದ ರೋಗಿಗಳಿಗೆ ಸರಿಯಾಗಿ ಸ್ಪಂದಿಸದೆ ಔಷಧಗಳನ್ನು ಹೊರಗಡೆ ಬರೆದು ಕೊಡುತ್ತಾರೆ ಅವರಿಗೆ ಸರಿಯಾಗಿ ಕೆಲಸ ಮಾಡುವಂತೆ ಆಗ್ರಹಿಸಿದರು.

ಸಂಘಟನೆಗಳ ಮನವಿಗೆ ಸ್ಪಂದಿಸಿದ ತಾಲೂಕ ಅಧಿಕಾರಿಗಳು ಒಂದು ವಾರದೊಳಗೆ ಸಣ್ಣಪುಟ್ಟ ಸಮಸ್ಯೆಗಳನ್ನು ಬಗೆಹರಿಸಲು ಗಮನ ಕೊಡಲಾಗುವುದು ಎಂದರು. ಸಾರ್ವಜನಿಕರು ಎಕ್ಸ್-ರೇ ದುರಸ್ತಿಗೊಂಡು ಎರಡು ವರ್ಷಗಳು ಕಳೆದರು, ಅದರ ಸರಿಪಡಿಸಿ ಉಪಯೋಗಕ್ಕೆ ಅನುಕೂಲಕ್ಕೆ



ಒಳಪಡಿಸಿಲ್ಲ. ಅದಲ್ಲದೆ, ಗರ್ಭಿಣಿಯರಿಗೆ ಸರಿಯಾದ ರೀತಿಯಲ್ಲಿ ಹೆರಿಗೆ ಮಾಡದೆ ಬರೀ ಖಾಸಗಿ ಆಸ್ಪತ್ರೆಗಳಿಗೆ ಕಳಿಸುತ್ತಾರೆ. ಇದನ್ನು ತಡೆಯಬೇಕು ಅಗತ್ಯ ಸೌಕರ್ಯಗಳನ್ನು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಾಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ತಾಲೂಕ ಉಪಾಧ್ಯಕ್ಷರಾದ ಶಬ್ಬೀರ ಜಾಲಹಳ್ಳಿ, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ಮುಖಂಡರಾದ ಗಿರಿಯಪ್ಪ ಪೂಜಾರಿ, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ಅಧ್ಯಕ್ಷರಾದ ಮಕ್ತುಂಪಾಷ, ಆರೋಗ್ಯ ರಕ್ಷ ಸಮಿತಿಯ ಅಧ್ಯಕ್ಷರಾದ ಶಿವರಾಜ್ ಪಾಣಿ ಬಸವರಾಜ ಮುಂತಾದವರಿದ್ದರು.

ವೈದ್ಯಕೀಯ ವಿದ್ಯಾರ್ಥಿಗಳ ಮೇಲೆ ಅನೈತಿಕ ಗೂಂಡಾಗಿರಿ ನಡೆಸಿದವರ ಮೇಲೆ ಕಠಿಣ ಕಾನೂನು ಕ್ರಮಕ್ಕೆ ಡಿವೈಎಫ್‌ಐ ಒತ್ತಾಯ

ಸುರತ್ಕಲ್ ಎನ್.ಐ.ಟಿ.ಕೆ ಸಮೀಪ ಜೀಪಿನಲ್ಲಿ ತೆರಳುತ್ತಿದ್ದ ವೈದ್ಯಕೀಯ ವಿದ್ಯಾರ್ಥಿಗಳನ್ನು ತಡೆದು ದಾಂಧಲೆ ನಡೆಸಿ ಹಲ್ಲೆಗೆ ಯತ್ನಿಸಿದ ಬಿಜೆಪಿಯ ಗೂಂಡಾ ಕಾರ್ಯಕರ್ತರ ಕೃತ್ಯವನ್ನು ಡಿವೈಎಫ್‌ಐ ದ.ಕ ಜಿಲ್ಲಾ ಸಮಿತಿ ಖಂಡಿಸಿದೆ. ಪೊಲೀಸ್ ಇಲಾಖೆ ಈ ಕೂಡಲೇ ಗೂಂಡಾಗಿರಿ ನಡೆಸಿದವರ ಮೇಲೆ ಕಠಿಣ ಕಾನೂನಿನಡಿ ಶಿಕ್ಷೆಗೊಳಪಡಿಸಿ ಬಂಧಿಸಲು ಒತ್ತಾಯಿಸಿದೆ.



ದೇರಳಕಟ್ಟೆ ಕೆ.ಎಸ್ ಹೆಗ್ಡೆ ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗ ನಡೆಸುವ ವೈದ್ಯಕೀಯ ವಿದ್ಯಾರ್ಥಿಗಳು ಮಣಿಪಾಲಕ್ಕೆ ತೆರಳಿ ಬರುವಂತಹ ಹೊತ್ತಿನಲ್ಲಿ ಸುರತ್ಕಲ್ ಬಳಿ ತಡೆದು ಹಲ್ಲೆ ನಡೆಸಿದ ಬಿಜೆಪಿ, ಬಜರಂಗದಳದ ಕಾರ್ಯಕರ್ತರನ್ನು ಪೊಲೀಸ್ ಇಲಾಖೆ ಕಠಿಣ ಕಾನೂನಿನಡಿ ಬಂಧಿಸಿ ಶಿಕ್ಷೆಗೊಳಪಡಿಸುವ ಬದಲು ಕೇವಲ ವಶಕ್ಕೆ ಪಡೆದು ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುವ ಕ್ರಮವನ್ನು ಜಿಲ್ಲೆಯ ಪ್ರಜ್ಞಾವಂತ ಜನ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಇದು ಜಿಲ್ಲೆಯ ಕಾನೂನು ಸುವ್ಯವಸ್ಥೆ ಎಷ್ಟು ದುರ್ಬಲವಾಗಿದೆ ಎಂಬುದನ್ನು ಎತ್ತಿ ತೋರಿಸಿದೆ. ಜಿಲ್ಲೆಯಲ್ಲಿ ಆಗಾಗ ನಡೆಯುವಂತಹ ಇಂತಹ ಘಟನೆಗಳನ್ನು ತಡೆಗಟ್ಟಿ ಮತೀಯ ಶಕ್ತಿಗಳ ಹೆಡೆಮುರಿ ಕಟ್ಟುವಲ್ಲಿ ಪೊಲೀಸ್ ಇಲಾಖೆ ದಯನೀಯ ವೈಫಲ್ಯವನ್ನು ಕಂಡಿದೆ. ಜಿಲ್ಲೆಯಲ್ಲಿ ಅನೈತಿಕ ಗೂಂಡಾಗಿರಿಗಳು, ಅಕ್ರಮ ಚಟುವಟಿಕೆಗಳು, ಅಕ್ರಮ ಮರಳುಗಾರಿಕೆ, ಇತರೆ ಮಾಫಿಯಾಗಳು ರಾಜಾರೋಷವಾಗಿ ನಡೆಯುತ್ತಿದ್ದರೂ ಪೊಲೀಸ್ ಇಲಾಖೆ ಸಂಪೂರ್ಣ ಕಣ್ಣು ಮುಚ್ಚಿ ಕುಳಿತಿದೆ. ಇಂತಹ ಮತೀಯ ಶಕ್ತಿಗಳ ಅಟ್ಟಹಾಸವನ್ನು ಕಡಿವಾಣ ಮಾಡಲಾಗದಷ್ಟು ಜಿಲ್ಲೆಯ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಜಿಲ್ಲೆಯ ಸಂಸದರು, ಶಾಸಕರು ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳು ನೇರ ಹೊಣೆ. ನಿರುದ್ಯೋಗಿ ಯುವಕರನ್ನು ಇಂತಹ ಕ್ರಿಮಿನಲ್, ಅನೈತಿಕ ಕೃತ್ಯಗಳಿಗೆ ಬಳಸಿಕೊಂಡು ಬಿಜೆಪಿ ಪರಿವಾರ ಆಡುವ ಆಟಗಳಿಗೆ ಇನ್ನಾದರು ಕಡಿವಾಣ ಬೀಳಬೇಕು. ಇಲ್ಲದಿದ್ದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಅಭಿವೃದ್ಧಿಯಲ್ಲಿ ಮತ್ತಷ್ಟು ಹಿನ್ನಡೆ ಸಾಧಿಸುತ್ತದೆ.

ಪೊಲೀಸ್ ಇಲಾಖೆ ಈ ಕೂಡಲೇ ಅನೈತಿಕ ಗೂಂಡಾಗಿರಿ ನಡೆಸಿದ ತಪ್ಪಿತಸ್ಥರನ್ನು ಕಠಿಣ ಸೆಕ್ಷನ್ ಗಳಡಿ ಮರು ಬಂಧಿಸಿ ಜೈಲಿಗಟ್ಟಿ ಶಿಕ್ಷೆಗೊಳಪಡಿಸಲು ಡಿವೈಎಫ್‌ಐ ದ.ಕ ಜಿಲ್ಲಾ ಸಮಿತಿ ಒತ್ತಾಯಿಸುತ್ತದೆ ಎಂದು ಡಿವೈಎಫ್‌ಐ ದ.ಕ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ತಿಳಿಸಿದ್ದಾರೆ.



ಶ್ರೀಲಂಕಾದ ಆಹಾರ ಬಿಕ್ಕಟ್ಟು, ಆರ್ಥಿಕ ತುರ್ತು ಪರಿಸ್ಥಿತಿ ಮತ್ತು 'ಪೂರ್ಣ ಸಾವಯವ ಕೃಷಿ'ಯ 'ಪರಿಸರ-ಉಗ್ರವಾದ'

ಶ್ರೀಲಂಕಾವನ್ನು ಇತ್ತೀಚೆಗೆ (ಸೆಪ್ಟೆಂಬರ್ ಮೊದಲ ವಾರದಿಂದ) ಆಹಾರದ ಕೊರತೆಯ ಮತ್ತು ವಿಪರೀತ ಬೆಲೆಏರಿಕೆಯ ಬಿಕ್ಕಟ್ಟು ಕಾಡುತ್ತಿದೆ. ಪರಿಸ್ಥಿತಿ ಎಷ್ಟು ಗಂಭಿರವಾಯಿತೆಂದರೆ ಸರಕಾರ ಆರ್ಥಿಕ ಪರಿಸ್ಥಿತಿ ಘೋಷಿಸಿತು. ಅಗತ್ಯ ವಸ್ತುಗಳ ವ್ಯಾಪಾರದ ಮೇಲೆ ಕಠಿಣ ನಿಯಂತ್ರಣ ಹೇರಿತು. ಆಹಾರದ ಕೊರತೆ ಇಲ್ಲ, ಆದರೆ ವರ್ತಕರ ಅಕ್ರಮ ದಾಸ್ತಾನು, ಕಾಳಸಂತೆಯಿಂದಾಗಿ ಮತ್ತು ಜನ ಗಾಬರಿಯಾಗಿ ಹೆಚ್ಚೆಚ್ಚು ಆಹಾರ ವಸ್ತು ಖರೀದಿ ಮಾಡಲಾರಭಿಸಿದ್ದರಿಂದ ಕೃತಕ ಕೊರತೆ ಸೃಷ್ಟಿಯಾಗಿದೆ, ಎಂದು ಶ್ರೀಲಂಕಾ ಸರಕಾರ ಹೇಳುತ್ತದೆ. ಆದರೆ ಆಹಾರದ ಕೊರತೆ ಆರಂಭವಾಗಿದ್ದು ಕಟುವಾಸ್ತವ. ಇನ್ನಷ್ಟು ಆಹಾರದ ಕೊರತೆಯ ನಿರೀಕ್ಷೆಯಿಂದ ವರ್ತಕರು ಅಕ್ರಮ ದಾಸ್ತಾನು, ಕಾಳಸಂತೆ ಮಾಡಿದ್ದೂ ನಿಜವೆಂದು ಹೇಳಲಾಗಿದೆ.

ಆಹಾರದ ಕೊರತೆ ಉಂಟಾಗಿದ್ದು ಹಲವು ಕಾರಣಗಳಿಂದ ಎಂದು ವಿಶ್ಲೇಷಕರ ಅಭಿಪ್ರಾಯ. ಕ್ರಿಶ್ಚಿಯನ್-ವಿರೋಧಿ ಭಯೋತ್ಪಾದನೆಯ ಆತಂಕದಿಂದ ಇಳಿಮುಖವಾಗಿದ್ದ ಪ್ರವಾಸೋದ್ಯಮ ಕೊವಿದ್ ನಿಂದಾಗಿ ಪೂರ್ತಿ ನೆಲಕಚ್ಚಿತ್ತು. ಪ್ರಮುಖ ಸಾಧನವಾಗಿದ್ದ ಪ್ರವಾಸೋದ್ಯಮದ ಕುಸಿತದಿಂದ ಹಾಗೂ ಚಹ ಮುಂತಾದ ಪ್ರಮುಖ ರಫ್ತುವಸ್ತುಗಳ ಉತ್ಪಾದನೆಯ ಕುಸಿತದಿಂದಾಗಿ ವಿದೇಶೀ ವಿನಿಮಯ ಗಳಿಕೆಯಲ್ಲಿ ತೀವ್ರ ಕುಸಿತವಾಗಿತ್ತು. ವಿಧೇಶಿ ವಿನಿಮಯದ ಕೊರತೆಯಿಂದಾಗಿ ಹಾಗೂ ಕೋವಿದ್ ನಿಂದಾಗಿ ಇತರ ಆರ್ಥಿಕ ಚಟುವಟಿಕೆಗಳೂ ಸ್ಥಗಿತವಾದ್ದರಿಂದ ಆರ್ಥಿಕತೆ ತೀವ್ರ ಕುಸಿತ ಕಂಡಿದೆ. ಇದರ ಜೊತೆಗೆ ಈಗಾಗಲೇ ಸಾವಯವ ಕೃಷಿಗೆ ಉತ್ತೇಜನ ಕೊಡುವ ಭಾಗವಾಗಿ ತೀವ್ರ ನಿರ್ಬಂಧಿತವಾಗಿದ್ದ ಮತ್ತು ವಿದೇಶ ವಿನಿಮಯ ಕೊರತೆಯಿಂದ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಆಮದಿನ ಪೂರ್ಣ ನಿಷೇಧ ಮತ್ತು ಆಹಾರ ಅಮದು ನಿಷೇಧ ಕೃಷಿ ನೀತಿಗಳಲ್ಲಿ ಬದಲಾವಣೆಗಳಿಂದ ಆಹಾರ ಉತ್ಪಾದನೆಯಲ್ಲಿ ತೀವ್ರ ಕುಸಿತ ಉಂಟಾಗಿತ್ತು. ಕೊರತೆ ಮುಂದುವರೆಯುವ ನಿರೀಕ್ಷೆಯಿಂದಾಗಿ ಬೆಲೆ ಏರಿಕೆ ಮತ್ತು ಕಾಳಸಂತೆ ಆರಂಭವಾಗಿರಬೇಕು.

ಆರ್ಥಿಕ ತುರ್ತುಪರಿಸ್ಥಿತಿಗೆ ಕಾರಣವಾದ ಶ್ರೀಲಂಕಾದ ಬದಲಾದ ಕೃಷಿ ನೀತಿ ಮತ್ತು ಅದರ ಹಿನ್ನೆಲೆ ಪರಿಣಾಮಗಳ ಬಗೆಗೆ ಪ್ರೊ. ಆರ್ ರಾಮಕುಮಾರ್ ಅವರು ಬರೆದ ಲೇಖನದ ಸಂಗ್ರಹಾನುವಾದ ಕೆಳಗಿದೆ. ಸಾವಯವ ಕೃಷಿಯ ಕೂರಿತು ಮೂಲಭೂತ ಮಾಹಿತಿ ನೀಡುವ ಇನ್ನೊಂದು ಲೇಖನ ಪುಟ 11 ರಲ್ಲಿದೆ.

ಪ್ರೊ. ಆರ್. ರಾಮಕುಮಾರ್ ಸಂಗ್ರಹಾನುವಾದ: ಜಿ.ಎಸ್.ಮಣಿ

ಶ್ರೀಲಂಕಾದ ಕೃಷಿ ಅರ್ಥಶಾಸ್ತ್ರಜ್ಞರು ಮತ್ತು ವಿಜ್ಞಾನಿಗಳ ಒಂದು ಪ್ರಭಾವಿ ಗುಂಪು ಗೋಟಾಬಯ ರಾಜಪಕ್ಸೆ ಸರ್ಕಾರವು ಜಾರಿ ಮಾಡಿದ ದೇಶದ ಕೃಷಿ ನೀತಿಯಲ್ಲಿ ಇತ್ತೀಚಿನ ದಿಕ್ಕು ಬದಲಾವಣೆಯನ್ನು ಖಂಡಿಸಿದೆ. ಶ್ರೀಲಂಕಾಗೆ "**ಶೇಕಡಾ 100 ರಷ್ಟು ಸಾವಯವ ಆಹಾರ ಉತ್ಪಾದಕ**" ಸ್ಥಾನಮಾನದ ಸಾಧನೆಯ ಅನ್ವೇಷಣೆಯಲ್ಲಿ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಬಳಕೆ ಮತ್ತು ಆಮದನ್ನು ನಿಷೇಧಿಸಿದ ಸರ್ಕಾರದ ನಿರ್ಧಾರವು ಈಗಾಗಲೇ ದ್ವೀಪ ರಾಷ್ಟ್ರದ ಕೃಷಿಯ ಮೇಲೆ ಹಾನಿಕಾರಕ ಪರಿಣಾಮಗಳನ್ನು ಬೀರಿದೆ. ಶ್ರೀಲಂಕಾದ ಕೃಷಿ ಅರ್ಥಶಾಸ್ತ್ರಜ್ಞರ ಸಂಘಟನೆ ??(SAEA)ಮೇ 25, 2021 ರಂದು ಅಧ್ಯಕ್ಷ ರಾಜಪಕ್ಸೆ ಅವರಿಗೆ ಬರೆದ ಪತ್ರದಲ್ಲಿ ಇದು "**ಆಹಾರ ಭದ್ರತೆ, ಕೃಷಿ ಆದಾಯ, ವಿದೇಶಿ ವಿನಿಮಯ ಗಳಿಕೆ ಮತ್ತು ಗ್ರಾಮೀಣ ಬಡತನ**"ದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತದೆ ಎಂದು ಎಚ್ಚರಿಸಿದೆ.

ಅಧ್ಯಕ್ಷ ರಾಜಪಕ್ಸೆ ಅವರ ಕೆಟ್ಟ ಕಲ್ಪನೆ ಮತ್ತು ಉಗ್ರ ನೀತಿಯನ್ನು, ಈ ವರ್ಷ (2021) ಏಪ್ರಿಲ್‌ನಲ್ಲಿ ಘೋಷಿಸಲಾಯಿತು. ಈ ನೀತಿಯು ಎಲ್ಲಾ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಆಮದನ್ನು ನಿಷೇಧಿಸಿ ಸಾವಯವ ಕೃಷಿಯನ್ನು ಉತ್ತೇಜಿಸುವ ಉದ್ದೇಶ ತೋರಿತು. ಪರಿಣಾಮವಾಗಿ, ದೇಶದ ಕೃಷಿಯನ್ನು ಆಳವಾದ ಉತ್ಪಾದನಾ ಕುಸಿತಕ್ಕೆ ತಳ್ಳುವ ಅಪಾಯ ಉಂಟಾಯಿತು. ಇದರ ಪರಿಣಾಮವಾಗಿ, ಚಹಾದ ರಫ್ತು, ಶ್ರೀಲಂಕಾದ ಪ್ರಾಥಮಿಕ ಕೃಷಿ ರಫ್ತು ಮತ್ತು ಇತರ ಸರಕುಗಳ ಇಳಿಕೆ ನಿರೀಕ್ಷಿಸಲಾಗಿದೆ. ಕೋವಿಡ್-19 ಸಾಂಕ್ರಾಮಿಕದ ನಡುವೆ ವಿದೇಶಿ ವಿನಿಮಯ ಗಳಿಕೆಯಲ್ಲಿ ಕುಸಿತಕ್ಕೆ ಆರ್ಥಿಕತೆಯು ಎರವಾಗುವ ಲಕ್ಷಣಗಳಿವೆ.

ಸಂಘಟನೆಯ (SAEA) ಪತ್ರವು ಈ ನೀತಿಯಿಂದಾಗಿ ರೈತರಿಗೆ ಆಗಬಹುದಾದ ಆರ್ಥಿಕ ನಷ್ಟದ ವಿವರವಾದ ಅಂದಾಜುಗಳನ್ನು ಒದಗಿಸುತ್ತದೆ:

"ಸಾಂಪ್ರದಾಯಿಕ ಕೃಷಿಯಿಂದ ಸಾವಯವ ಕೃಷಿಗೆ ಪರಿವರ್ತಿಸುವಾಗ, ಸರ್ಕಾರವು ತಾಂತ್ರಿಕ, ಪರಿಸರ ಮತ್ತು ಆರ್ಥಿಕ ವೆಚ್ಚಗಳು ಮತ್ತು ಪ್ರಯೋಜನಗಳನ್ನು ಅಳೆಯಬೇಕು. ಆಮದು ನಿಷೇಧದ ಸಂಭಾವ್ಯ ಆರ್ಥಿಕ ನಷ್ಟಗಳ ಕುರಿತು ಸಂಘಟನೆ ನಡೆಸಿದ ಅಧ್ಯಯನದ ಪ್ರಾಥಮಿಕ ಸಂಶೋಧನೆಗಳು ಮತ್ತು ಆಯಾ ಅಂದಾಜುಗಳನ್ನು ಕೆಳಗೆ ನೀಡಲಾಗಿದೆ.

(ಎ) **ಭತ್ತ:** ರಾಸಾಯನಿಕ ರಸಗೊಬ್ಬರಗಳನ್ನು ಸಂಪೂರ್ಣವಾಗಿ ಸಾವಯವ ಗೊಬ್ಬರಗಳಿಂದ ಬದಲಾಯಿಸಿದರೆ ಭತ್ತದ ಸರಾಸರಿ ಇಳುವರಿಯು ಶೇಕಡಾ 25 ರಷ್ಟು ಕುಸಿಯಬಹುದು ಎಂದು ಕೃಷಿ ಅಧ್ಯಯನಗಳು ಬಹಿರಂಗಪಡಿಸುತ್ತವೆ. ಉತ್ಪಾದಕತೆಯಲ್ಲಿನ ಈ ನಷ್ಟವು ಭತ್ತದ ಆಮದಿನ ಮೇಲೆ ಸಂಪೂರ್ಣ ನಿಷೇಧದೊಂದಿಗೆ ಕೇವಲ ಸಾವಯವ ಗೊಬ್ಬರಗಳೊಂದಿಗೆ ಭತ್ತವನ್ನು ಬೆಳೆಸಿದರೆ ಭತ್ತದ ಕೃಷಿಯ ಲಾಭವನ್ನು ಶೇಕಡಾ 33 ರಷ್ಟು ಮತ್ತು ಅಕ್ಕಿಯ ಸೇವನೆಯನ್ನು ಶೇಕಡಾ 27 ರಷ್ಟು ಕಡಿಮೆ ಮಾಡುವ ಸಾಧ್ಯತೆ ಇದೆ. ಇದಕ್ಕೆ ವ್ಯತಿರಿಕ್ತವಾಗಿ, ರಾಸಾಯನಿಕ ಗೊಬ್ಬರಗಳ ಶಿಫಾರಸು ಪ್ರಮಾಣಗಳೊಂದಿಗೆ ಸಾವಯವ ಗೊಬ್ಬರವನ್ನು ಅನ್ವಯಿಸುವುದರಿಂದ ಬೇಸಾಯದ ಲಾಭವನ್ನು 16 ಪ್ರತಿಶತದಷ್ಟು ಸುಧಾರಿಸುತ್ತದೆ.

(ಬಿ) **ಚಹಾ:** ರಾಸಾಯನಿಕ ಗೊಬ್ಬರದ ಅನುಪಸ್ಥಿತಿಯು ಸಸ್ಯೀಯವಾಗಿ ಪ್ರಚಾರ ಮಾಡಿದ ಚಹಾದ (Vegetatively Propagated Tea - VPT)) ಉತ್ಪಾದಕತೆಯನ್ನು ತೀವ್ರವಾಗಿ ಕಡಿಮೆ ಮಾಡುತ್ತದೆ. ಶೇ. 35 ರಷ್ಟು ಉತ್ಪಾದಕತೆಯ ಕುಸಿತದೊಂದಿಗೆ, ಚಹಾದ ರಫ್ತು ಪ್ರಮಾಣವು 27.9 ರಿಂದ 18.1 ಕೋಟಿ ಕೆಜಿಗೆ ಇಳಿಕೆಯಾಗುತ್ತದೆ! ಇದರಿಂದ 84 ಶತಕೋಟಿ ರೂಪಾಯಿಗಳ ಆದಾಯ ನಷ್ಟವಾಗುತ್ತದೆ.. ಚಹಾದಲ್ಲಿ ಸಣ್ಣ ಹಿಡುವಳಿದಾರರಿಗೆ ಹೋಲಿಸಿದರೆ ಎಸ್ಟೇಟ್ ವಲಯವು ಗಮನಾರ್ಹ ನಷ್ಟವನ್ನು ಅನುಭವಿಸುತ್ತದೆ. ಬೃಹತ್ ಪ್ರಮಾಣದಲ್ಲಿ ಸಾವಯವ ಗೊಬ್ಬರಗಳನ್ನು ಬಳಸಲು ಕಾರ್ಮಿಕರ ವೆಚ್ಚ ಹೆಚ್ಚಾಗುವ ಕಾರಣ ಈ ನಷ್ಟಗಳು ಮತ್ತಷ್ಟು ಉಲ್ಬಣಗೊಳ್ಳಬಹುದು.

(ಸಿ) **ತೆಂಗು:** ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಹಾಕದಿದ್ದರೆ ತೆಂಗಿನ ಇಳುವರಿ ಶೇ 30 ರಷ್ಟು ಕಡಿಮೆಯಾಗುತ್ತದೆ. ಈ ಪರಿಸ್ಥಿತಿಯು ತೆಂಗಿನ ಎಣ್ಣೆ, ಒಣಗಿದ ತೆಂಗಿನಕಾಯಿ ಮತ್ತು ಇತರ ತೆಂಗಿನ ಉತ್ಪನ್ನಗಳ ಉತ್ಪಾದನೆಗೆ ತಾಜಾ ತೆಂಗಿನ ಲಭ್ಯತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ವಿದೇಶಿ ವಿನಿಮಯ ಗಳಿಕೆಯಲ್ಲಿನ ನಷ್ಟವು ರೂ. 18 ಶತಕೋಟಿ, ಒಟ್ಟು ತೆಂಗಿನ ವ್ಯಾಪ್ತಿಯಲ್ಲಿ ಕೇವಲ ಶೇಕಡಾ 26 ರಷ್ಟು ಫಲವತ್ತಾಗಿದೆ ಎಂಬ ಊಹೆಯ ಆಧಾರದ ಮೇಲೆ. ಖಾದ್ಯ ತೈಲಗಳ ಆಮದಿಗಾಗಿ ಹೆಚ್ಚುವರಿ ವೆಚ್ಚವನ್ನು ಪರಿಗಣಿಸಿದಾಗ, ವಿದೇಶಿ ವಿನಿಮಯ ಗಳಿಕೆಯ ನಷ್ಟವು ಇನ್ನೂ ಹೆಚ್ಚಾಗುತ್ತದೆ.

(ಡಿ) ಮೂರು ಕೃಷಿ ಉಪ-ವಲಯಗಳ ಮೇಲೆ ತಕ್ಷಣದ ಪರಿಣಾಮಗಳನ್ನು ಪರಿಗಣಿಸಿ ಮೇಲಿನ ಫಲಿತಾಂಶಗಳನ್ನು ಪಡೆಯಲಾಗಿದೆ. ಮಧ್ಯಮದಿಂದ ದೀರ್ಘಾವಧಿಯವರೆಗೆ ಆರ್ಥಿಕತೆಯಲ್ಲಿ ಹೊಂದಾಣಿಕೆಗಳನ್ನು ಮಾಡಿದ ವಿಶ್ಲೇಷಣೆಯು . ಆಮದು ನಿಷೇಧದ ಅನುಷ್ಠಾನ ಸರಾಸರಿ ಕೃಷಿ ಉತ್ಪಾದಕತೆಯನ್ನು ಶೇ 20 ರಷ್ಟು ಕಡಿಮೆ ಮಾಡುವುದರಿಂದ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ಶೇ. 3.05 ರಷ್ಟು ಇಳಿಕೆಗೆ ಕಾರಣವಾಗಬಹುದು ಎಂದು ತಿಳಿಸುತ್ತದೆ"


"ರಾಸಾಯನಿಕ ಗೊಬ್ಬರಗಳು ಮತ್ತು ಕೀಟನಾಶಕಗಳ ಮೇಲಿನ ಆಮದು ನಿಷೇಧವನ್ನು ಪರ್ಯಾಯ ಕ್ರಮಗಳ ಗುಂಪಿನೊಂದಿಗೆ ಬದಲಿಸಲು" ಪತ್ರದಲ್ಲಿ ರಾಷ್ಟ್ರಪತಿಯವರಿಗೆ ವಿನಂತಿಸಲಾಗಿದೆ. ಇದರಲ್ಲಿ ವೈಜ್ಞಾನಿಕವಾಗಿ ಮೌಲ್ಯೀಕರಿಸಿದ ಉತ್ತಮ ಕೃಷಿ ಪದ್ಧತಿಗಳನ್ನು (Good Agricultural Practices ಜಿಎಪಿ) ಕಡ್ಡಾಯ ರಾಷ್ಟ್ರೀಯ ಮಾನದಂಡವನ್ನಾಗಿ ಮಾಡುವುದು ಮತ್ತು ಕೃಷಿಯಲ್ಲಿ ರಾಸಾಯನಿಕಗಳ ಅತಿಯಾದ ಬಳಕೆಯನ್ನು ಸೂಕ್ತ ಮಿಶ್ರಣದ ಮೂಲಕ ನಿಷೇಧಿಸುವುದು ಕಾನೂನು ಮಾನದಂಡಗಳು, ತೆರಿಗೆಗಳು, ಸಬ್ಸಿಡಿಗಳು ಮತ್ತು ಉತ್ಪನ್ನಗಳಿಗೆ ಬೆಂಬಲ ಬೆಲೆ ನೀಡುವ ಜೊತೆಗೆ "ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಸುರಕ್ಷಿತ ಬಳಕೆಯ ಅರಿವನ್ನು ಸುಧಾರಿಸಲು" ಕೃಷಿ ವಿಸ್ತರಣೆಯನ್ನು ಬಲಪಡಿಸುವಂತೆಯೂ ಸಂಘಟನೆಯ ಪತ್ರದಲ್ಲಿ ಕೇಳಲಾಗಿದೆ.

2019 ರಲ್ಲಿ ಅಧಿಕಾರಕ್ಕೆ ಬಂದ ನಂತರ, ಅಧ್ಯಕ್ಷ ರಾಜಪಕ್ಸೆ ಆಮದು ಮಾಡಿದ ರಸಗೊಬ್ಬರಗಳಿಗೆ ಸಬ್ಸಿಡಿ ನೀಡಿದರು. ಇನ್ನೂ ಕೇವಲ ಎರಡು ವರ್ಷಗಳ ಅವಧಿಯಲ್ಲಿ, ಶ್ರೀಲಂಕಾ ಕ್ಯಾಬಿನೆಟ್ ಅಜೈವಿಕ ಗೊಬ್ಬರಗಳು ಮತ್ತು ಎಲ್ಲಾ ಕೃತಕ ಕೃಷಿ-ರಾಸಾಯನಿಕಗಳ ಆಮದನ್ನು ಸಂಪೂರ್ಣವಾಗಿ ನಿಷೇಧಿಸುವ ರಾಜಪಕ್ಸೆ ಅವರ ಪ್ರಸ್ತಾಪವನ್ನು ಅನುಮೋದಿಸಿತು-ಪರಿಣಾಮವಾಗಿ, ಎಲ್ಲಾ ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳು, ಶಿಲೀಂಧ್ರ ನಾಶಕಗಳು ಮತ್ತು ಕಳೆನಾಶಕಗಳ ಆಮದು ನಿಂತಿತು. ಮೇ 6, 2021 ರ ಗೆಜೆಟ್ ಅಧಿಸೂಚನೆಯು ಇದನ್ನು ತಕ್ಷಣದಿಂದ ಜಾರಿಗೆ ತಂದಿತು. 6 ನೇ ಮೇ 2021 ರ ನಂತರ ಯಾವುದೇ ಸಾಗಣೆಗೆ, ಇಳಿಸುವಿಕೆಯ ಅನುಮತಿಗಳನ್ನು ರದ್ದುಗೊಳಿಸಲಾಯಿತು ಮತ್ತು ನಿಷೇಧಿತ ವಸ್ತುಗಳ ಆಮದಿನ ಮೇಲೆ ಸಾಲ ಪತ್ರಗಳನ್ನು ನೀಡದಂತೆ ಬ್ಯಾಂಕುಗಳಿಗೆ ತಿಳಿಸಲಾಯಿತು.

ಕೃಷಿ ನೀತಿಯಲ್ಲಿನ ಈ ತಿರುವಿಗೆ ಕಾರಣವೇನು?

ನೀತಿ ಬದಲಾವಣೆಯ ಹಿಂದಿನ ಎರಡು ಅಂಶಗಳು, ವರದಿಗಳ ಪ್ರಕಾರ

1. ಶ್ರೀಲಂಕಾದ ವಿದೇಶಿ ವಿನಿಮಯದಲ್ಲಿನ ಬಿಕ್ಕಟ್ಟು, ಮತ್ತು
2. ಲಾಕ್‌ಡೌನ್‌ಗಳು ಮತ್ತು ಕೋವಿಡ್ -19 ನಿಂದ ಉಂಟಾದ ಇತರ ಅಡೆತಡೆಗಳಿಂದಾಗಿ ಆಹಾರ ಬೆಲೆ ಏರಿಕೆ.



ಶ್ರೀಲಂಕಾ ವಾರ್ಷಿಕವಾಗಿ ರಸಗೊಬ್ಬರ ಆಮದಿಗಾಗಿ 40 ಕೋಟಿ ಡಾಲರುಗಳಷ್ಟು ಖರ್ಚು ಮಾಡುತ್ತದೆ ಎಂದು ಅಂದಾಜಿಸಲಾಗಿದೆ. ರಾಸಾಯನಿಕ ಗೊಬ್ಬರಗಳ ಮೇಲಿನ ನಿಷೇಧವು ವಿದೇಶಿ ವಿನಿಮಯದ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ ಎಂದು ಭಾವಿಸಲಾಗಿದೆ. ಅಧ್ಯಕ್ಷ ರಾಜಪಕ್ಸೆ ಅವರ ಸಲಹೆಗಾರರ ??ಗುಂಪಿನಲ್ಲಿ ವೈದ್ಯರೊಬ್ಬರನ್ನು ಒತ್ತಡದಿಂದ ಸೇರಿಸಲಾಯಿತು. ಅವರು ಕೃಷಿಯಲ್ಲಿ ರಾಸಾಯನಿಕಗಳ ಬಳಕೆಯು ದೀರ್ಘಕಾಲದ ಮೂತ್ರಪಿಂಡದ ಕಾಯಿಲೆಯ ಹರಡುವಿಕೆಗೆ ಕಾರಣವಾಗುತ್ತದೆ ಎಂಬ ವಾದ ಮಾಡಿ ಆಢಳಿತವನ್ನು ನಂಬಿಸಿದರು. ಶ್ರೀಲಂಕಾದ ವಿಜ್ಞಾನಿಗಳು ವಾಸ್ತವವಾಗಿ ಕೃಷಿಯಲ್ಲಿ ರಾಸಾಯನಿಕಗಳ ಬಳಕೆ ಮತ್ತು ಮೂತ್ರಪಿಂಡದ ಕಾಯಿಲೆಗಳ ನಡುವೆ ಯಾವುದೇ ಸಂಬಂಧವಿಲ್ಲ ಎಂಬ ಸುಸಂಬದ್ಧ ವಾದ ಮಂಡಿಸಿದ್ದಾರೆ. ಮೂತ್ರಪಿಂಡದ ರೋಗಗಳ ಹೆಚ್ಚಳಕ್ಕೆ "ಹಲವು ಬಾವಿಗಳಲ್ಲಿ ಇರುವ ಫ್ಲೋರೈಡ್ ಮತ್ತು ಗಡಸು ನೀರು" ಎಂದು ಅವರು ಹೇಳಿದ್ದಾರೆ. ಆದರೆ ಈ ಧ್ವನಿಗಳನ್ನು ಕಡೆಗಣಿಸಲಾಯಿತು, ಮತ್ತು ಸಾವಯವ ಕೃಷಿ ಲಾಬಿಯು ಸಾಂಪ್ರದಾಯಿಕ ನೀತಿಯನ್ನು ತಳ್ಳಿ ಹಾಕಿತು.

ಮೇ 10 2021 ರಂದು, ಹವಾಮಾನ ಬದಲಾವಣೆಗೆ ಸಮರ್ಥನೀಯ ಪರಿಹಾರಗಳೊಂದಿಗೆ "ಹಸಿರು ಶ್ರೀಲಂಕಾವನ್ನು ರಚಿಸುವ ಅಧ್ಯಕ್ಷೀಯ ಕಾರ್ಯಪಡೆ"ಯನ್ನು ರಚಿಸಲಾಯಿತು. ಆಮದು ನಿಷೇಧವನ್ನು ಕಾರ್ಯಗತಗೊಳಿಸಲು ಮತ್ತು "ಹಸಿರು ಶ್ರೀಲಂಕಾ" ವನ್ನು ಕಟ್ಟಲು ಯೋಜನೆಯನ್ನು ಸಲ್ಲಿಸಲು ಕಾರ್ಯಪಡೆಗೆ ಅಧಿಕಾರ ನೀಡಲಾಗಿದೆ. ಆರಂಭದಲ್ಲಿ, ಕಾರ್ಯ ಪಡೆ 46 ಸದಸ್ಯರನ್ನು ಹೊಂದಿತ್ತು. ಆದರೆ ನಂತರ ಸದಸ್ಯರ ಸಂಖ್ಯೆಯನ್ನು 25 ಕ್ಕೆ ಇಳಿಸಲಾಯಿತು. ಮಹಿಂದಾ ಅಮರವೀರ ಅಧ್ಯಕ್ಷರಾಗದರು. ಅನೇಕ ಹಿರಿಯ ಕೃಷಿ ವಿಜ್ಞಾನಿಗಳನ್ನು ಅದರ ಸದಸ್ಯತ್ವದಿಂದ ಹೊರಗಿಡಲಾಯಿತು. ಅಲ್ಲದೆ ಈ ಪಡೆ ಪ್ರಶ್ನಾರ್ಹ ವೈಜ್ಞಾನಿಕ ಹಿನ್ನೆಲೆಗಳನ್ನು ಹೊಂದಿರುವ ಜನರಿಂದ ತುಂಬಿರುವುದು ಕಂಡು ಬರುತ್ತದೆ. ಉದಾಹರಣೆಗೆ, ಈ ಕಾರ್ಯಪಡೆಯ ಸದಸ್ಯರೊಬ್ಬರು ಒಮ್ಮೆ ಸ್ವಯಂ-ಉತ್ಪಾದಿಸುವ ಅಕ್ಕಿಯ ವೈವಿಧ್ಯತೆಯನ್ನು ಗುರುತಿಸಿದ್ದೆನೆ ಎಂದು ಹೇಳಿಕೊಂಡಿದ್ದರು. ಈ ಅಕ್ಕಿ ಚರಿತ್ರೆಯಲ್ಲಿ ಅನುರಾಧಪುರ ಸಾಮ್ರಾಜ್ಯದ ಸಿಂಹಳ ರಾಜ ದುತುಗೆಮುನುವಿನ ಹತ್ತು ದೈತ್ಯ ಯೋಧರಿಗೆ ಕ್ರಿ,ಪೂ 205 ರಿಂದ ಕ್ರಿ,ಪೂ 161 ನಡುವೆ ಆಹಾರ ನೀಡಿತು. ಕೃಷಿ ವಿಜ್ಞಾನಿಗಳು ಇದನ್ನು ಪರೀಕ್ಷಿಸಿದರು. ಹೇಳಲಾದ ಈ ಧಾನ್ಯವು ಸಿರಿಧಾನ್ಯವೇ ಹೊರತು ಅಕ್ಕಿಯಲ್ಲ ಎಂದು ಕಂಡುಕೊಂಡರು! ಮತ್ತೊಬ್ಬ ಸದಸ್ಯರು ಗ್ಲೈಫೋಸೇಟ್ ಎಂಬ ರಾಸಾಯನಿಕ ಜಲಾಶಯದ ಕಟ್ಟುಗಳನ್ನು ಕರಗಿಸಿದೆ ಎಂದು ಹೇಳಿಕೊಂಡಿದ್ದರು! ಕಾರ್ಯಪಡೆಯೊಳಗಿನ ವೈಜ್ಞಾನಿಕ ದೃಷ್ಟಿಕೋನದ ಸ್ಥಿತಿ ಹೀಗಿದೆ.

ದೊಡ್ಡ ಪ್ರಮಾಣದ ಕಾಂಪೋಸ್ಟ್ ಅನ್ನು ಆಮದು ಮಾಡಿಕೊಳ್ಳುವುದರ ಜೊತೆಗೆ ದೇಶೀಯ ಕಾಂಪೋಸ್ಟ್ ಉತ್ಪಾದನೆಯನ್ನು ಹೆಚ್ಚಿಸಲು, ರಾಸಾಯನಿಕ ಗೊಬ್ಬರಗಳನ್ನು ಬದಲಿಸಲು ನಿರ್ಧಾರ ತೆಗೆದುಕೊಳ್ಳಲಾಯಿತು. ಕಾಂಪೋಸ್ಟ್ ಅನ್ನು "ಸಾವಯವ" ಎಂದು ವರ್ಗೀಕರಿಸಲಾಗುವುದಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ ಏಕೆಂದರೆ ಇದು ಅನೇಕ ವಿಷಕಾರಿ ಜಾಡಿನ ಅಂಶಗಳನ್ನು ಒಳಗೊಂಡಿದೆ.

ಹೊಸ ನೀತಿಯ ಫಲಿತಾಂಶದ ಬಗ್ಗೆ ಕೇವಲ SAEA ಎಚ್ಚರಿಕೆಯನ್ನು ನೀಡಿಲ್ಲ. ಅಕ್ಕಿ, ಕಾಳುಮೆಣಸು ಮತ್ತು ದಾಲ್ಚಿನ್ನಿ ಪುಟ 11 ಕ್ಕೆ







ಪ್ರಧಾನಿಗಳ ಅಮೆರಿಕ ಭೇಟಿ 2021

ಭಾರತದ ವ್ಯೂಹಾತ್ಮಕ ಸ್ವಾಯತ್ತತೆ ನಷ್ಟ

ವಿಶ್ವ ಸಂಸ್ಥೆಯ ಭಾಷಣದಲ್ಲಿ ಮಾಮೂಲಿ ಸ್ವಯಂ-ಪ್ರಾಯೋಜನೆ ಮತ್ತು ಭಾರತವು ಪ್ರಜಾಪ್ರಭುತ್ವದ ತಾಯಿ ನಾಡು ಎಂಬಿತ್ಯಾದಿ ಅಬ್ಬರದ ಹೇಳಿಕೆಗಳನ್ನು ಬಿಟ್ಟರೆ ಹೇಳಿಕೊಳ್ಳುವಂಥದ್ದು ಏನೂ ಇರಲಿಲ್ಲ. ಸಭೆಗಳ ನಂತರ ಹೊರಡಿಸಲಾದ ಜಂಟಿ ಹೇಳಿಕೆಗಳನ್ನು ವಿಶ್ಲೇಷಿಸಿದರೆ ಭಾರತದ ವ್ಯೂಹಾತ್ಮಕ ಸ್ವಾಯತ್ತತೆಯನ್ನು ಕಾಯ್ದುಕೊಳ್ಳಲು ಈ ಸರ್ಕಾರಕ್ಕೆ ಆಸಕ್ತಿಯಿಲ್ಲ ಎನ್ನುವುದೇ ಮೋದಿಯವರ ಅಮೆರಿಕ ಭೇಟಿಯ ಫಲಶ್ರುತಿಯಾಗಿರುವಂತೆ ಕಾಣುತ್ತದೆ.



ಪ್ರಕಾಶ ಕಾರಟ್

ಪ್ರಧಾನಿ ನರೇಂದ್ರ ಮೋದಿಯವರ ಅಮೆರಿಕ ಭೇಟಿಯಲ್ಲಿ ಮೂರು ಪ್ರಮುಖ ಘಟನೆಗಳಿದ್ದವು. ಜೋ ಬೈಡೆನ್ ಜೊತೆ ಪ್ರಥಮ ಮುಖತಃ ಭೇಟಿ, ಕ್ವಾಡ್ ದೇಶಗಳ ನಾಯಕರೊಂದಿಗೆ ಸಭೆ ಮತ್ತು ವಿಶ್ವ ಸಂಸ್ಥೆ ಮಹಾಧಿವೇಶನದಲ್ಲಿ ಭಾಷಣ–ಇವೇ ಆ ಮೂರು ಘಟನೆಗಳು.

ಭಾರತದ ಸಾಕು ಮಾಧ್ಯಮ ಮೋದಿ ಭೇಟಿಯನ್ನು ರಂಗುರಂಗಾಗಿ ಚಿತ್ರಿಸಿದೆ. ಬೈಡೆನ್, ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಮತ್ತು ಕ್ವಾಡ್ ಮೀಟಿಂಗ್ ಫಲಶ್ರುತಿ ಬಗ್ಗೆ ಸರ್ಕಾರ ಒದಗಿಸಿದ ಮಾಹಿತಿಗಳನ್ನು ಮಾಧ್ಯಮಗಳು ಒಂದಿಷ್ಟು ಕೂಡ ಟೀಕೆ ಟಿಪ್ಪಣಿಯಿಲ್ಲದೆ ಯಥಾವತ್ ಪ್ರಕಟಿಸಿವೆ, ಬಿತ್ತರಿಸಿವೆ. ಮೋದಿ ಪಾತ್ರ ಮತ್ತು ಭೇಟಿಯಿಂದ ಆಗಿರುವ ಲಾಭಗಳ ಬಗ್ಗೆ ಕಾರ್ಪೊರೇಟ್ ಮಾಧ್ಯಮಗಳು ಪಾಸಿಟಿವ್ ವರದಿಗಳನ್ನು ನೀಡಿವೆ.

ವಿಶ್ವ ಸಂಸ್ಥೆಯ ಮಹಾಧಿವೇಶನದ ಭಾಷಣದಲ್ಲಿ ಮಾಮೂಲಿ ಸ್ವಯಂ–ಪ್ರಾಯೋಜನೆ ಮತ್ತು ಭಾರತವು ಪ್ರಜಾಪ್ರಭುತ್ವದ ತಾಯಿ ನಾಡು ಎಂಬಿತ್ಯಾದಿ ಅಬ್ಬರದ ಹೇಳಿಕೆಗಳನ್ನು ಬಿಟ್ಟರೆ ಹೇಳಿಕೊಳ್ಳುವಂಥದ್ದು ಏನೂ ಇರಲಿಲ್ಲ. ಏನಿದ್ದರೂ ಸಭೆಗಳ ನಂತರ ಹೊರಡಿಸಲಾದ ಜಂಟಿ ಹೇಳಿಕೆಗಳನ್ನು ಹಾಗೂ ಭೇಟಿಯ ಫಲಶ್ರುತಿಯನ್ನು ವಿಶ್ಲೇಷಿಸಿದರೆ ತುಂಬಾ ವಿಭಿನ್ನವಾದ ಚಿತ್ರಣ ದೊರೆಯುತ್ತದೆ.

ಬೈಡೆನ್–ಮೋದಿ ಮುಖಾಮುಖಿ ಭೇಟಿಯ ನಂತರ ಹೊರಡಿಸಿದ ಜಂಟಿ ಹೇಳಿಕೆಯಲ್ಲಿ ಹೊಸ ಉಪಕ್ರಮಗಳೇನೂ ಕಂಡು ಬಂದಿಲ್ಲ. ಭಾರತ ಒಂದು ಪ್ರಮುಖ ರಕ್ಷಣಾ ಪಾಲುದಾರನ ನೆಲೆಯಲ್ಲಿ ಅದರೊಂದಿಗಿನ ನಿಕಟ ರಕ್ಷಣಾ ಭಾಗಿದಾರಿಕೆ ಬಗ್ಗೆ ಬೈಡೆನ್ ಕಡೆಯಿಂದ ಒತ್ತು ಇದೆ. ಸಾಗಾಟ ಮತ್ತು ಮಿಲಿಟರಿ–ಮಿಲಿಟರಿ ಸಂವಹನ ಹಂಚಿಕೊಳ್ಳುವಿಕೆ, ಮುಂದುವರಿದ ಮಿಲಿಟರಿ ತಂತ್ರಜ್ಞಾನದಲ್ಲಿ ಸಹಕಾರವನ್ನು ಬಲಗೊಳಿಸುವುದು ಮತ್ತು ರಕ್ಷಣಾ ವಾಣಿಜ್ಯ ಹಾಗೂ ಸಹ–ಉತ್ಪಾದನೆ ವಿಚಾರದಲ್ಲಿ ಕೆಲವು ಉಲ್ಲೇಖಗಳು ಸಂಯುಕ್ತ ಹೇಳಿಕೆಯಲ್ಲಿವೆ. ಎಲ್ಲಕ್ಕಿಂತ ಮುಖ್ಯವಾಗಿ, ಪ್ರಾದೇಶಿಕ ಪಾಲುದಾರರೊಂದಿಗೆ ಸಹಕರಿಸುವುದು ಸೇರಿದಂತೆ ಬಹುಪಕ್ಷೀಯ ರಕ್ಷಣಾ ವೇದಿಕೆಗಳನ್ನು ವಿಸ್ತರಿಸಲು ಕೂಡ ಇದರಲ್ಲಿ ಒಂದು ಉಲ್ಲೇಖವಿದೆ. ಇದು ಅಮೆರಿಕ ಮತ್ತು ಕ್ವಾಡ್‌ನಂಥ ಅದರ ಮಿತ್ರ ದೇಶಗಳ ಜೊತೆ ವಿಸ್ತೃತ ಮಿಲಿಟರಿ ಮತ್ತು ಭದ್ರತಾ ಒಪ್ಪಂದಗಳಿಗೆ ಭಾರತವನ್ನು ಸೆಳೆಯುವ ಸ್ಪಷ್ಟ ಸೂಚನೆಯಾಗಿದೆ.

ದ್ವಿಪಕ್ಷೀಯ ವಾಣಿಜ್ಯ ಮಾತುಕತೆ ವಿಚಾರದಲ್ಲಿ ಬೈಡೆನ್ ಆಡಳಿತಕ್ಕೆ ಒಲವು ಇಲ್ಲದಿರುವುದರಿಂದ ಈ ವಿಷಯದಲ್ಲಿ ಯಾವುದೇ ಪ್ರಗತಿಯಾಗಿಲ್ಲ. ಈ ಸಂಬಂಧದಲ್ಲಿ ಇರುವ ಒಂದೇ ಭರವಸೆದಾಯಕ ವಿಚಾರವೆಂದರೆ 2021ರ ಕೊನೆಯೊಳಗೆ ಭಾರತ–ಅಮೆರಿಕ ವಾಣಿಜ್ಯ ನೀತಿ ವೇದಿಕೆಯ ಸಭೆ ಮತ್ತೆ ನಡೆಸುವುದಾಗಿದೆ. ಜಾಗತಿಕ ಭಯೋತ್ಪಾದನೆ ವಿರುದ್ಧ ಹೋರಾಟ, ನಿರ್ಣಾಯಕ ಹಾಗೂ ಉದಯೋನ್ಮುಖ ತಂತ್ರಜ್ಞಾನಗಳು, ತಂತ್ರಜ್ಞಾನ ಸಂಬಂಧೀ ಸಹಕಾರ, ತಾಪಮಾನ ಬದಲಾವಣೆಯ ಸವಾಲು ಮೊದಲಾದ ವಿಚಾರಗಳಲ್ಲಿ ಹಿಂದೆ ಹೇಳಿದ್ದನ್ನೇ ಈಗಲೂ ಪುನರುಚ್ಚರಿಸಲಾಗಿದೆ.

ಅಧ್ಯಕ್ಷ ಬೈಡೆನ್, ನಿಯೋಗ ಮಟ್ಟದ ಮಾತುಕತೆಯ ನೇತೃತ್ವ ವಹಿಸಿರಲಿಲ್ಲ. ಅದನ್ನು ಉಪಾಧ್ಯಕ್ಷೆ ಕಮಲಾ ಹ್ಯಾರಿಸ್‌ರಿಗೆ ವಹಿಸಿದ್ದರು ಎನ್ನುವುದು ಇಲ್ಲಿ ಗಮನಾರ್ಹ.

ಕ್ವಾಡ್ ನಾಯಕರ ಸಭೆಯು ಚತುಷ್ಪಕ್ಷೀಯ ಮೈತ್ರಿಕೂಟವನ್ನು ಕ್ರೋಢೀಕರಿಸುವತ್ತ ಒಂದು ಹೆಜ್ಜೆ. ಇದು ಕ್ವಾಡ್ ಸದಸ್ಯ ರಾಷ್ಟ್ರಗಳಾದ ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾಗಳ ನಾಯಕರ ನಡುವಿನ ಮೊದಲ ನೇರ ಸಭೆಯಾಗಿತ್ತು. ಮಾರ್ಚ್‌ನಲ್ಲಿ ಆನ್‌ಲೈನ್ ಸಭೆ ನಡೆದಿತ್ತು. ಆಸ್ಟ್ರೇಲಿಯಾ, ಬ್ರಿಟನ್ ಮತ್ತು ಅಮೆರಿಕ ಒಳಗೊಂಡ ತ್ರಿಪಕ್ಷೀಯ ಭದ್ರತಾ ಮೈತ್ರಿಕೂಟ ಔಕುಸ್ (ಎಯುಕೆಯುಎಸ್) ರಚನೆಯ ಘೋಷಣೆಯಾದ ಕೆಲವೇ ದಿನಗಳಲ್ಲಿ ಕ್ವಾಡ್ ಸಭೆ ನಡೆದಿದೆ. ಆಸ್ಟ್ರೇಲಿಯಾವನ್ನು ನ್ಯೂಕ್ಲಿಯರ್ ಶಕ್ತಿ ಚಾಲಿತ ಜಲಾಂತರ್ಗಾಮಿಗಳೊಂದಿಗೆ ಸಜ್ಜುಗೊಳಿಸುವ ಉದ್ದೇಶ ಹೊಂದಿರುವ ಈ ಹೊಸ ಕೂಟವು ಚೀನಾದ ವಿರುದ್ಧ ನಿರ್ದೇಶಿತ ಎನ್ನುವುದು ಸ್ಪಷ್ಟವಾಗಿದೆ. ಇಂಥ ಉಪಕ್ರಮದ ನಂತರ ಕ್ವಾಡ್‌ನ ಪಾತ್ರವೇನು ಎಂಬುದರ ಬಗ್ಗೆ ಸಾಕಷ್ಟು ಊಹಾಪೋಹ ಹುಟ್ಟಿಕೊಂಡಿದೆ. ಡೀಸೆಲ್ ಚಾಲಿತ ಸಬ್‌ಮೆರಿನ್ ಸರಬರಾಜಿಗೆ ಫ್ರಾನ್ಸ್‌ನೊಂದಿಗೆ ಆಸ್ಟ್ರೇಲಿಯಾ ಒಪ್ಪಂದ ಮಾಡಿಕೊಂಡಿದ್ದಿದೆ. ಆದರೆ, ಫ್ರಾನ್ಸ್ ಅನ್ನು ಕೂಡ ಕತ್ತಲ್ಲಲಿ ಇಡಲಾಗಿದೆ. ಮಾತ್ರವಲ್ಲದೆ ಭಾರತ ಮತ್ತು ಜಪಾನ್ ದೇಶಗಳನ್ನು ಕೂಡ ಈ ಹೊಸ ಮಿಲಿಟರಿ ಕೂಟದ ಬಗ್ಗೆ ವಿಶ್ವಾಸಕ್ಕೆ ತೆಗೆದುಕೊಳ್ಳಲಾಗಿಲ್ಲ. ಔಕುಸ್‌ನಲ್ಲಿ ಕ್ವಾಡ್‌ನ ಎರಡು ಸದಸ್ಯ ದೇಶಗಳು (ಅಮೆರಿಕ, ಆಸ್ಟ್ರೇಲಿಯಾ) ಕೂಡ ಇವೆ.

ಬಹಳ ಕಾಲದಿಂದ ಅಮೆರಿಕದೊಂದಿಗೆ ಮೈತ್ರಿ ಮಾಡಿಕೊಳ್ಳುವಂತೆ ಪ್ರತಿಪಾದಿಸುತ್ತಿರುವ ಭಾರತದ ಸಾಮರಿಕ ವ್ಯವಸ್ಥೆಯು ಇದರಿಂದ ಅಂತದ್ದೇನೂ ತೊಂದರೆಯಾಗಿಲ್ಲ ಎಂದು ನಟಿಸಲು, ಈ ಹೊಸ ಮೈತ್ರಿಕೂಟವು ಕೋವಿಡ್ ವ್ಯಾಕ್ಸಿನ್ ಸಹಕಾರ, ಪ್ರಮುಖ ತಂತ್ರಜ್ಞಾನ ಹಾಗೂ ಸರಬರಾಜು ಸರಪಣಿಗೆ ಉತ್ತೇಜನ ಮತ್ತು ಆರ್ಥಿಕ ಸಮನ್ವಯ ಬಲಪಡಿಸುವಿಕೆ ಮುಂತಾದ ಮಿಲಿಟರಿಯೇತರ ವಿಷಯಗಳ ಮೇಲೆ ಗಮನ ಕೇಂದ್ರೀಕರಿಸಲು ಕ್ವಾಡ್‌ಗೆ ನೆರವಾಗುತ್ತದೆ ಎಂದು ಬಿಂಬಿಸಲು ಪ್ರಯತ್ನಿಸಿದೆ,

ಕ್ವಾಡ್ ಸಭೆಯ ನಂತರ ನೀಡಲಾದ ಸಂಯುಕ್ತ ಹೇಳಿಕೆಯು ಈ ವಿಚಾರಗಳಲ್ಲಿ ಯಾವುದೇ ಸ್ಪಷ್ಟನೆ ಒದಗಿಸಿಲ್ಲ. ಭಾರತ–ಶಾಂತಸಾಗರ ವಲಯದಲ್ಲಿ ಸ್ವತಂತ್ರ, ಮುಕ್ತ, ಕಾನೂನು ಸಮ್ಮತ ಆಡಳಿತ ಅವಶ್ಯ ಎಂಬ ಮೂಲ ಉದ್ದೇಶವನ್ನು ಹೇಳಿಕೆ ಮತ್ತೆ ಒತ್ತಿ ಹೇಳಿದೆ. ಇದು ಮೈತ್ರಿಕೂಟದ ಭದ್ರತಾ ಕಳವಳವನ್ನು ಎತ್ತಿ ತೋರಿಸುತ್ತದೆ. ಲಸಿಕೆ ಸಹಕಾರದ ಬಗ್ಗೆ ಹೇಳುವುದಾದರೆ, ಕ್ವಾಡ್ ಲಸಿಕೆ ಪಾಲುದಾರಿಕೆಯ ವೈಫಲ್ಯವನ್ನು ಹೇಳಿಕೆ ಮುಚ್ಚಿ ಹಾಕಿದೆ. ಮಾರ್ಚ್ ಸಭೆಯಲ್ಲಿ ನಿರ್ಧರಿಸಿದಂತೆ ಇಂಡೊ–ಪೆಸಿಫಿಕ್ ವಲಯಕ್ಕೆ ನೂರು ಕೋಟಿ ಡೋಸ್ ಲಸಿಕೆಯನ್ನು ಕ್ವಾಡ್ ಲಸಿಕೆ ಪಾಲುದಾರಿಕೆ ಒಪ್ಪಂದದ ಪ್ರಕಾರ ಸರಬರಾಜು ಮಾಡಬೇಕಿತ್ತು. ಅಭಿವೃದ್ಧಿಶೀಲ ದೇಶಗಳಿಗೆ ತನ್ನ ಸಂಗ್ರಹದಲ್ಲಿರುವ ಲಸಿಕೆ ಪೂರೈಸಲು ಅಮೆರಿಕ ನಿರಾಕರಿಸಿದೆ. ಬಯಾಲಾಜಿಕಲ್–ಇ ಸಂಸ್ಥೆಯಲ್ಲಿ ಜಾನ್ಸನ್ ಅಂಡ್ ಜಾನ್ಸನ್ ಲಸಿಕೆಯನ್ನು ಉತ್ಪಾದಿಸುವ ಹಾಗೂ ರಫ್ತು ಮಾಡುವ ಹೊಣೆಯನ್ನು ಭಾರತಕ್ಕೆ ವಹಿಸಲಾಗಿತ್ತು. ಈ ವಿಚಾರದಲ್ಲಿ ಭಾರತ ಭಾರಿ ವೈಫಲ್ಯ ಕಂಡಿದೆ. ಅದು ಎಲ್ಲ ಲಸಿಕೆಗಳನ್ನು ರಫ್ತು ಮಾಡುವುದನ್ನು ನಿಲ್ಲಿಸಬೇಕಾಗಿದೆ. ಬಯಾಲಾಜಿಕಲ್–ಇ ನಲ್ಲಿ ಉತ್ಪಾದನೆಯಾಗುವ ವ್ಯಾಕ್ಸಿನನ್ನು ಈ ವರ್ಷಾಂತ್ಯ ರಫ್ತು ಮಾಡಲಾಗುತ್ತದೆ ಎಂದು ಭಾರತ ಈಗ ಆಶ್ವಾಸನೆ ನೀಡಿದೆ. ಚೀನಾದ ವ್ಯಾಕ್ಸಿನ್ ರಾಜತಾಂತ್ರಿಕತೆಯನ್ನು ಎದುರಿಸುವ ಭಾರತದ ಉದ್ದೇಶ ಈಗಾಗಲೇ ವಿಫಲಗೊಂಡಿದೆ. ಯಾಕೆಂದರೆ ಕಳೆದ ಕೆಲವು ತಿಂಗಳಲ್ಲಿ ಇಂಡೋನೇಶ್ಯಾ, ಫಿಲಿಪ್ಪೀನ್ಸ್ ಮತ್ತು ಥಾಯ್‌ಲ್ಯಾಂಡ್‌ನಂಥ ಆಸಿಯಾನ್ ದೇಶಗಳಿಗೆ ಚೀನಾ ಕೋಟ್ಯಂತರ ಡೋಸ್ ಲಸಿಕೆಯನ್ನು ರಫ್ತು ಮಾಡಿದೆ.

ತುಂಬಾ ನಿರ್ಣಾಯಕ ಹಾಗೂ ಉದಯೋನ್ಮುಖ ತಂತ್ರಜ್ಞಾನಗಳ ಕ್ಷೇತ್ರ ಮತ್ತು ಸರಬರಾಜು ಸರಪಣಿ ಅಭಿವೃದ್ಧಿಪಡಿಸುವ ಬಗ್ಗೆ ಸಹಕಾರದ ಸಾಮಾನ್ಯ ಹೇಳಿಕೆಗಳು ಬಂದಿವೆ. ಹೊಸ ಕ್ವಾಡ್ ಮೂಲಸೌಕರ್ಯ ಪಾಲುದಾರಿಕೆ ಬಗ್ಗೆ ಒಂದು ಅಸ್ಪಷ್ಟ ಘೋಷಣೆ ಮಾಡಲಾಗಿದೆ. ಬೆಲ್ಟ್ ಅಂಡ್‌ರೋಡ್ ಉಪಕ್ರಮವನ್ನು ಎದುರಿಸುವ ಈ ಉಪಕ್ರಮವು ಯಾವುದೇ ನಿರ್ದಿಷ್ಟ ಯೋಜನೆ ಇಲ್ಲದಿರುವುದರಿಂದ ಮೇಲೇಳುವಂತೆಯೇ ಕಾಣುತ್ತಿಲ್ಲ.

'ರಾಜತಾಂತ್ರಿಕತೆಯಲ್ಲಿ, ಹೇಳಲು ಏನೂ ಗಟ್ಟಿಯಾದ್ದು ಇಲ್ಲದಿರುವಾಗ ಗಾಳಿಯಲ್ಲಿ ತೇಲಿಬಿಡುವ ದೀರ್ಘ ಹೇಳಿಕೆಗಳು ಅಗತ್ಯವಾಗಿ ಬಿಡುತ್ತವೆ. ಕ್ವಾಡ್ ಹೇಳಿಕೆಯಲ್ಲಿ 2,145 ಪದಗಳಿವೆ. ಆದರೆ ನಮಗೆ ಈಗಾಗಲೇ ಗೊತ್ತಿರದ ವಿಚಾರವೇನನ್ನೂ ಅದು ತಿಳಿಸುವುದಿಲ್ಲ" ಅದು ಎಂದು ವಿದೇಶ ವ್ಯವಹಾರಗಳ ವಿಶ್ಲೇಷಕ ಎಂ.ಕೆ. ಭದ್ರಕುಮಾರ್ ಹೇಳಿರುವುದು ಸರಿಯಾಗೇ ಇದೆ.

ಈ ಇಡೀ ಕಸರತ್ತಿನಿಂದ ಕ್ವಾಡ್, ಭಾರತ–ಶಾಂತಸಾಗರ ವಲಯದಲ್ಲಿ ಅಮೆರಿಕದ ಭೌಗೋಳಿಕ–ರಾಜಕೀಯ ಕಾರ್ಯವ್ಯೂಹದಲ್ಲಿ ಒಂದು ಸಾಧನವಾಗಿದೆ ಎಂದು ತಿಳಿದುಕೊಳ್ಳ ಬಹುದು. ಔಕುಸ್ ಆಗಲಿ, ಕ್ವಾಡ್ ಆಗಲಿ, ಯಾವ ದಿಕ್ಕಿನಲ್ಲಿ ಸಾಗಬೇಕೆಂಬುದನ್ನು ಅಮೆರಿಕ ನಿರ್ಧರಿಸುತ್ತದೆ. ಈ ಉದ್ಯಮದಲ್ಲಿ ಭಾರತ ಒಂದು ಅಧೀನ ಪಾಲುದಾರ ಅಷ್ಟೇ.

ಭಾರತದೊಂದಿಗೆ ಸಮಾಲೋಚಿಸದೇ ಅಫಘಾನಿಸ್ತಾನದಿಂದ ಅಮೆರಿಕ ಹಿಂದೆ ಸರಿದಿದ್ದು ಅಥವಾ ಔಕುಸ್ ರಚನೆಯನ್ನು ರಹಸ್ಯವಾಗಿ ಮಾಡಿದ್ದು ಇವೇ ಮೊದಲಾದ ವಿದ್ಯಮಾನಗಳು ವ್ಯೂಹಾತ್ಮಕ ಸ್ವಾಯತ್ತತೆಯನ್ನು ಉಳಿಸಿಕೊಳ್ಳಬೇಕಾದ ಅಗತ್ಯದ ಬಗ್ಗೆ ಮೋದಿ ಸರ್ಕಾರವನ್ನು ಹೆಚ್ಚು ವಿವೇಕಶಾಲಿಯಾಗಿ ಮಾಡಬೇಕಿತ್ತು. ಈ ರೀತಿ ಕಾಪಾಡಿಕೊಳ್ಳಲು ಚೀನಾದೊಂದಿಗೆ ಎಲ್ಲ ಕ್ಷೇತ್ರಗಳಲ್ಲಿ ಬಾಂಧವ್ಯ ಉಳಿಸಿಕೊಳ್ಳುವುದರ ಜೊತೆಯಲ್ಲೇ ಬಾಕಿಯಿರುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಚೀನಾದೊಂದಿಗೆ ನೇರವಾಗಿ ವ್ಯವಹರಿಸುವುದು ಇದಕ್ಕೆ ಅಗತ್ಯವಿದೆ. ಭಾರತದ ವ್ಯೂಹಾತ್ಮಕ ಸ್ವಾಯತ್ತತೆಯನ್ನು ಕಾಯ್ದುಕೊಳ್ಳಲು ಈ ಸರ್ಕಾರಕ್ಕೆ ಆಸಕ್ತಿಯಿಲ್ಲ ಎನ್ನುವುದು ಮೋದಿಯವರ ಅಮೆರಿಕ ಭೇಟಿಯ ಫಲಶ್ರುತಿ ತೋರಿಸುತ್ತದೆ.

ಅನು: ವಿಶ್ವ

ಪ್ರಧಾನಿ ಚಿಂತನೆ- ದೇಶದಲ್ಲಿ - ವಿದೇಶದಲ್ಲಿ

Subscribe www.patreon.com/cartoonistsatish



ಜಾಗತಿಕ ಸವಾಲುಗಳನ್ನು ಒಂದು ವಿಜ್ಞಾನ-ಆಧಾರಿತ, ವಿಚಾರಶೀಲ ಮತ್ತು ಪ್ರಗತಿಶೀಲ ಚಿಂತನೆಯಿಂದ ಸಮನ ಮಾಡಬಹುದು!

ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ



ಸಪ್ಟಂಬರ್ 27, 2021 ಇತಿಹಾಸ ನಿರ್ಮಿಸಿದ ಭಾರತ ಬಂದ್



ಉತ್ತರಪ್ರದೇಶ



ಪಂಜಾಬ್



ಬಿಹಾರ

ದಿಲ್ಲಿ ಗಡಿಗಳಲ್ಲಿ ರೈತರ ಐತಿಹಾಸಿಕ ಹೋರಾಟ 10 ತಿಂಗಳು ಪೂರೈಸುತ್ತಿರುವ ಸಂದರ್ಭದಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿದ 10 ಗಂಟೆಗಳ ಬಂದ್ ಕರೆಗೆ ದೇಶಾದ್ಯಂತ ರೈತರು ಮತ್ತು ಇತರ ಜನವಿಭಾಗಗಳು ಪ್ರತಿಭಟನೆಗಳು, ಮತಪ್ರದರ್ಶನಗಳು, ಹೆದ್ದಾರಿ ತಡೆ, ರೈಲು ತಡೆಗಳ ಮೂಲಕ ಅದ್ಭುತವಾಗಿ ಓಗೊಟ್ಟಿದ್ದಾರೆ.

ಸಪ್ಟಂಬರ್ 27, 2021ರ ಈ ಭಾರತ ಬಂದ್ ನಿಜಕ್ಕೂ ಐತಿಹಾಸಿಕ, ಅದರ ಹರಹು ಮತ್ತು ತೀವ್ರತೆ ರೈತರ ಅಭೂತಪೂರ್ವ ಹೋರಾಟಕ್ಕೆ ಸೌಹಾರ್ದ ವ್ಯಕ್ತಪಡಿಸಿ ಈ ಮೊದಲು ಡಿಸೆಂಬರ್ 8,2020 ಮತ್ತು ಮಾರ್ಚ್ 26, 2021ರಂದು ನಡೆದ ಬಂದ್ ಗಳನ್ನೂ ಮೀರಿಹೋಗಿದೆ ಎಂದು ಅಖಿಲ ಬಾರತ ಕಿಸಾನ್ ಸಭಾದ ಅಧ್ಯಕ್ಷರೂ ಸಂಯುಕ್ತ ಕಿಸಾನ್ ಮೋರ್ಚಾದ ಹಿರಿಯ ಮುಖಂಡರಲ್ಲಿ ಒಬ್ಬರೂ ಆಗಿರುವ ಅಶೋಕ ಧವಳೆ ಹೇಳಿದ್ದಾರೆ.

ಸಂಯುಕ್ತ ಕಿಸಾನ್ ಮೋರ್ಚಾ 605 ರೈತರು ಹುತಾತ್ಮರಾಗಿರುವ ರೈತ ಹೋರಾಟ 10 ತಿಂಗಳು ಅಥವ 305 ದಿನಗಳನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ ಈ ಬಂದ್‌ಗೆ ಕರೆ ನೀಡಿತ್ತು, ಅಲ್ಲದೆ, ಸರಿಯಾಗಿ ಒಂದು ವರ್ಷದ ಹಿಂದೆ, ಸಪ್ಟಂಬರ್ 27, 2020ರಂದು ರಾಷ್ಟ್ರಪತಿ ಗಳು ರೈತ–ವಿರೋಧಿ, ಜನ–ವಿರೋಧಿ, ಕೃಷಿ–ವಿರೋಧಿ ಮತ್ತು ಕಾರ್ಪೊರೇಟ್–ಪರವಾದ ಮೂರು ಕೃಷಿ ಮಸೂದೆಗಳಿಗೆ ಒಪ್ಪಿಗೆಯ ಮುದ್ರೆಯೊತ್ತಿ ಅವು ಕಾಯ್ದೆಯ ರೂಪ ಪಡೆದವು ಎಂಬುದನ್ನೂ ಧವಳೆಯವರು ನೆನಪಿಸಿದ್ದಾರೆ.

ಮೋದಿ ಆಳ್ವಿಕೆ ಸಪ್ಟಂಬರ್ 17ರಂದು ಲೋಕಸಭೆಯಲ್ಲಿ ಮತ್ತು ಸಪ್ಟಂಬರ್ 20ರಂದು ರಾಜ್ಯ ಸಭೆಯಲ್ಲಿ ಪ್ರಜಾಪ್ರಭುತ್ವದ ಕೊಲೆಗೈದು ಈ ಮೂರು ಮಸೂದೆಗಳನ್ನು ಸಂಸತ್ತಿನ ಗಂಟಲಲ್ಲಿ ಇಳಿಸಿತ್ತು. ಅಷ್ಟೇ ಅಲ್ಲ, ಇದೇ ಸರಕಾರ ಅದೇ ರೀತಿಯಲ್ಲಿ ಸಪ್ಟಂಬರ್ 29ರಂದು ಉಳಿದ ಮೂರು ಕಾರ್ಮಿಕ–ವಿರೋಧಿ ಮತ್ತು ಕಾರ್ಪೊರೇಟ್–ಪರವಾದ ಕಾರ್ಮಿಕ ಸಂಹಿತೆಗಳನ್ನು ಪಾಸು ಮಾಡಿಕೊಂಡಿಸಿಕೊಂಡಿತು ಎಂಬುದನ್ನೂ ಅವರು ಈ ಸಂದರ್ಭದಲ್ಲಿ ನೆನಪಿಸಿದ್ದಾರೆ.

ಪಂಜಾಬ್ ಮತ್ತು ಹರ್ಯಾಣದಲ್ಲಿ ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು, ಲಿಂಕ್ ರೋಡ್ ಗಳು ಮತ್ತು ರೈಲ್ವೆ ಹಳಿಗಳಲ್ಲಿ ಬೆಳಿಗ್ಯಯಿಂದಲೇ ರೈತರು ಜಮಾಯಿಸಿ ತಡೆ ಹಾಕಿದರು.

ಪಂಜಾಬಿನಲ್ಲಿ 500ಕ್ಕೂ ಹೆಚ್ಚು ಸ್ಥಳಗಳಲ್ಲಿ ಪ್ರತಿಭಟನೆಗಳು ಆರಂಭವಾದ್ದರಿಂದ 14 ರೈಲುಗಳನ್ನು ರದ್ದು ಮಾಡಲಾಗಿದೆ ಎಂದು ವರದಿಯಾಗಿದೆ. ಹರ್ಯಾಣದ ಒಂದೇ ಜಿಲ್ಲೆಯಲ್ಲಿ 25 ಕಡೆಗಳಲ್ಲಿ ಹೆದ್ದಾರಿಗಳಲ್ಲಿ ಸಂಚಾರಕ್ಕೆ ತಡೆ ಬಿದ್ದಿದೆ.

ಮಧ್ಯಪ್ರದೇಶದಲ್ಲಿರುವ ಕೇಂದ್ರ ಕೃಷಿ ಮಂತ್ರಿಗಳ ಚುನಾವಣಾ ಕ್ಷೇತ್ರ ಹರ್ದಾದಲ್ಲಿ ಎಲ್ಲ ಅಂಗಡಿ–ಮುಂಗಟ್ಟುಗಳೂ ಬಂದಾಗಿವೆ

10 ತಿಂಗಳಿಂದ ರೈತರು ಜಮಾಯಿಸಿರುವ ದಿಲ್ಲಿಯ ಗಡಿಗಳಲ್ಲಿ, ಸಿಂಘು, ಟಿಕ್ರಿ ಮತ್ತು ಗಾಝೀಪುರದಲ್ಲಿ ಜನಸಂದಣಿ ಬೆಳಿಗ್ಯೆಯಿಂದಲೇ

⇨⇨



ಕೆ.ಎಂ.ಪಿ. ಹೆದ್ದಾರಿ



ಪಶ್ಚಿಮ ಬಂಗಾಲ

ರಾಜ್ಯದ ಹಲವೆಡೆ ಪ್ರತಿಭಟನೆಯ ಬಿಸಿ: ಕೇಂದ್ರದ ವಿರುದ್ಧ ಮೊಳಗಿದ ರಣಕಹಳೆ

ಕೃಷಿ ಕಾಯ್ದೆಗಳು, ಕಾರ್ಮಿಕ ಸಹಿತೆಗಳ ರದ್ದತಿ ಸೇರಿದಂತೆ, ಜನತೆಯ ಪ್ರಶ್ನೆಗಳ ಪರಿಹಾರಕ್ಕಾಗಿ ದೇಶವ್ಯಾಪಿ ರೈತ–ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ 'ಭಾರತ ಬಂದ್' ಗೆ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಪ್ರತಿಭಟನೆಯ ಕಾವು ಜೋರಾಗಿದ್ದವು.

ಹಲವು ಕಡೆ ವಿನೂತನ ಪ್ರತಿಭಟನೆಗಳು ನಡೆದಿವೆ. ಹಲವು ಕಡೆಗಳಲ್ಲಿ ರೈತ ಪರ ಸಂಘಟನೆಗಳು ಬೆಳಗ್ಗೆಯಿಂದಲೇ ಪ್ರತಿಭಟನೆ ನಡೆಸಿದ್ದಾರೆ. ಬೆಂಗಳೂರಿನ ಟೌನ್‌ಹಾಲ್, ಮೈಸೂರು ಬ್ಯಾಂಕ್ ವೃತ್ತ, ಮೌರ್ಯ ವೃತ್ತ, ಕೆ.ಆರ್.ಪುರಂ ಸೇರಿದಂತೆ ನಗರದ ಹಲವಡೆ ಪ್ರತಿಭಟನೆಗಳು ನಡೆದಿವೆ.

ನಗರದ ಟೌನ್‌ಹಾಲ್‌ನಲ್ಲಿ ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ(ಎಐಕೆಎಸ್‌ಸಿಸಿ), ಜಂಟಿ ಕಾರ್ಮಿಕ ಸಂಘಟನೆಗಳ ವೇದಿಕೆ(ಜೆಸಿಟಿಯು), ದಲಿತಪರ ಸಂಘಟನೆಗಳು ಸೇರಿದಂತೆ ವಿವಿಧ ಕನ್ನಡ ಪರ ಸಂಘಟನೆಗಳು ಸಾವಿರಾರು ಜನತೆ ಜಮಾಯಿಸಿದ್ದರು.

ಮೈಸೂರು ಬ್ಯಾಂಕಿನಲ್ಲಿ ಸೇರಿದ ಪ್ರತಿಭಟನಾಕಾರರನ್ನು ಉದ್ದೇಶಿಸಿ ವಿವಿಧ ಮುಖಂಡರು ಮಾತನಾಡಿ ಕೇಂದ್ರ ಸರ್ಕಾರ ರೈತ ವಿರೋಧಿ ಧೋರಣೆಗಳನ್ನು ಅನುಸರಿಸುತ್ತಿದೆ. ಈ ಬಗ್ಗೆ ದೆಹಲಿಯಲ್ಲಿ ನಿರಂತರವಾಗಿ ಪ್ರತಿಭಟನೆ ನಡೆಯುತ್ತಿದ್ದರೂ ಸಹ ಎಚ್ಚೆತ್ತುಕೊಳ್ಳುತ್ತಿಲ್ಲ. ಕಣ್ಣು, ಕಿವಿ ಇಲ್ಲದಂತೆ ವರ್ತಿಸುತ್ತಿದೆ. ರೈತ ವಿರೋಧಿಯಾದಂತಹ ಕಾನೂನುಗಳನ್ನು ಸರ್ಕಾರ ಕೂಡಲೇ ವಾಪಸ್ ಪಡೆಯಬೇಕು. ದೇಶದಲ್ಲಿ ಕಾರ್ಮಿಕರ ರಕ್ಷಣೆಗಾಗಿ ಇದ್ದಂತಹ 45ಕ್ಕೂ ಹೆಚ್ಚಿನ ಕಾರ್ಮಿಕ ಕಾನೂನುಗಳನ್ನು ಬದಲಿಸಿ ರಕ್ಷಣೆ ಇಲ್ಲದಂತಹ ಕೇವಲ ನಾಲ್ಕು ಸಂಹಿತೆಗಳನ್ನಾಗಿ ಮಾರ್ಪಡಿಸುತ್ತಿರುವುದನ್ನು ಕೂಡಲೇ ವಾಪಸ್ಸು ಪಡೆಯಬೇಕು. ಅಲ್ಲದೆ, ಗಗನಕ್ಕೆ ಏರಿರುವ ಅಡುಗೆ ಎಣ್ಣೆ, ಪೆಟ್ರೋಲ್–ಡೀಸೆಲ್ ಬೆಲೆಗಳು, ಗ್ಯಾಸ್ ಸಿಲಿಂಡರ್ ಬೆಲೆಗಳು, ದಿನನಿತ್ಯದ ಆಹಾರ ಪದರ್ಥಗಳ ಬೆಲೆ ಏರಿಕೆಯಿಂದಾಗಿ ಜನ ಸಾಮಾನ್ಯರ ಸ್ಥಿತಿ ದುಸ್ಥಿತಿಗೆ

⇨⇨



ಆಂಧ್ರಪ್ರದೇಶ



ಬೆಂಗಳೂರು



ಬೆಳಗಾವಿ



ತ್ರಿಪುರ



ತಮಿಳುನಾಡು



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ಮಾತೃಭೂಮಿ

ಕಾರ್ಮಿಕ-ರೈತ ಐಕ್ಯತೆ ಕ್ರಿಯಾಶೀಲವಾಗಿ ಬೆಳೆಯುತ್ತಿರುವುದನ್ನು ಎತ್ತಿ ತೋರಿದ ಭಾರತ ಬಂದ್

ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿದ್ದ ಸಪ್ಟಂಬರ್ 27 ರ ಭಾರತ ಬಂದ್ ದೊಡ್ಡ ರೀತಿಯಲ್ಲಿ ಯಶಸ್ವಿಯಾಗಿದೆ. ಈ ಬೃಹತ್ ಪ್ರತಿಭಟನಾ ಕಾರ್ಯಾಚರಣೆ ಮೂರು ಕೃಷಿ ಕಾಯ್ದೆಗಳು ಸಪ್ಟಂಬರ್ 27, 2020 ರಂದು ರಾಷ್ಟ್ರಪತಿಗಳ ಒಪ್ಪಿಗೆಯೊಂದಿಗೆ ಜಾರಿಗೆ ಬಂದು ಸರಿಯಾಗಿ ಒಂದು ವರ್ಷವಾಗಿರುವ ದಿನದಂದು ನಡೆದಿದೆ.

ಇದರಲ್ಲಿ ಕೋಟ್ಯಂತರ ಜನರು-ರೈತರು, ಕೃಷಿ ಕೂಲಿಕಾರರು, ಕೈಗಾರಿಕಾ ಕಾರ್ಮಿಕರು, ಸಾರಿಗೆ ಕಾರ್ಮಿಕರು, ನೌಕರರು, ಅಂಗಡಿಕಾರರು, ವಿದ್ಯಾರ್ಥಿಗಳು, ಯುವಜನರು ಮತ್ತು ಮಹಿಳೆಯರು-ಭಾಗವಹಿಸಿರುವುದು ಕಾಣ ಬಂದಿದೆ.

ಹೆಚ್ಚಿನ ಪ್ರತಿಪಕ್ಷಗಳು, ಪ್ರಾದೇಶಿಕ ಪಕ್ಷಗಳು ಕೂಡ ಬಂದ್‌ಗೆ ಬೆಂಬಲ ನೀಡಿದರು. ಇದಕ್ಕೆ ಒಂದು ಅಪವಾದವೆಂದರೆ ಪಶ್ಚಿಮ ಬಂಗಾಲದಲ್ಲಿ ತೃಣಮೂಲ ಕಾಂಗ್ರೆಸ್. ಅದು ಬಂದನ್ನು ವಿರೋಧಿಸಿತು ಮತ್ತು ರಾಜ್ಯ ಸರಕಾರ ಪ್ರತಿಭಟನಾಕಾರರ ವಿರುದ್ಧ ಕ್ರಮ ಕೈಗೊಂಡಿತು.

ಇದರಲ್ಲಿ ಭಾಗವಹಿಸಿದವರ ಪ್ರಮಾಣ ಮತ್ತು ಗಳಿಸಿದ ಬೆಂಬಲದ ವಿಸ್ತಾರದ ದೃಷ್ಟಿಯಿಂದ ಇದು ಸಂಯುಕ್ತ ಕಿಸಾನ್ ಮೋರ್ಚಾದ ಈ ವರ್ಷದ ಮಾರ್ಚ್ 26ರ ಕರೆಗೆ ಹೋಲಿಸಿದರೆ ಇನ್ನೂ ವ್ಯಾಪಕವಾದ ಸ್ಪಂದನೆಯನ್ನು ಪಡೆದಿದೆ. ಆಗ ಚುನಾವಣೆಗಳು ನಡೆಯಲಿದ್ದ ಅಸ್ಸಾಂ, ಪಶ್ಚಿಮ ಬಂಗಾಲ, ತಮಿಳುನಾಡು ಮತ್ತು ಕೇರಳ ಈ ನಾಲ್ಕು ರಾಜ್ಯಗಳು ಮತ್ತು ಪಾಂಡಿಚೇರಿ ಕೇಂದ್ರಾಡಳಿತ ಪ್ರದೇಶಕ್ಕೆ ಬಂದ್ ನಿಂದ ವಿನಾಯ್ತಿ ಕೊಡಲಾಗಿತ್ತು. ಈ ಬಾರಿ ಬಂದ್ ಈ ಎಲ್ಲ ರಾಜ್ಯಗಳನ್ನೂ ತಟ್ಟಿದೆ, ಕೇರಳದಲ್ಲಂತೂ ಚಟುವಟಿಕೆಗಳು ಸಂಪೂರ್ಣವಾಗಿ ಸ್ತಬ್ಧಗೊಂಡವು. ಕಾರ್ಮಿಕ ಸಂಘಗಳು, ವ್ಯಾಪಾರಸ್ಥರ ಸಂಘಟನೆಗಳು ಮತ್ತು ಇತರ ವಲಯಗಳ ಭಾಗವಹಿಸುವಿಕೆಯೂ ಹೆಚ್ಚು ವ್ಯಾಪಕವಾಗಿತ್ತು. ಇದು ಕಾರ್ಮಿಕ-ರೈತ ಐಕ್ಯತೆ ಕ್ರಿಯೆಯಲ್ಲಿ ಬೆಳೆಯುತ್ತಿರುವುದನ್ನು ಎತ್ತಿ ತೋರಿದೆ. ಈ ಬಂದ್, ನವಂಬರ್ 26ರಂದು ದಿಲ್ಲಿಯ ಗಡಿಗಳಲ್ಲಿ ಆರಂಭವಾದ, ಹತ್ತು ತಿಂಗಳಿಂದ ನಡೆಯುತ್ತಿರುವ ರೈತರ ಹೋರಾಟಗಳು ಇನ್ನೂ ರಭಸ ಕಳಕೊಂಡಿಲ್ಲ ಎಂಬುದನ್ನು ಗಟ್ಟಿಯಾಗಿ ನೆನಪಿಸಿದೆ.

ಮೂರು ಕೃಷಿ ಕಾಯ್ದೆಗಳನ್ನು ಹಿಂತೆಗೆದು ಕೊಳ್ಳುವದಿಲ್ಲವೆಂದು ಮೋದಿ ಸರಕಾರ ಪಟ್ಟು ಹಿಡಿದಿರುವಾಗ, ಈ ಬಂದ್ ಈ ಹೋರಾಟ ಮುಂದುವರೆಯುತ್ತದೆ ಮಾತ್ರವಲ್ಲ, ತೀಕ್ಷ್ಣಗೊಳ್ಳುತ್ತದೆ ಎಂಬುದರ ಸೂಚನೆ. ರೈತರ ಆಂದೋಲನ ಉತ್ತರಪ್ರದೇಶ ಮತ್ತು ಉತ್ತರಾಖಂಡದ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ವಿರುದ್ಧ ಪ್ರಚಾರಾಂದೋಲನ ಮುಂದುವರೆಸಲು ನಿರ್ಧರಿಸುವುದರೊಂದಿಗೆ, ಅದು ಆಳುವ ಪಕ್ಷವನು ರಾಜಕೀಯವಾಗಿಯೂ ಎದುರಿಸಲು ಸಿದ್ಧಗೊಳ್ಳುತ್ತಿದೆ. ಲಕ್ಷಾಂತರ ರೈತರು ಭಾಗವಹಿಸಿದ ಮುಝಪ್ಫರ್‌ನಗರ ಮಹಾಪಂಚಾಯತ್ ಈ ದೃಢನಿಶ್ಚಯದ ಒಂದು ಶಕ್ತಿಶಾಲಿ ಅಭಿವ್ಯಕ್ತಿ.

('ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ)

➪➪

ಸೇರಲಾರಂಭಿಸಿತ್ತು. ದಿಲ್ಲಿ ಪೋಲೀಸರು ತಮ್ಮ 'ಬಿಗಿ ಭದ್ರತೆ'ಯ ಕ್ರಮಗಳಿಂದಾಗಿ ಜನಗಳು ಮೆಟ್ರೋ ನಿಲ್ದಾಣಗಳು ಮುಚ್ಚಿದವು. ಕೆಂಪು ಕೋಟೆಯ ಸುತ್ತಮುತ್ತ ರಸ್ತೆಗಳನ್ನು ಮುಚ್ಚಲಾಗಿತ್ತು.

ಉತ್ತರಪ್ರದೇಶದಲ್ಲಿ ಗಾಜಿಯಾಬಾದ್‌ನಲ್ಲಿ ಪೋಲೀಸರೇ ದಿಲ್ಲಿಗೆ ತಲುಪುವ ಹೆದ್ದಾರಿಯನ್ನು ಮುಚ್ಚಿದರು ಎಂದು ತಿಳಿದು ಬಂದಿದೆ.

ಆಂಧ್ರಪ್ರದೇಶ, ಅಸ್ಸಾಂ, ಬಿಹಾರ, ಛತ್ತಿಸ್‌ಗಡ, ದಿಲ್ಲಿ, ಗುಜರಾತ, ಹರ್ಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಕೇರಳ, ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ,ಒಡಿಶ, ಪಾಂಡಿಚೇರಿ, ಪಂಜಾಬ್,ರಾಜಸ್ತಾನ, ತಮಿಳುನಾಡು, ತೆಲಂಗಾಣ, ತ್ರಿಪುರ, ಉತ್ತರಪ್ರದೇಶ, ಉತ್ತರಾಖಂಡ ಮತ್ತು ಪಶ್ಚಿಮ ಬಂಗಾಲದಲ್ಲಿ ನೂರಾರು ಸ್ಥಳಗಳಲ್ಲಿ ಬಂದ್ ಆಚರಿಸಲಾಯಿತು ಎಂದು ಅಂಯುಕ್ತ ಕಿಸಾನ್ ಮೋರ್ಚಾ ಹೇಳಿದೆ. ಲಕ್ಷಾಂತರ ನಾಗರಿಕರು ಬಂದ್ ಸಂಬಧಿ ಕಾರ್ಯಕಕ್ರಮಗಳಲ್ಲಿ ಭಾಗವಹಿಸಿದರು ಎಂದೂ ಅದು ಹೇಳಿದೆ.

ಕೇರಳ, ಪಂಜಾಬ್, ಕರ್ಯಾಣ, ಝಾರ್ಖಂಡ್ ಮತ್ತು ಬಿಹಾರದಲ್ಲಿ ಜನಜೀವನ ಸುಮಾರಾಗಿ ಸ್ತಬ್ಧಗೊಂಡಿತು, ಅಸ್ಸಾಂನ ದಕ್ಷಿಣ ಭಾಗದಲ್ಲಿ, ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರ, ರಾಜಸ್ತಾನ, ಉತ್ತರಾಖಂಡದ ಹಲವು ಭಾಗಗಲಲ್ಲೂ ಇದು ಕಂಡು ಬಂತು ಎಂದೂ ಸಂಯುಕ್ತ ಕಿಸಾನ್ ಮೋರ್ಚಾ ಹೇಳಿದೆ. ಬೆಂಗಳೂರು, ಜೈಪುರಗಳಲ್ಲಿ ಸಾವಿರಾರು ಮಂದಿ ಪುಟ 10 ನೋಡಿ

➪➪

ಕಾರಣವಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಮೈಸೂರು ಬ್ಯಾಂಕ್ ವೃತ್ತದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ರೈತ ಮುಖಂಡರಾದ ಕೋಡಿಹಳ್ಳಿ ಚಂದ್ರಶೇಖರ್, ಜಿ.ಸಿ.ಬಯ್ಯಾರೆಡ್ಡಿ, ಬಡಗಲಪುರ ನಾಗೇಂದ್ರ, ಕಾರ್ಮಿಕ ಮುಖಂಡರಾದ ಎಸ್.ವರಲಕ್ಷ್ಮಿ, ಕೆ.ವಿ.ಭಟ್, ಎಸ್.ಎಸ್.ಪ್ರಕಾಶಂ, ಅಪ್ಪಣ್ಣ, ದಲಿತ ಸಂಘಟನೆಯ ಮುಖಂಡರಾದ ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರೆಗೂಡು ಮತ್ತಿತರ ಮುಖಂಡರು ಭಾಷಣ ಮಾಡಿದರು.

ಬಿಎಂಟಿಸಿ ಬಸ್ ನಿಲ್ದಾಣದಲ್ಲಿ ಬಸ್ ಸಂಚಾರ ತಡೆಯಲು ಯತ್ನಿಸಿದ ಕನ್ನಡ ಪರಸಂಘಟನೆಗಳ ಮುಂಖಡರಾದ ಸಾ.ರಾ. ಗೋವಿಂದು, ಶಿವರಾಮೇಗೌಡ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಮೌರ್ಯ ವೃತ್ತದ ಬಳಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಸಹಿತ ಹಲವು ಪ್ರತಿಭಟನೆಕಾರರನ್ನು ಪೊಲೀಸರು ಬಂಧಿಸಿದ್ದಾರೆ.

ಸಾ.ರಾ. ಗೋವಿಂದು, ಕರ್ನಾಟಕ ರಕ್ಷಣಾ ವೇದಿಕೆಯ ಶಿವರಾಮೇಗೌಡ ಸೇರಿದಂತೆ ಹಲವು ಕಾರ್ಯಕರ್ತರು ಮತ್ತು ರೈತ ಪ್ರತಿನಿಧಿಗಳು ಮೆಜೆಸ್ಟಿಕ್ ಬಳಿಯ ಭಾಗ್ಯ ವಿನಾಯಕ ದೇವಸ್ಥಾನದ ಬಳಿ ಪ್ರತಿಭಟನೆಗೆ ಮುಂದಾದರು.

ಕೆ.ಆರ್. ಪುರಂ ಬಿಬಿಎಂಪಿ ಕಚೇರಿ ಎದುರು ರೈತ ಸಂಘಟನೆಗಳು, ಮಹಿಳಾ ಸಂಘಟನೆಗಳ ಕಾರ್ಯಕರ್ತರು ಪುಟ 10 ನೋಡಿ

ಯಶಸ್ವಿಗೊಳಿಸಿದ ಜನತೆಗೆ ಎಐಕೆಎಸ್ ಅಭಿನಂದನೆ

"ಕಾರ್ಪೊರೇಟ್ ಶೋಷಣೆಯ ವಿರುದ್ಧ ಜನತೆಯ ಐಕ್ಯರಂಗದತ್ತ ಸಾಗೋಣ"

ಸಂಯುಕ್ತ ಕಿಸಾನ್ ಮೋರ್ಚಾದ ಭಾರತ ಬಂದ್ ಕರೆಯನ್ನು ಎಲ್ಲ ವಿಭಾಗಗಳಿಗೆ ಸೇರಿದ ಜನಗಳು ಒಂದು ಭವ್ಯ ಐತಿಹಾಸಿಕ ಯಶಸ್ವೀ ಕಾರ್ಯಾಚರಣೆಯಾಗಿ ಮಾಡಿದ್ದಾರೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಅಪಾರ ಹರ್ಷ ವ್ಯಕ್ತಪಡಿಸಿದೆ, ಹಾಗೂ ಈ ಎಲ್ಲ ಜನವಿಭಾಗಗಳನ್ನು ಅದು ಅಭಿನಂದಿಸಿದೆ, "ಕಾರ್ಪೊರೇಟ್ ಶಕ್ತಿಗಳೇ ಕೃಷಿಯತ್ತ ಕೈಚಾಚಬೇಡಿ, ಮೋದಿ-ಷಾ ಅಧಿಕಾರದಿಂದ ಕೆಳಗಿಳಿಯಿರಿ" ಎಂಬುದು ಈ ಕಾರ್ಯಾಚರಣೆಯ ಮುಖ್ಯ ಘೋಷಣೆಯಾಗಿತ್ತು ಎಂದು ಅದು ಹೇಳಿದೆ.

ರೈತರ ಹೋರಾಟ ದೇಶವ್ಯಾಪಿ ಚಾರಿತ್ರ್ಯವನ್ನು ಪಡೆಯುತ್ತಿದೆ. ಮಹಿಳೆಯರು, ಹಿರಿಯರು, ಯುವಜನ ಮತ್ತು ಮಕ್ಕಳು ಕೂಡ ದೇಶಾದ್ಯಂತ ಪ್ರತಿಭಟನಾ ಕಾರ್ಯಾಚರಣೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಭಾಗವಹಿಸುತ್ತಿರುವುದು ಕಾಣ ಬಂದಿದೆ. ಬಿಜೆಪಿ ಆಳ್ವಿಕೆಯ ಉತ್ತರಪ್ರದೇಶ, ಗುಜರಾತ್ ಮತ್ತು ತ್ರಿಪುರಾದಲ್ಲಿ ಕೂಡ ಬಂದ್ ದೊಡ್ಡ ಪ್ರಮಾಣದಲ್ಲಿ ಪರಿಣಾಮ ಉಂಟು ಮಾಡಿದೆ. ಅಂಗಡಿಗಳು, ವಾಣಿಜ್ಯ ಸಂಸ್ಥೆಗಳು ಮತ್ತು ಸಂಚಾರ ಸ್ತಬ್ಧಗೊಂಡವು. ಉತ್ತರಪ್ರದೇಶದಲ್ಲಿ ಪ್ರಧಾನ ಮಂತ್ರಿಗಳ ಚುನಾವಣಾ ಕ್ಷೇತ್ರದಲ್ಲಿ ವ್ಯಾಪಕ ಮತಪ್ರದರ್ಶನಗಳು ನಡೆದವು, ಸಾವಿರಾರು ಸಂಖ್ಯೆಯಲ್ಲಿ ಜನಗಳು, ಬಹುಪಾಲು ಮಹಿಳೆಯರು ಭಾಗವಹಿಸಿದ್ದಾರೆ. ಕೇಂದ್ರ ಕೃಷಿ ಮಂತ್ರಿ ನರೇಂದ್ರ ಸಿಂಗ್ ತೋಮರ್‌ರವರ ಕ್ಷೇತ್ರ ಮಧ್ಯಪ್ರದೇಶದ ಮೊರೆನದಲ್ಲಿ ಸಂಪೂರ್ಣ ಬಂದ್ ನಡೆದಿದೆ.

ಭಾರತ ಬಂದ್ ನ ಬೃಹತ್ ಸ್ವರೂಪ ಮತ್ತು ಅಹಿಂಸಾತ್ಮಕ ಸ್ವಭಾವ ಗಮನಾರ್ಹ. ಪೋಲೀಸರು ಪ್ರತಿಭಟನಾಕಾರರ ಮೇಲೆ ಹಲ್ಲೆ ನಡೆಸಿದ ಘಟನೆಗಳು ಪಶ್ಚಿಮ ಬಂಗಾಲ ಮತ್ತು ತ್ರಿಪುರಾದಿಂದ ವರದಿಯಾಗಿವೆ. ಇದು ಚಳುವಳಿಯ ಸಾಮೂಹಿಕ ಸ್ವರೂಪವನ್ನು ಪುಟ 10 ನೋಡಿ



ಪಾವಗಢ



ಕುರುಗೋಡು



ಮಾಗಡಿ

ರಾಜ್ಯದ ಹಲವೆಡೆ ಪ್ರತಿಭಟನೆಯ ಬಿಸಿ

ಪುಟ 9 ರಿಂದ

ಬಿಬಿಎಂಪಿ ಕಚೇರಿಯ ರಸ್ತೆಯಲ್ಲಿ ಕೂತು ಪ್ರತಿಭಟನೆ ನಡೆಸಿದರು. ಇದರಿಂದ ಹಳೇ ಮದ್ರಾಸು ರಸ್ತೆಯಲ್ಲಿ ಸಂಚರಿಸುವ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಮಾಗಡಿ ರಸ್ತೆಯ ಗೊಲ್ಲರಹಳ್ಳಿ ನೈಸ್ ರೋಡ್ ಜಂಕ್ಷನ್ ನಲ್ಲಿ ಪ್ರತಿಭಟನೆ ಮಾಡಲು ರೈತ ಮುಖಂಡರು ಮುಂದಾದರು. ಈ ಸಂದರ್ಭದಲ್ಲಿ ಹಲವು ರೈತ ಮುಖಂಡರು ಜಮಾಯಿಸಿದ್ದು, ಪೊಲೀಸರ ಸಹ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು.

ಗೊರಗುಂಟೆಪಾಳ್ಯದಲ್ಲಿ ಪ್ರತಿಭಟನಾ ನಿರತರನ್ನು ನಿಯಂತ್ರಿಸುತ್ತಿದ್ದ ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರ ಕುಮಾರ್ ಮೀನಾ ಅವರ ಕಾಲಿನ ಮೇಲೆ ಖಾಸಗಿ ಕಾರು ಹತ್ತಿದ್ದು, ಕಾಲಿಗೆ ಸಣ್ಣ ಗಾಯವಾಗಿದೆ. ಟೌನ್ ಹಾಲ್ ಗೆ ತೆರಳಲು ಪ್ರತಿಭಟನೆ ನಡೆಸುತ್ತಿದ್ದ ಹೋರಾಟಗಾರರನ್ನು ನಿಯಂತ್ರಣ ಮಾಡಲಾಗುತ್ತಿತ್ತು. ಇದೇ ವೇಳೆ ವಾಹನ ಸಂಚಾರಕ್ಕೆ ಅಡ್ಡಿಯಾಗದಂತೆ ವ್ಯವಸ್ಥೆ ಮಾಡಲಾಗುತ್ತಿತ್ತು. ಈ ವೇಳೆ ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರ ಅವರ ಕಾಲಿನ ಮೇಲೆ ಕಾರು ಹತ್ತಿದ್ದು ಸಣ್ಣ ಗಾಯವಾಗಿದೆ.

ಧಾರವಾಡದಲ್ಲಿ ಎಮ್ಮೆಗಳ ಮೆರವಣಿಗೆ: ಭಾರತ್ ಬಂದ್‌ಗೆ ಹುಬ್ಬಳ್ಳಿ –ಧಾರವಾಡ ಮಹಾನಗರದಲ್ಲಿ ಬಂದ್ ಭಾಗವಾಗಿ ಬೆಳಿಗ್ಗಿನಿಂದಲೇ ಬೀದಿಗಿಳಿದ ರೈತರು, ಖಾಸಗಿ ವಾಹನಗಳನ್ನು ತಡೆದು ಪ್ರತಿಭಟನೆ ನಡೆಸಿದರು. ಈ ವೇಳೆ ರೈತರೊಬ್ಬರು ಆಟೋ ಚಾಲಕನನ್ನು ತಡೆದು, ಆತನ ಕಾಲಿಗೆ ಬಿದ್ದು ಪ್ರತಿಭಟನೆಗೆ ಬೆಂಬಲ ನೀಡುವಂತೆ ಮನವಿ ಮಾಡಿದ ಘಟನೆಯೂ ನಡೆಯಿತು. ಜಯ ಕರ್ನಾಟಕ ಸಂಘಟನೆ ವಿಭಿನ್ನವಾಗಿ ಪ್ರತಿಭಟನೆ ನಡೆಸಿ, ಸೈಕಲ್ ಸವಾರಿ ಮತ್ತು ಎಮ್ಮೆಯನ್ನು ಕರೆತಂದು ಪ್ರತಿಭಟನೆ ನಡೆಸಿದರು. ವಿವಿಧ ಕನ್ನಡಪರ ಸಂಘಟನೆ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಕೋಲಾರ ನಗರದಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಬಸ್‌ಗಳನ್ನು ತಡೆದು ಪ್ರತಿಭಟನೆ ಮಾಡಲು ಮುಂದಾದ ಸಿಪಿಐಎಂ ಹಾಗೂ ರೈತರ ಪ್ರತಿಭಟನೆ ಖಂಡಿಸಿ ಕೋಲಾರ ನಗರ ಘಟಕದ ಬಿಜೆಪಿ ಕಾರ್ಯಕರ್ತರು ಅದೇ ಸ್ಥಳಕ್ಕೆ ಬಂದು ಪ್ರತಿಭಟನೆ ಮಾಡಿದರು. ಎರಡು ಬಣಗಳ ನಡುವೆ ಮಾತಿನ ಚಕಮಕಿ ನಡೆಯಿತು. ಸ್ಥಳಕ್ಕೆ ಧಾವಿಸಿದ ಡಿವೈಎಸ್ಪಿ ರಮೇಶ್ ನೇತೃತ್ವದಲ್ಲಿ ಪೊಲೀಸರು ಎರಡು ಬಣ ಚದುರಿಸಿ ಪರಿಸ್ಥಿತಿ ಶಾಂತಗೊಳಿಸಿದರು.

ಚಿತ್ರದುರ್ಗದಲ್ಲಿ ಮೋದಿ ಭಾವಚಿತ್ರಕ್ಕೆ ಈರುಳ್ಳಿ ಹಾರ ಹಾಕಿ ಪ್ರತಿಭಟನೆ ನಡೆಸಿದ್ದಾರೆ. **ಬಳ್ಳಾರಿಯಲ್ಲೂ** ಪ್ರತಿಭಟನೆಗೆ ಉತ್ತಮ ಬೆಂಬಲ ವ್ಯಕ್ತವಾಗಿದೆ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಬಳ್ಳಾರಿ, ಕೂಡ್ಲಗಿ, ಕಂಪ್ಲಿ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರದಲ್ಲಿ ಬಂದ್ ನ ಬಿಸಿ ತಟ್ಟಿತ್ತು.

ಹಾಸನದಲ್ಲೂ ಬಂದ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ರೈತ ಸಂಘಟನೆ, ಕಾರ್ಮಿಕ ಸಂಘಟನೆ, ದಲಿತ ಸಂಘಟನೆ, ಕನ್ನಡಪರ ಸಂಘಟನೆಗಳು ಬಂದ್ ನಲ್ಲಿ ಭಾಗವಹಿಸಿದ್ದವು. ಕೇಂದ್ರ ರಾಜ್ಯ ಸರಕಾರಗಳ ವಿರುದ್ಧ ಘೋಷಣೆಗಳನ್ನು ಮೊಳಗಿಸಿದರು.

ಧಾರವಾಡದಲ್ಲೂ ಪ್ರತಿಭಟನೆಗೆ ಉತ್ತಮ ಬೆಂಬಲ ವ್ಯಕ್ತವಾಗಿದೆ. ಹಾವೇರಿ, ರೋಣ, ಗದಗ್, ಹುಬ್ಬಳ್ಳಿ ಸೇರಿದಂತೆ ಅನೇಕ ಕಡೆಗಳಲ್ಲಿ ಬಂದ್ ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಚಿಕ್ಕಬಳ್ಳಾಪುರ, ತುಮಕೂರು, ಮೈಸೂರು, ಮಂಡ್ಯ ಜಿಲ್ಲೆಯಲ್ಲೂ ಪ್ರತಿಭಟನೆಗೆ ಉತ್ತಮ ಬೆಂಬಲ ವ್ಯಕ್ತವಾಗಿದೆ. ಪ್ರತಿಭಟನೆಯಲ್ಲಿ ರೈತರು, ಕಾರ್ಮಿಕರು, ವಿದ್ಯಾರ್ಥಿ–ಯುವಜನರು, ದಲಿತ ಸಂಘಟನೆಗಳು, ಕನ್ನಡಪರ ಸಂಘಟನೆಗಳು ಬೆಂಬಲವನ್ನು ನೀಡಿದ್ದವು.

ಕೊಪ್ಪಳ, ರಾಯಚೂರಿನಲ್ಲೂ ಭಾರತ್ ಬಂದ್ ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸಿಂಧನೂರು, ರಾಯಚೂರು, ಲಿಂಗಸಗೂರು, ಮಸ್ಕಿ, ಕೊಪ್ಪಳ, ಗಂಗಾವತಿ, ಯಲಬುರ್ಗಾ, ಕನಕಗಿರಿ, ಕುಷ್ಟಗಿ ತಾಲ್ಲೂಕುಗಳಲ್ಲಿ ಭಾರತ್ ಬಂದ್ ಗೆ ಉತ್ತಮ ಬೆಂಬಲ ವ್ಯಕ್ತವಾಗಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲೂ ಪ್ರತಿಭಟನೆಗೆ ಉತ್ತಮ ಬೆಂಬಲ ವ್ಯಕ್ತವಾಗಿದೆ. ಕಾರ್ಮಿಕರು, ರೈತರು, ಕೂಲಿಕಾರರು, ಬೀಡಿ ಕಾರ್ಮಿಕರು, ಹೆಂಚು ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿ ಕೇಂದ್ರ ರಾಜ್ಯ ಸರಕಾರಗಳ ವಿರುದ್ಧ ಆಕ್ರೋಶವನ್ನು ವ್ಯಕ್ತಪಡಿಸಿದರು.

ಕಲಬುರ್ಗಿ, ಬೀದರ್, ಯಾದಗಿರಿ, ಬಾಗಲಕೋಟೆ, ಬಿಜಾಪುರ, ಬೆಂಗಳೂರು ಗ್ರಮಾಂತರ ಜಿಲ್ಲೆಗಳಲ್ಲಿ ಪ್ರತಿಭಟನೆಗೆ ಉತ್ತಮ ಬೆಂಬಲ ವ್ಯಕ್ತವಾಗಿದೆ. ರೈತರು, ಕಾರ್ಮಿಕರು, ಮಹಿಳೆಯರು ಪ್ರತಿಭಟನೆಗೆ ಸಾತ್ ನೀಡುವ ಮೂಲಕ ಕೇಂದ್ರ ರಾಜ್ಯ ಸರಕಾರಗಳ ವಿರುದ್ಧ ಘೋಷಣೆ ಮೊಳಗಿಸಿದರು.

ಒಟ್ಟಾರೆ ಭಾರತ್ ಬಂದ್ ಗೆ ಉತ್ತಮ ಬೆಂಬಲ ವ್ಯಕ್ತವಾಗಿದೆ. ಈಗಾಗಲೆ ಕೇಂದ್ರ ಸರಕಾರಕ್ಕೆ ಹಲವಾರು ಬಾರಿ ಮನವಿ ಮಾಡಿದ್ದರೂ ಸರಕಾರ ಎಚ್ಚೆತ್ತು ಕೊಂಡಿಲ್ಲ. ಕಳೆದ ಎಪ್ರಿಲ್ ನಲ್ಲಿ ನಡೆದ ಚುನಾವಣೆಯಲ್ಲಿ ಈಗಾಗಲೆ ಬಿಜೆಪಿಯನ್ನು ಸೋಲಿಸಲಾಗಿದೆ. ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ತಕ್ಕ ಪಾಠವನ್ನು ಕಲಿಸಲಾಗುವುದು ಹಾಗೂ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುವ ಕೆಲಸವನ್ನು ಮಾಡಲಾಗುವುದು ಎಂದು ರೈತ, ಕಾರ್ಮಿಕ, ದಲಿತ ಸಂಘಟನೆಗಳು ಕರೆ ನೀಡಿವೆ.

..........ಎಐಕೆಎಸ್ ಅಭಿನಂದನೆ

ಪುಟ 9 ರಿಂದ

ಮತ್ತು ಗುರಿ ಸಾಧಿಸುವ ವರೆಗೂ ಹೋರಾಟ ನಡೆಸುವ ಜನರ ದೃಢನಿರ್ಧಾರವನ್ನು ತೋರಿಸುತ್ತದೆ ಎಂದು ಎಐಕೆಎಸ್ ಹೇಳಿದೆ.

ಪಂಜಾಬ್, ಹರ್ಯಾಣ, ಕೇರಳ, ತ್ರಿಪುರಾ, ತಮಿಳುನಾಡು, ಬಿಹಾರ, ತೆಲಂಗಾಣ, ಆಂಧ್ರಪ್ರದೇಶ, ರಾಜಸ್ತಾನ, ಒಡಿಶ ಮತ್ತು ಪಶ್ಚಿಮ ಬಂಗಾಲದಲ್ಲಿ ಬಂದ್ ಕರೆಗೆ ದೊಡ್ಡ ಪ್ರಮಾಣದಲ್ಲಿ ಬೆಂಬಲ ವ್ಯಕ್ತವಾಗಿದೆ. ಮಹಾರಾಷ್ಟ್ರ, ಉತ್ತರಪ್ರದೇಶ, ಉತ್ತರಾಖಂಡ, ಮಧ್ಯಪ್ರದೇಶ, ಝಾರ್ಖಂಡ್, ಅಸ್ಸಾಂ, ಕರ್ನಾಟಕ, ಹಿಮಾಚಲ ಪ್ರದೇಶ, ಮಣಿಪುರ ಮತ್ತು ಗುಜರಾತಿನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಬಂದ್ ಯಶಸ್ವಿಯಾಗಿ ನಡೆದಿದೆ. ಹಲವೆಡೆಗಳಲ್ಲಿ ದೊಡ್ಡ ಮತಪ್ರದರ್ಶನಗಳು, ರೈಲ್ ರೋಕೋ, ರಾಸ್ತಾ ರೋಕೋಗಳು ನಡೆದಿವೆ,

ಭಾರತ ಬಂದ್ ನ ಭವ್ಯ ಯಶಸ್ಸಿನಲ್ಲಿ ಕಾರ್ಮಿಕ ಸಂಘಗಳು ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿರುವ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಎಐಕೆಎಸ್ ಹಲವು ಪ್ರತಿಪಕ್ಷಗಳೂ ಈ ಕಾರ್ಯಾಚರಣೆಯನ್ನು ಬೆಂಬಲಿಸಿವೆ ಎಂದು ಹೇಳಿದೆ. ಕೃಷಿ ಕೂಲಿಕಾರರು, ಮಹಿಳೆಯರು, ಯುವಜನರು, ವಿದ್ಯಾರ್ಥಿಗಳು , ವ್ಯಾಪಾರಸ್ಥರು ಮತ್ತು ಇತರೆಲ್ಲ ರಂಗಗಳ ಜನರು ಭಾರತ ಬಂದ್‌ನ ಯಶಸ್ಸಿನ ಅವಿಭಾಜ್ಯ ಅಂಗವಾಗಿದ್ದಾರೆ ಎಂದೂ ಅದು ಸಂತಸ ವ್ಯಕ್ತಪಡಿಸಿದೆ.

ಕಳೆದ ಕೆಲವು ವರ್ಷಗಳ ಹೋರಾಟಗಳಲ್ಲಿ ಕಾರ್ಮಿಕರು ಮತ್ತು ರೈತರ ಐಕ್ಯತೆಯ ಗಟ್ಟಿಯಾದ ವರ್ಗ ಸ್ವರೂಪ ಈಗ ಕಾರ್ಪೊರೇಟ್ ಶೋಷಣೆಯ ವಿರುದ್ಧ, ವಿಶೇಷವಾಗಿ ಕೃಷಿ, ಕೈಗಾರಿಕೆ ಮತ್ತು ಸೇವಾವಲಯಗಳಲ್ಲಿನ ಕಾರ್ಪೊರೇಟ್ ಶೋಷಣೆಯ ವಿರುದ್ಧ ಒಂದು ವ್ಯಾಪಕವಾದ ಜನತೆಯ ಐಕ್ಯರಂಗವನ್ನು ಕಟ್ಟುವತ್ತ ಹಾದಿ ಮಾಡಿಕೊಟ್ಟಿರುವುದು ಈ ಭಾರತ ಬಂದ್‌ನ ರಾಜಕೀಯ ದಿಕ್ಕನ್ನು ತೋರಿಸಿದೆ ಎಂದು ಎಐಕೆಎಸ್ ಅಭಿಪ್ರಾಯ ಪಟ್ಟಿದೆ. ಕಾರ್ಪೊರೇಟ್ ಹಿತಾಸಕ್ತಿಗಳ ರಕ್ಷಣೆಗೆ ನಿಲ್ಲುವ ರಾಜಕೀಯ ಪಕ್ಷಗಳು ಜನಗಳ ಅಕ್ರೋಶವನ್ನು ಎದುರಿಸಬೇಕಾಗಿ ಬರುತ್ತದೆ, ಎದ್ದು ಬರುವ ಜನತೆಯ ಪ್ರತಿರೋಧದ ಈ ಆಂದೋಲನ ಅವರನ್ನು ಹಿಂದಕ್ಕೆ ನೂಕುತ್ತದೆ ಎಂದು ಎಐಕೆಎಸ್ ಎಚ್ಚರಿಸಿದೆ.

ಇತಿಹಾಸ ನಿರ್ಮಿಸಿದ ಭಾರತ ಬಂದ್

ಪುಟ 9 ರಿಂದ

ಪ್ರತಿಭಟನೆಗಳಲ್ಲಿ ಭಾಗವಹಿಸಿದರು.

ದೇಶಾದ್ಯಂತ ಮೋದಿ ಸರಕಾರ ಜಾರಿ ಮಾಡುತ್ತಿರುವ ಬಿಜೆಪಿ–ಆರೆಸ್ಸೆಸ್ ಧೋರಣೆಗಳ ವಿರುದ್ಧ ಜನರ ಆಕ್ರೋಶ ಮತ್ತು ಹತಾಶೆಯ ಭಾವನೆಗಳು ಈ ದಿನ ಅಭಿವ್ಯಕ್ತಿ ಪಡೆದವು.

ಕೇರಳದ ಎಲ್‌ಡಿಎಫ್ ಸರಕಾರವಲ್ಲದೆ, ತಮಿಳುನಾಡಿನ ಡಿಎಂಕೆ ಸರಕಾರ, ಆಂಧ್ರದ ವೈಎಸ್ ಆರ್ ಕಾಂಗ್ರೆಸ್ ಸರಕಾರ, ಝಾರ್ಖಂಡ್‌ನ ಜೆಎಂಎಂ ನೇತೃತ್ವದ ಸರಕಾರ ಮತ್ತು ಪಂಜಾಬಿನ ಕಾಂಗ್ರೆಸ್ ಸರಕಾರ ಸಾರ್ವಜನಿಕವಾಗಿ ಬಂದ್ ನ್ನು ಬೆಂಬಲಿಸಿದವು.

ಬಿಜೆಪಿಯೇತರ ಪಕ್ಷಗಳಲ್ಲಿ ಹೆಚ್ಚಿನವು ಈ ಕಾರ್ಯಾಚರಣೆಗೆ ಬೆಂಬಲ ವ್ಯಕ್ತಪಡಿಸಿದವು. ಕೇರಳದಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ಕರೆಯನ್ನು ಬೆಂಬಲಿಸಿ ಸಾರಿಗೆ ನೌಕರರ ಸಂಘ ಸೇರಿದಂತೆ ರಾಜ್ಯದ ಹಲವಾರು ಕಾರ್ಮಿಕ ಸಂಘಟನೆಗಳು ಹರತಾಳಕ್ಕೆ ಬೆಂಬಲ ನೀಡಿರುವುದರಿಂದ ಸಾರಿಗೆ ಸೇರಿದಂತೆ ಹೆಚ್ಚಿನ ಚಟುವಟಿಕೆಗಳು ಸ್ಥಬ್ಧಗೊಂಡವು. ಕೇರಳದ ಬಿಜೆಪಿ ಮುಖಂಡರೊಬ್ಬರು ಈ ಹರತಾಳ 'ಜನ–ವಿರೋಧಿ' ಎಂದು ತಮ್ಮ ಕೇಂದ್ರ ಮುಖಂಡರನ್ನು ಅನುಸರಿಸಿ ವರ್ಣಿಸಿದರೂ, ತಮ್ಮ ಪಕ್ಷಕ್ಕೆ ಸೇರಿದ ಕಾರ್ಮಿಕ ಸಂಘಟನೆಗೆ ಸಂಯೋಜನೆಗೊಂಡಿರುವ ಸಂಘಗಳು ಭಾರತ್ ಬಂದ್ ಬೆಂಬಲಿಸದಿದ್ದರೂ, ಅದನ್ನು ಬಹಿರಂಗವಾಗಿ ವಿರೋಧಿಸುತ್ತಿಲ್ಲ ಎಂದಿರುವುದಾಗಿ ವರದಿಯಾಗಿದೆ.

ಈ ಕಾರ್ಯಾಚರಣೆಗೆ ಅಂತರ್‍ರಾಷ್ಟ್ರೀಯ ಸೌಹಾರ್ದವೂ ದೊರೆತಿದೆ. ಭಾರತದ ಪ್ರಧಾನ ಮಂತ್ರಿಗಳ ಅಮೆರಿಕ ಭೇಟಿಯ ಸಮಯದಲ್ಲಿ ರಾಜಧಾನಿ ವಾಶಿಂಗ್ಟನ್‌ನಲ್ಲಿ ಅಧ್ಯಕ್ಷ ನಿವಾಸ ವೈಟ್ ಹೌಸ್ ಎದುರು “ನಾವು ರೈತರನ್ನು ಬೆಂಬಲಿಸುತ್ತೇವೆ”, “ರೈತರಿಲ್ಲದಿದ್ದರೆ ಆಹಾರವಿಲ್ಲ, ಭವಿಷ್ಯ ಇಲ್ಲ”, ‘ಜೈಜವಾನ್, ಜೈಕಿಸಾನ್’, “ಭಾರತ ಸರಕಾರ ರೈತರ ದಮನ ಮಾಡುತ್ತಿದೆ’ ಇತ್ಯಾದಿ ಫಲಕಗಳು ಪ್ರದರ್ಶಿತಗೊಂಡವು. ನ್ಯೂಯಾರ್ಕಿನಲ್ಲಿ ವಿಶ್ವಸಂಸ್ಥೆಯ ಕಚೇರಿಯ ಎದುರು ಕೂಡ ಪ್ರತಿಭಟನೆ ನಡೆಯಿತು.

ಗ್ರೇಟ್ ಬ್ರಿಟನ್‌ನ ಭಾರತೀಯ ಕಾರ್ಮಿಕರ ಸಂಘ ಲಂಡನ್ನಿನಲ್ಲಿ, ಕೆನಡಾದ ಟೊರಂಟೋದಲ್ಲಿ ಭಾರತ–ಕೆನಡ ಕಾರ್ಮಿಕರ ಸಂಘ ಸೌಹಾರ್ದ ನಡೆ ಕಾರ್ಯಕ್ರಮ ನಡೆಸಿತು ಎಂದು ವರದಿಯಾಗಿದೆ.

ಸಾಮಾಜಿಕ ಮಾಧ್ಯಮಗಳಲ್ಲೂ ರೈತರ ಈ ಕಾರ್ಯಾಚರಣೆಗೆ ವ್ಯಾಪಕ ಬೆಂಬಲ ವ್ಯಕ್ತವಾಗಿದೆ.

ಚಾರಿತ್ರಿಕ ಬಂದ್‌ನ ಮರುದಿನ ಸಪ್ಟಂಬರ್ 28 ರಂದು ಸಂಯುಕ್ತ ಕಿಸಾನ್ ಮೋರ್ಚಾದ ಕರೆಯ ಮೇರೆಗೆ ದೇಶಾದ್ಯಂತ ಶಹೀದ್ ಭಗತ್ ಸಿಂಗ್ ಜಯಂತಿಯನ್ನು ಆಚರಿಸಲಾಯಿತು.



ಕಾರ್ಮಿಕರ ಬೆಂಬಲ–ಜಂತರ್ ಮಂತರ್‌ನಲ್ಲಿ ಪ್ರತಿಭಟನೆ

ದಿಲ್ಲಿಯಲ್ಲಿ ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿಗಳು, ಮತ್ತು ರೈತರ ಹೋರಾಟದ ಬಗ್ಗೆ ಸಹಾನುಭೂತಿ ಇರುವ ಇತರ ನಾಗರಿಕರು ರೈತರು ಕರೆ ನೀಡಿರುವ ಭಾರತ ಬಂದ್‌ಗೆ ಬೆಂಬಲವಾಗಿ ಜಂತರ್‌ಮಂತರ್‌ನಲ್ಲಿ ಪ್ರತಿಭಟನೆ ನಡೆಸಿದರು. ಸಿಐಟಿಯು, ಎಐಸಿಸಿಟಿಯು ಮತ್ತಿತರ ಕಾರ್ಮಿಕ ಸಂಘಟನೆಗಳು ಇದನ್ನು ಸಂಘಟಿಸಿದ್ದರು. ಈ ಮತಪ್ರದರ್ಶನದಲ್ಲಿ ಈ ದೇಶವ್ಯಾಪಿ ಕಾರ್ಯಾಚರಣೆಯ ಆಗ್ರಹಗಳನ್ನು ಕುರಿತಂತೆ ಘೋಷಣೆಗಳು ಮೊಳಗಿದವು. ಕಳೆದ ಹತ್ತು ತಿಂಗಳಿಂದ ದೇಶಾದ್ಯಂತ ರೈತರು ಎತ್ತುತ್ತಿರುವ ಆಗ್ರಹಗಳನ್ನು, ಮೂರು ಕೃಷಿ ಕಾಯ್ದೆಗಳಣ್ಣು ರದ್ದುಪಡಿಸಬೇಕು, ವಿದ್ಯುತ್ ತಿದ್ದುಪಡಿ ಮಸೂದೆಯನ್ನು ವಾಪಾಸ್ ಪಡೆಯಬೇಕು, ಎಂ.ಎಸ್.ಪಿ ಗೆ ಕಾನೂನಿನ ಖಾತ್ರಿ ಒದಗಿಸಬೇಕು ಮತ್ತು ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದುಮಾಡಬೇಕು ಎಂಬ ಆಗ್ರಹಗಳನ್ನು ಅವರು ಪುನರುಚ್ಚರಿಸಿದರು.

“ಪ್ರಜಾಪ್ರಭುತ್ವದ ಅಡಿಯಲ್ಲಿ ಸರಕಾರಗಳು ಪರಸ್ಪರ ಸಮಾಲೋಚನೆಗಳು ಮತ್ತು ಸಂವಾದಗಳಿಂದ ಕೆಲಸ ಮಾಡುತ್ತವೆ. ಜನಸಂಖ್ಯೆಯ ಒಂದು ದೊಡ್ಡ ವಿಭಾಗ ಕಷ್ಟಗಳನ್ನು ಎದುರಿಸುತ್ತಿದ್ದರೆ, ಅ ಜನಗಳೊಂದಿಗೆ ಮಾತಾಡುವುದು, ಅವರ ಕಷ್ಟಗಳನ್ನು ಪರಿಹರಿಸುವುದು ಕೇಂದ್ರ ಸರಕಾರದ ಜವಾಬ್ದಾರಿ. ಆದರೆ ಈ ಸರಕಾರ ಜನವರಿ ತಿಂಗಳಿಂದ ರೈತರೊಡನೆ ಮಾತಾಡಿಲ್ಲ” ಎಂದು ಒಬ್ಬ ಕಾರ್ಮಿಕ ಮುಖಂಡರು ಹೇಳಿದರು.

ಈ ಸರಕಾರ ಕಾರ್ಮಿಕ ಸಂಘಗಳು ಕಾರ್ಮಿಕ ಸಂಹಿತೆಗಳ ಬಗ್ಗೆ ಕೊಟ್ಟಿರುವ ಸೂಚನೆಗಳನ್ನೂ ಕಿವಿಗೆ ಹಾಕಿಕೊಂಡಿಲ್ಲ. ಈ ಭಾರತ ಬಂದ್ ಬಡವರ ಬಗ್ಗೆ, ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಮಹಿಳೆಯರ ಪ್ರಶ್ನೆಗಳ ಬಗ್ಗೆ ಸರಕಾರ ಹೊಂದಿರುವ ತಿರಸ್ಕಾರದ ಫಲಿತಾಂಶ ಎಂದೂ ಅವರು ಹೇಳಿದರು.

ಈ ಸರಕಾರ ಮಾಡುವ ಕಾನೂನುಗಳು ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರಾಗಿಸುತ್ತ ಬಡವರು ಸಾಯುವಂತೆ ಮಾಡುತ್ತಿವೆ. ಆದ್ದರಿಂದ ಎಲ್ಲರೂ ಇದರ ವಿರುದ್ಧ ದನಿಯೆತ್ತಬೇಕಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಮ್ಮ ದನಿಯೆತ್ತುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ಆದರೆ ಈ ಸರಕಾರ ಆ ದನಿಗಳಿಗೆ ಕಿವಿಗೊಡಲು ನಿರಾಕರಿಸುತ್ತಿದೆ, ಆದ್ದರಿಂದಲೇ ರೈತರು ಸುಮಾರು ಒಂದು ವರ್ಷದಿಂದ ದಿಲ್ಲಿ ಹೊರಗೆ ಕೂತಿದ್ದಾರೆ ಎಂದು ಇನ್ನೊಬ್ಬ ಮುಖಂಡರು ಹೇಳಿದರು.

ಜಂತರ್ ಮಂತರ್‌ನಲ್ಲಿ ಸಾಮಾನ್ಯವಾಗಿ ಪ್ರತಿಭಟನೆಗಳು ನಡೆಯುವ ಸ್ಥಳವನ್ನು ಬಳಸದಂತೆ ಪೋಲಿಸರು ತಡೆಗಟ್ಟುಗಳನ್ನು ಹಾಕಿ ದೊಡ್ಡ ಸಂಖ್ಯೆಯಲ್ಲಿ ನಿಂತಿದ್ದರು. ಆದ್ದರಿಂದ ಪ್ರತಿಭಟನೆ ಸಮೀಪದಲ್ಲಿ, ಸಂಸ?ದ್‌ಮಾರ್ಗ ಪೋಲಿಸ್ ಸ್ಟೇಷನ್ ಬಸ್ ನಿಲ್ದಾಣದ ಎದುರು ನಡೆಯಿತು. ಪ್ರತಿಭಟನಾಕಾರರು ಘೋಷಣೆಗಳನ್ನು ಕೂಗುತ್ತಿದ್ದಾಗ ಪೋಲೀಸರು ಹಳದಿ ತಡೆಗಟ್ಟುಗಳಿಂದ ಇಣುಕಿ ನೋಡುತ್ತಿದ್ದರು. ಸರಕಾರ ದೇಶದ ನಾಗರಿಕರ ಮಾತುಗಳನ್ನು ಕೇಳಲು, ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಆರಂಭಿಸಬೇಕಾದ ಸಮಯವೀಗ ಬಂದಿದೆ ಎಂದು ಪ್ರತಿಭಟನಾಕಾರರು ನೆನಪಿಸಿದರು.

ಸಾವಯವ ಕೃಷಿಯೆಂದರೇನು?

ಸಾವಯವ ಕೃಷಿ ಎಂಬುದು ಈಗ ಬಹಳ ಪ್ರಚಲಿತಕ್ಕೆ ಬಂದಿರುವ ವಿಷಯ. ಆಧುನಿಕ ರಾಸಾಯನಿಕ ಕೃಷಿಗೆ ಪರ್ಯಾಯಗಾಗಿ ಇದನ್ನು ಬಿಂಬಿಸುವಾಗ ಈ ಸಾವಯವ ಕೃಷಿ ಎಷ್ಟು ವೈಜ್ಞಾನಿಕವಾದದ್ದು ಮತ್ತು ಇಂದಿನ ವಾಸ್ತವದ ಜೊತೆಗೆ ಎಷ್ಟು ಹೊಂದಿಕೊಳ್ಳಬಲ್ಲದು ಎಂಬುದರ ವಿವೇಚನೆ ಮಾಡಬೇಕಾಗುತ್ತದೆ. ಆಧುನಿಕ ಕೃಷಿಯಲ್ಲಿ ಯಾವುದು ಬೇಡ ಮತ್ತು ಯಾವುದು ಅವಶ್ಯ ಮತ್ತು ಅನಿವಾರ್ಯ ಎಂಬ ಸೂಕ್ಷ್ಮ ವಿಶ್ಲೇಷಣೆಯೂ ಆಗತ್ಯವಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಆಧುನಿಕ ಕೃಷಿ ಬೆಳೆದು ಬಂದ ರೀತಿ ಹಾಗೂ ಅದರ ಸಾಧಕ ಬಾಧಕಗಳನ್ನೂ ನೋಡಬೇಕಾಗುತ್ತದೆ. ಯಾವುದು ದೋಷಪೂರಿತ ಮತ್ತು ಯಾವುದು ದೋಷರಹಿತ ಮತ್ತು ಲಾಭದಾಯಕ ಎಂಬುದರ ಅರಿವೂ ಇರಬೇಕಾಗುತ್ತದೆ. ಇವೆಲ್ಲವನ್ನೂ ಶ್ರೀಲಂಕಾದ ಪೂರ್ಣ ಸಾವಯವ ಕೃಷಿ ನೀತಿಯ ಅನುಭವ ಮತ್ತೊಮ್ಮೆ ನೆನಪಿಸಿದೆ. ಈ ಸಂದರ್ಭದಲ್ಲಿ ಸಾವಯವ ಕೃಷಿಯ ಕುರಿತು ಒಂದು ಟಿಪ್ಪಣಿ.

ಜಿ.ಎಸ್. ಮಣಿ

ಸಾವಯವ ಕೃಷಿ ಒಂದು ಕೃಷಿ ವಿಧಾನವಾಗಿದ್ದು, ಇದು ಬೆಳೆಗಳನ್ನು ನೆಡುವುದನ್ನು ಮತ್ತು ಪ್ರಾಣಿಗಳನ್ನು ನೈಸರ್ಗಿಕ ರೀತಿಯಲ್ಲಿ ಬೆಳೆಸುವುದನ್ನು ಒಳಗೊಂಡಿರುತ್ತದೆ. ಇದು ಮಣ್ಣಿನ ಸಂಪನ್ಮೂಲವನ್ನು ಕಾಪಾಡಲು ಕೃತಕ ವಸ್ತುಗಳನ್ನು ತಪ್ಪಿಸುವ ಮತ್ತು ನೈಸರ್ಗಿಕ ಸಂಪನ್ಮೂಲಗಳ ಬಳಕೆಯನ್ನು ಒಳಗೊಂಡಿರುತ್ತದೆ ಮತ್ತು ಪರಿಸರ ಸಮತೋಲನವನ್ನು ಕಾಯ್ದುಕೊಳ್ಳುವ ಮೂಲಕ ಮಾಲಿನ್ಯ ಮತ್ತು ಅವನತಿಯನ್ನು ಕಡಿಮೆ ಮಾಡುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಸಾವಯವ ಕೃಷಿ ಎನ್ನುವುದು ರಾಸಾಯನಿಕ ಗೊಬ್ಬರಗಳು ಮತ್ತು ಕೀಟನಾಶಕಗಳ ಬಳಕೆಯಿಲ್ಲದೆ ಬೆಳೆಗಳನ್ನು ಬೆಳೆಯುವುದನ್ನು ಮತ್ತು ಆರೈಕೆ ಮಾಡುವ ಕೃಷಿ ವಿಧಾನವಾಗಿದೆ. ಅಲ್ಲದೆ, Genetically Modified Organisms (GMO ಅಂದರೆ ವಂಶವಾಹಿಗಳ ಮಾರ್ಪಾಡಿನಿಂದ ಬರುವ ಜೀವಿಗಳ) ಗಳ ಬಳಕೆಯನ್ನು ಅನುಮತಿಸುವುದಿಲ್ಲ. ಇದು ಪರಿಸರ ಸಮತೋಲಿತ ಕೃಷಿ ನೀತಿಗಳಾದ ಬೆಳೆ ಬದಲಾವಣೆ, ಹಸಿರು ಗೊಬ್ಬರ, ಸಾವಯವ ತ್ಯಾಜ್ಯ, ಕೀಟ ನಿಯಂತ್ರಣ, ಖನಿಜ ಸೇರ್ಪಡೆಗಳು ಇತ್ಯಾದಿಗಳನ್ನು ಅವಲಂಬಿಸಿದೆ. ಪ್ರತಿಕೂಲ ಪರಿಣಾಮಗಳೊಂದಿಗೆ ಲಾಗುವಾಡುಗಳನ್ನು ಬಳಸುವ ಬದಲು, ಸ್ಥಳೀಯ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವ ಪರಿಸರ ಪ್ರಕ್ರಿಯೆಗಳು ಮತ್ತು ಜೀವವೈವಿಧ್ಯವನ್ನು ಅವಲಂಬಿಸಿ, ಮಣ್ಣಿನ ವ್ಯವಸ್ಥೆಗಳು ಮತ್ತು ಪರಿಸರ ವ್ಯವಸ್ಥೆಗಳ ಆರೋಗ್ಯವನ್ನು ಸಾವಯವ ಕೃಷಿ ಕಾಪಾಡುತ್ತದೆ. ಸಾವಯವ ಕೃಷಿ ಸಂಪ್ರದಾಯ, ನಾವೀನ್ಯತೆ ಮತ್ತು ವಿಜ್ಞಾನವನ್ನು ಪರಿಸರಕ್ಕೆ ಲಾಭದಾಯಕವಾಗಿಸಲು ಮತ್ತು ಒಳಗೊಂಡಿರುವ ಎಲ್ಲರಿಗೂ ನ್ಯಾಯಯುತ ಸಂಬಂಧಗಳನ್ನು ಉತ್ತೇಜಿಸಲು ಸಂಯೋಜಿಸುತ್ತದೆ.

ಸಾವಯವ ಕೃಷಿಯ ಪ್ರಮುಖ ಲಕ್ಷಣಗಳು

* ಸುರಕ್ಷಿತ ಸಾವಯವ ವಸ್ತುಗಳನ್ನು ಬಳಸಿ ಮಣ್ಣಿನ ಗುಣಮಟ್ಟವನ್ನು ರಕ್ಷಿಸುವುದು ಮತ್ತು ಮಣ್ಣಿನಲ್ಲಿ ಜೈವಿಕ ಚಟುವಟಿಕೆಯನ್ನು ಉತ್ತೇಜಿಸುವುದು.
* ಇದು ಹೆಚ್ಚಾಗಿ ವರ್ಮಿಕಲ್ಚರ್ ಮತ್ತು ವರ್ಮಿಕಾಂಪೋಸ್ಟಿಂಗ್ (ಎರೆ ಹುಳು ಬೆಳೆಸುವುದು ಮತ್ತು ಎರೆ ಗೊಬ್ಬರ ತಯಾರಿಸುವುದು) ಅನ್ನು ಒಳಗೊಂಡಿರುತ್ತದೆ.
* ಮಣ್ಣಿನ ಸೂಕ್ಷ್ಮಜೀವಿಗಳ ಮೂಲಕ ಬೆಳೆಗೆ ಪೋಷಕಾಂಶಗಳನ್ನು ಪರೋಕ್ಷವಾಗಿ ಒದಗಿಸುವುದು.
* ಮೈಕೋರಿಜಾದಿಂದ ನಡೆಸಲ್ಪಡುವ ಜೈವಿಕ ಪ್ರಕ್ರಿಯೆಗಳು ಬೆಳೆಯುವ ಅವಧಿಯಲ್ಲಿ ಮಣ್ಣಿನಲ್ಲಿ ನೈಸರ್ಗಿಕ ಪೋಷಕಾಂಶಗಳ ಉತ್ಪಾದನೆಯನ್ನು ಅನುಮತಿಸುತ್ತವೆ.
* ದ್ವಿದಳ ಸಸ್ಯಗಳನ್ನು ಬಳಸಿ ಮಣ್ಣಿನಲ್ಲಿ ಸಾರಜನಕ ಸ್ಥಿರೀಕರಣ ಸಾಧಿಸುವುದು.
* ಸಾವಯವ ವಸ್ತುಗಳ ಪರಿಣಾಮಕಾರಿ ಮರುಬಳಕೆ.
* ಕಳೆ ಮತ್ತು ಕೀಟ ನಿಯಂತ್ರಣವನ್ನು ಬೆಳೆ ಬದಲಾವಣೆ/ ಆವರ್ತನೆ, ಜೀವವೈವಿಧ್ಯದ ಉತ್ತೇಜನ, ನೈಸರ್ಗಿಕ ಪರಭಕ್ಷಕಗಳ ಬಳಕೆ, ಸಾವಯವ ಗೊಬ್ಬರ ಒದಗಿಸುವಿಕೆ ಮುಂತಾದ ವಿಧಾನಗಳನ್ನು ಆಧರಿಸಿದೆ.
* ಜಾನುವಾರುಗಳನ್ನು ಸಾಕುವುದು ಮತ್ತು ಪೋಷಣೆ ಮಾಡುವುದು, ಆರೋಗ್ಯ, ವಸತಿ, ಪಾಲನೆ ಮತ್ತು ಪ್ರಾಣಿಗಳ ಸಂತಾನೋತ್ಪತ್ತಿಯನ್ನು ನೋಡಿಕೊಳ್ಳುವುದು.
* ನೈಸರ್ಗಿಕ ಆವಾಸಸ್ಥಾನಗಳ ಸಂರಕ್ಷಣೆ, ವನ್ಯಜೀವಿಗಳು ಮತ್ತು ದೊಡ್ಡ ಪರಿಸರದ ಕಾಳಜಿ.
* ಸಾವಯವ ಕೃಷಿಯ ಒಂದು ಪ್ರಮುಖ ಲಕ್ಷಣವೆಂದರೆ ತಳೀಯವಾಗಿ ವಿನ್ಯಾಸಗೊಳಿಸಿದ (Genetic Engineering) ಪ್ರಾಣಿಗಳು ಮತ್ತು ಸಸ್ಯಗಳ ಬಳಕೆಯನ್ನು ತಿರಸ್ಕರಿಸುವುದು.

ಸಾವಯವ ಕೃಷಿಯ ಕೆಲವು ಮಿತಿಗಳು

ಆಧುನಿಕ ಕೃಷಿ ವಿಜ್ಞಾನ ಬೆಳೆದಷ್ಟೂ ಸಮಗ್ರವಾಗಿ ಸಾವಯವ ಕೃಷಿ ಬೆಳೆದಿಲ್ಲ. ಉತ್ಪಾದಕತೆಯನ್ನು ಬೃಹತ್ ಪ್ರಮಾಣದಲ್ಲಿ ಸಾಧಿಸುವ ಸಾಧನಗಳು ಅದರಲ್ಲಿಲ್ಲ. ಉದಾಹರಣೆಗೆ ಬಹು ದೊಡ್ಡ ಪ್ರಮಾಣದಲ್ಲಿ ಬೆಳೆಗಳಿಗೆ ಸಾರಜನಕ, ರಂಜಕ ಮತ್ತು ಪೊಟಾಶ್ ಒದಗಿಸುವ ವಿಧಾನ ಅದರಲ್ಲಿ ಇಲ್ಲ. ವಿವಿಧ ವಿಜ್ಞಾನ ಶಾಖೆಗಳೊಂದಿಗೆ ಸಂಯೋಜಿಸಿ ಸಮಗ್ರ ತಂತ್ರಜ್ಞಾನವಾಗಿ ಅದು ಇನ್ನೂ ಬೆಳೆಯಬೇಕು. ದೊಡ್ಡ ಪ್ರಮಾಣದಲ್ಲಿ ಸಾವಯವ ಕೃಷಿಗೆ ಬೇಕಾಗುವ ಲಾಗುವಾಡುಗಳ ಉತ್ಪಾದನೆ ಇಲ್ಲ.

ಅತ್ಯಂತ ದೊಡ್ಡ ಪ್ರಮಾಣದಲ್ಲಿ ಆಹಾರ ಉತ್ಪಾದನೆ ಅವಶ್ಯವಿರುವ ಭಾರತದಂತಹ ದೇಶದಲ್ಲಿ ಉತ್ಪಾದನೆಯ ಕುಸಿತವಾದರೆ ಅದು ಇಡೀ ದೇಶವನ್ನು ಅಲ್ಲೋಲ ಕಲ್ಲೋಲಗೊಳಿಸುತ್ತದೆ. ಆದ್ದರಿಂದಲೇ ಸಾವಯವ ಕೃಷಿಗೆ ಇಡೀ ದೇಶವನ್ನು ಒಳಪಡಿಸುವುದು ವೈಜ್ಞಾನಿಕವೂ ಅಲ್ಲ, ಸುಲಭ ಸಾಧ್ಯವಲ್ಲ, ಅಪಾಯಕಾರಿ ಕೂಡಾ. ಇದನ್ನು ಶ್ರೀಲಂಕಾದ ಪೂರ್ಣ ಸಾವಯವ ಕೃಷಿ ನೀತಿಯ ಅನುಭವ ಕಣ್ಣಿಗೆ ಕಟ್ಟಿದಂತೆ ತೋರಿಸಿಕೊಟ್ಟಿದೆ.



ಶ್ರೀಲಂಕಾದ ಆಹಾರ ಬಿಕ್ಕಟ್ಟು, ಆರ್ಥಿಕ ತುರ್ತು ಪರಿಸ್ಥಿತಿ............ ಪುಟ 6 ರಿಂದ

ನಂತರ ಪ್ರಸ್ತುತ ಬಿಕ್ಕಟ್ಟಿನ ಸಂದರ್ಭದಲ್ಲಿ ಹೆಚ್ಚು ಪರಿಣಾಮ ಬೀರುವ ಬೆಳೆಯಾದ ಚಹಾ ಬೆಳೆಗಾರರು ತುಂಬಾ ಚಿಂತಿತರಾಗಿದ್ದಾರೆ. ಸಾವಯವ ಕೃಷಿ ನೀತಿಯಿಂದಾಗಿ ಶ್ರೀಲಂಕಾದ ಚಹಾ ಉತ್ಪಾದನೆಯು ಅರ್ಧದಷ್ಟು ಕಡಿಮೆಯಾಗಬಹುದು ಎಂದು ಅಹಂಗಮದ ಮಾಸ್ಟರ್ ಟೀ ತಯಾರಕ ಮತ್ತು ಸ್ವತಃ ಟಾಸ್ಕ್ ಫೋರ್ಸ್ ಸದಸ್ಯ ಹರ್ಮನ್ ಗುಣರತ್ನೆ ಹೇಳುತ್ತಾರೆ. ಶ್ರೀಲಂಕಾದ ಶೇಕಡಾ 10 ರಫ್ತು ಆದಾಯವು ಚಹಾದಿಂದ ಬರುತ್ತದೆ. ಇದು ಗಂಭೀರ ಸಮಸ್ಯೆಯನ್ನು ಒಡ್ಡುತ್ತದೆ. ದಕ್ಷಿಣ ಚೀನಾ ಮಾರ್ನಿಂಗ್ ಪೋಸ್ಟ್‌ಗೆ ನೀಡಿದ ಸಂದರ್ಶನದಲ್ಲಿ ಅವರು ಹೇಳಿದ್ದು:

“ಈ ಆಮದು ನಿಷೇಧವು ಚಹಾ ಉದ್ಯಮವನ್ನು ಸಂಪೂರ್ಣ ಅಸ್ತವ್ಯಸ್ತಗೊಳಿಸಿದೆ ... ಪರಿಣಾಮಗಳು ಊಹಾತೀತವಾಗಿದೆ ... ಚಹಾ ಉದ್ಯಮವು ಸಾರಜನಕ (N), ರಂಜಕ (P) ಮತ್ತು ಪೊಟ್ಯಾಶ್ (K) ಅನ್ನು ಅವಲಂಬಿಸಿದೆ ... ಮುಖ್ಯವಾಗಿ ಇವು ಇಲ್ಲದೆ ನಾವು ಕೃಷಿ ಮಾಡಲು ಸಾಧ್ಯವಿಲ್ಲದ ಸ್ಥಿತಿ ಉಂಟಾಗುತ್ತದೆ. ಉತ್ಪಾದನೆಯಲ್ಲಿ 50 ಪ್ರತಿಶತದಷ್ಟು ಕುಸಿತವನ್ನು ನಿರೀಕ್ಷಿಸಬಹುದು ... ನಾವು ಸಂಪೂರ್ಣವಾಗಿ ಸಾವಯವ ಕೃಷಿಗೆ ಬದಲಾಯಿಸಿದರೆ ಹೋದರೆ, ನಾವು ದೊಡ್ಡ ಪ್ರಮಾಣದಲ್ಲಿ ಆದಾಯ ಕಳೆದುಕೊಳ್ಳುತ್ತೇವೆ ಎಂಬ ಅಂಶವನ್ನು ಹೊರತುಪಡಿಸಿ ಅದು ಚಹಾ ಗುಣಮಟ್ಟಕ್ಕೆ ಸಹಾಯ ಮಾಡುತ್ತದೆ ಎಂಬ ದೃಷ್ಟಿಕೋನವನ್ನು ನಾನು ಒಪ್ಪುವುದಿಲ್ಲ. ಶೇ 50 ರಷ್ಟು ಬೆಳೆ ಕಡಿಮೆಯಾದರೆ ಅದನ್ನು ಸರಿತೂಗಿಸಲು ನಾವು ಶೇಕಡಾ 50 ರಷ್ಟು ಹೆಚ್ಚಿನ ಬೆಳೆಗಳನ್ನು ಪಡೆಯಲು ಸಾಧ್ಯವಾಗುವುದಿಲ್ಲ ... ಮತ್ತು ಪ್ರಪಂಚದಲ್ಲಿ ಸಾವಯವ ಚಹಾಕ್ಕೆ ಅತ್ಯಂತ ಸೀಮಿತ ಮಾರುಕಟ್ಟೆ ಇದೆ. ಬೆಳೆಯ ಇಳಿಕೆಯನ್ನು ಸರಿದೂಗಿಸಲು ಯಾವುದೇ ಮಾರ್ಗವಿಲ್ಲ.”

ಪರಿಸ್ಥಿತಿಯ ಗಂಭೀರತೆಯನ್ನು ಗ್ರಹಿಸಿ ಹಾಗೂ ರೈತರು ಮತ್ತು ಬೆಳೆಗಾರರಿಂದ ವ್ಯಾಪಕ ಪ್ರತಿಭಟನೆಗಳಿಗೆ ಪ್ರತಿಕ್ರಿಯಿಸಿದ ರಾಜಪಕ್ಸೆ ಸರ್ಕಾರವು ಮೇ 2021 ರ ಅಂತ್ಯದ ವೇಳೆಗೆ ನೀತಿಯ ಕೆಲವು ಅಂಶಗಳನ್ನು ಹಿಂತೆಗೆದುಕೊಂಡಿತು. 31 ಮೇ 2021 ರಂದು, ಕ್ಯಾಬಿನೆಟ್ "ಕಾರ್ಬೊನಿಕ್ ಗೊಬ್ಬರಗಳು, ನೈಸರ್ಗಿಕ ಖನಿಜಗಳು ಮತ್ತು ಚೇಲೇಟೆಡ್ ಗಿಡಮೂಲಿಕೆಗಳ ಖನಿಜಗಳ ಆಮದನ್ನು ಅನುಮೋದಿಸಿತು. ಶೇಕಡಾ 13.25 ರಷ್ಟು ಸಾರಜನಕವಿರುವ ‘ಬ್ಲಡ್ ಮೀಲ್’ ಎಂಬ ಉತ್ಪನ್ನ ಬಿಟ್ಟರೆ, ಕನಿಷ್ಠ 10 ಪ್ರತಿಶತ ಸಾರಜನಕ ಇರುವ"ಸಾವಯವ ಗೊಬ್ಬರ ಉತ್ಪನ್ನಗಳು ಇಲ್ಲ ಎಂದು ತಿಳಿದಿಲ್ಲವಾದರೂ, ಅಂತಹ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳಲು ಟೆಂಡರ್ ಅನ್ನು ಕೂಡ ಹಾಕಲಾಯಿತು. 31 ಜುಲೈ 2021 ರಂದು, ಕೆಲವು ಸಂರಕ್ಷಿತ ಕೃಷಿ ವಲಯದಿಂದ ಕೆಲವು ರಸಗೊಬ್ಬರ ಮಿಶ್ರಣಗಳನ್ನು ಆಮದು ಮಾಡಿಕೊಳ್ಳಲು ಅನುಮತಿ ನೀಡಲಾಯಿತು. ಮೇಲೆ ನೀಡಲಾದ ಆದೇಶಗಳಿಗಾಗಿ ಯಾವುದೇ ವಿವರವಾದ ಮಾರ್ಗಸೂಚಿಗಳು ಅಸ್ತಿತ್ವದಲ್ಲಿಲ್ಲ. ಮತ್ತು ಯಾವುದನ್ನು ಆಮದು ಮಾಡಿಕೊಳ್ಳಬಹುದು ಮತ್ತು ಯಾವುದನ್ನು ಆಮದು ಮಾಡಿಕೊಳ್ಳಲು ಸಾಧ್ಯವಿಲ್ಲ ಎಂಬ ಬಗ್ಗೆ ಹೆಚ್ಚಿನ ಗೊಂದಲಗಳಿವೆ. ಕೃಷಿ ವಿಜ್ಞಾನಿಗಳು ತುರ್ತು ಬಳಕೆಗಾಗಿ 25 ಕೃಷಿ ರಾಸಾಯನಿಕಗಳ ಪಟ್ಟಿಯನ್ನು ಆಮದು ಮಾಡಲು ಶಿಫಾರಸು ಮಾಡಿದ್ದಾರೆ. ಆದರೆ ಈ ಶಿಫಾರಸನ್ನು ಸರ್ಕಾರ ತಿರಸ್ಕರಿಸಿದೆ. ಎಲ್ಲಕ್ಕಿಂತ ಹೆಚ್ಚಾಗಿ, ಸಸ್ಯ ಮತ್ತು ಪ್ರಾಣಿಗಳ ಸಂಪರ್ಕ ತಡೆಗೆ (ಕ್ವಾರಂಟೈನ್) ಸಂಬಂಧಿಸಿದ ನಿಯಮಗಳ ಉಲ್ಲಂಘನೆಯ ಬಗ್ಗೆ ಅಧಿಕಾರಿಗಳು ಪ್ರಶ್ನೆಗಳನ್ನು ಎತ್ತಿದ ನಂತರ ಕಾಂಪೋಸ್ಟ್ ಆಮದನ್ನು ಸಹ ನಿಷೇಧಿಸಲಾಯಿತು.

ಗೊಂದಲಮಯ ಮತ್ತು ಅವೈಜ್ಞಾನಿಕ ನೀತಿಯು ಇತರ ಕ್ಷೇತ್ರಗಳಲ್ಲೂ ಹಾನಿಯನ್ನುಂಟು ಮಾಡಿದೆ. ಉದಾಹರಣೆಗೆ, ಶ್ರೀಲಂಕಾದ 107,000 ಹೆಕ್ಟೇರ್‌ಗಳಲ್ಲಿ 20,000 ರಬ್ಬರ್ ಪೆಸ್ಟಲೋಟಿಯೊಪ್ಸಿಸ್‌ನಿಂದ ಬಾಧಿತವಾಗಿದೆ. ಇದು ಶಿಲೀಂಧ್ರ ಎಲೆ ರೋಗವಾಗಿದ್ದು, ಕಾರ್ಬೆಂಡಜಿಮ್ ಮತ್ತು ಹೆಕ್ಸಾಕೊನಜೋಲ್ ಸಿಂಪಡಿಸುವಿಕೆಯಿಂದ ನಿಯಂತ್ರಿಸಲ್ಪಡುತ್ತದೆ. ಇದಲ್ಲದೆ, ಉತ್ತಮ ಎಲೆಗಳ ಬೆಳವಣಿಗೆಯನ್ನು ಉತ್ತೇಜಿಸಲು ರಾಸಾಯನಿಕ ಗೊಬ್ಬರಗಳನ್ನು ಬಳಸಬೇಕಾಗುತ್ತದೆ. ಆದರೆ ರಾಸಾಯನಿಕ ಗೊಬ್ಬರ ಮಾರುಕಟ್ಟೆಯಲ್ಲಿ ಲಭ್ಯವಿಲ್ಲ. ಇದರ ಪರಿಣಾಮವಾಗಿ, ಕೊಲಂಬೊ ರಬ್ಬರ್ ಟ್ರೇಡರ್ಸ್ ಅಸೋಸಿಯೇಷನ್ ??ರಬ್ಬರ್ ಉತ್ಪಾದನೆ ಶೇಕಡಾ 15–20 ರಷ್ಟು ಕುಸಿಯುತ್ತದೆ ಎಂದು ನಿರೀಕ್ಷಿಸಿದೆ. ಅಸೋಸಿಯೇಷನ್ ??ಪ್ರಕಾರ, "ಈ ಎಲೆ ರೋಗ ರಬ್ಬರ್ ಉದ್ಯಮದ ಸಂದರ್ಭದಲ್ಲಿ ಕೋವಿಡ್ –19 ಗೆ ಸಮನಾಗಿದೆ ಎಂದು ಅದರ ವಿನಾಶಕಾರಿ ಸಾಮರ್ಥ್ಯ ಮತ್ತು ಅದು ಹರಡುವ ಕ್ಷಿಪ್ರ ವೇಗ ಎರಡನ್ನೂ ಪರಿಗಣಿಸಿ ಹೋಲಿಸಿದೆ."

ಸಾವಯವ ಕೃಷಿಯೊಂದಿಗೆ ಶ್ರೀಲಂಕಾದ ಪ್ರಯೋಗದಿಂದ ಉಂಟಾದ ವಿನಾಶವು ಇದೇ ರೀತಿಯ ಬಲೆಗೆ ಬೀಳದಂತೆ ವಿಶ್ವದಾದ್ಯಂತ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಎಚ್ಚರಿಕೆಯಾಗಿದೆ. ಕಡಿಮೆ ಉತ್ಪಾದಕತೆಯ ಮಟ್ಟದಲ್ಲಿಯೂ ಕೃಷಿಗೆ ರಾಸಾಯನಿಕ ಲಾಗುವಾಡುಗಳ ಅತಾರ್ಕಿಕ ಕಡಿತವು ದುರಂತವನ್ನು ತರಬಹುದು. ಮಣ್ಣು ಸಾವಯವ ಪದಾರ್ಥಗಳಲ್ಲಿ ಸಾಮಾನ್ಯವಾಗಿ ಕಳಪೆಯಾಗಿರುವ ಭಾರತದಂತಹ ದೇಶವನ್ನು ತೆಗೆದುಕೊಳ್ಳಿ. ನಮ್ಮ ಕೃಷಿಭೂಮಿಯಲ್ಲಿ ಅಂದಾಜು ಶೇ .59 ರಷ್ಟು ಮಣ್ಣಿನಲ್ಲಿ ಸಾರಜನಕ ಕಡಿಮೆ ಇರುವಂಥವು, ಶೇ .49 ರಷ್ಟು ರಂಜಕ ಕಡಿಮೆ ಮತ್ತು ಶೇ .48 ರಷ್ಟು ಪೊಟ್ಯಾಸಿಯಮ್ ಕಡಿಮೆ ಇರುವಂಥವು. ಸತು, ಕಬ್ಬಿಣ, ಮ್ಯಾಂಗನೀಸ್, ತಾಮ್ರ, ಮಾಲಿಬ್ಡಿನಮ್ ಮತ್ತು ಬೋರಾನ್ ನಂತಹ ಸೂಕ್ಷ್ಮ ಪೋಷಕಾಂಶಗಳಲ್ಲಿ ಭಾರತೀಯ ಮಣ್ಣುಗಳು ವಿವಿಧ ಹಂತಗಳಲ್ಲಿ ಕೊರತೆಯನ್ನು ಹೊಂದಿವೆ. ಸೂಕ್ಷ್ಮ ಪೋಷಕಾಂಶಗಳ ಕೊರತೆಗಳು ಕೇವಲ ಇಳುವರಿಯನ್ನು ಸೀಮಿತಗೊಳಿಸುವುದಿಲ್ಲ. ಅವು ಮಣ್ಣಿನಲ್ಲಿರುವ ಇತರ ಪೋಷಕಾಂಶಗಳ ಸಂಪೂರ್ಣ ಅಭಿವ್ಯಕ್ತಿಯನ್ನು ಸಹ ಸಾಧ್ಯವಾಗಿಸುವುದಿಲ್ಲ. ಇದು ಫಲವತ್ತತೆಯ ಒಟ್ಟಾರೆ ಕುಸಿತಕ್ಕೆ ಕಾರಣವಾಗುತ್ತದೆ.

ಕೃಷಿ ವಿಜ್ಞಾನಿಗಳು ಯಾವಾಗಲೂ ಮಣ್ಣಿನ ಪೌಷ್ಟಿಕಾಂಶದ ಕೊರತೆಗಳ ಬಗ್ಗೆ ತಿಳಿದಿದ್ದಾರೆ. ಜೊತೆಗೆ ರಾಸಾಯನಿಕಗಳ ಅತಿಯಾದ ಬಳಕೆ ಮತ್ತು ಅನುಚಿತ/ಅಸಮತೋಲಿತ ರಸಗೊಬ್ಬರಗಳ ಅಪಾಯಗಳ ಬಗ್ಗೆಯೂ ಸಹ. ಆದ್ದರಿಂದ ಅವರು ಮಣ್ಣಿನ ಆರೋಗ್ಯವನ್ನು ಪೋಷಿಸಲು ಮತ್ತು ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಸ್ಥಳ–ನಿರ್ದಿಷ್ಟ ಪರಿಹಾರಗಳನ್ನು ಶಿಫಾರಸು ಮಾಡುತ್ತಾರೆ. ಅವರು ಮಣ್ಣು–ಪರೀಕ್ಷೆ ಆಧಾರಿತ ಸ್ಥಳ–ನಿರ್ದಿಷ್ಟ ಸಮತೋಲಿತ ಗೊಬ್ಬರ ಮತ್ತು ಸಂಯೋಜಿತ ಪೌಷ್ಟಿಕ ನಿರ್ವಹಣಾ ವಿಧಾನಗಳನ್ನು ಸಾವಯವ ಗೊಬ್ಬರಗಳನ್ನು (ಅಂದರೆ, ಗದ್ದೆಯ ಗೊಬ್ಬರ, ಕಾಂಪೋಸ್ಟ್, ಬೆಳೆಗಳ ಕಟಾವಿನ ನಂತರದ ಉಳಿಕೆಗಳು, ಜೈವಿಕ ಗೊಬ್ಬರ, ಹಸಿರು ಗೊಬ್ಬರ ಇತ್ಯಾದಿ) ರಾಸಾಯನಿಕ ಗೊಬ್ಬರಗಳೊಂದಿಗೆ ಸಂಯೋಜಿಸುತ್ತಾರೆ. ಹೀಗಾಗಿ, ಅವರು ಕೆಲವು ಸ್ಥಳಗಳಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಕಡಿಮೆ ಮಾಡುವುದನ್ನು ಸಮರ್ಥಿಸಬಹುದಾದರೂ, ಅವರು ಇತರೆಡೆ ಅದರ ಬಳಕೆಯನ್ನು ಉತ್ತೇಜಿಸುತ್ತಾರೆ.

ಇಂತಹ ಸಮಗ್ರ ಮತ್ತು ಸಂಯೋಜಿತ ವಿಧಾನಕ್ಕೆ, ವಿಜ್ಞಾನ ಮತ್ತು ವೈಜ್ಞಾನಿಕ ವಿಧಾನದ ದೃಢವಾದ ಅನುಸರಣೆ ಅಗತ್ಯವಿರುತ್ತದೆ ಮತ್ತು ಅವು "ಸಾವಯವ", "ಪರಿಸರ ಸ್ನೇಹಿ", "ಪ್ರಕೃತಿ–ಪರ" ವೇಷವನ್ನು ಧರಿಸಿರುವ ವಿಜ್ಞಾನ ವಿರೋಧಿ ಮಾದರಿಗಳನ್ನು ಅಷ್ಟೇ ದೃಢವಾಗಿ ತಿರಸ್ಕರಿಸಬೇಕು. ಅಧ್ಯಕ್ಷ ರಾಜಪಕ್ಸೆ ಅವರ ನೀತಿಯು ಪ್ರಸ್ತುತ ಭಾರತ ಸರ್ಕಾರದ ಶೂನ್ಯ ಬಜೆಟ್ ನೈಸರ್ಗಿಕ ಕೃಷಿಯ (ZBNF) ಪ್ರಚಾರದಂತೆಯೇ ಎರಡನೇ ವರ್ಗಕ್ಕೆ ಸೇರುತ್ತದೆ. ಈ ನೀತಿಯ ಒಟ್ಟು ಹಿಂಪಡೆಯುವಿಕೆಯಿಂದ ಮಾತ್ರ ಶ್ರೀಲಂಕಾದ ಕೃಷಿಯನ್ನು ಉಳಿಸಬಹುದು. ಶ್ರೀಲಂಕಾ ಸರ್ಕಾರವು ದೇಶದ ಕೃಷಿ ವಿಜ್ಞಾನಿಗಳ ಮಾತುಗಳನ್ನು ಕೇಳುವುದು ಒಳ್ಳೆಯದು ಮತ್ತು ತಜ್ಞರಂತೆ ಛದ್ಮವೇಷ ಹಾಕುವುವವರಿಗೆ ಮಣೆ ಹಾಕುವುದನ್ನು ಮುಂದುವರೆಸುವುದು ಅಪಾಯಕರ.





ಸ್ಕೀಂ ನೌಕರರ ಸಪ್ಟಂಬರ್ 24 ಅಖಿಲ ಭಾರತ ಮುಷ್ಕರ-ಹೆಚ್ಚಿದ ಐಕ್ಯತೆ

ಸ್ಕೀಂ ಕಾರ್ಮಿಕರ ಒಕ್ಕೂಟಗಳ ಜಂಟಿ ವೇದಿಕೆ ನೀಡಿದ ಸಪ್ಟಂಬರ್24ರ ಅಖಿಲ ಭಾರತ ಮುಷ್ಕರದಲ್ಲಿ ಲಕ್ಷಾಂತರ ಅಂಗನವಾಡಿ, ಆಶಾ, ಮಧ್ಯಾಹ್ನದ ಊಟ ಮುಂತಾದ ಯೋಜನೆಗಳ ನೌಕರರು ಉತ್ತಮ ರೀತಿಯಲ್ಲಿ ತಮ್ಮ ಶಕ್ತಿ ಪ್ರದರ್ಶನ ಮಾಡಿದ್ದಾರೆ ಎಂದು ಜಂಟಿ ವೇದಿಕೆ ಅವರನ್ನು ಅಭಿನಂದಿಸಿದೆ. ದೇಶಾದ್ಯಂತ ಜಿಲ್ಲಾ/ ಬ್ಲಾಕ್ ಮಟ್ಟಗಳಲ್ಲಿ ಈ ನೌಕರರು ಮತಪ್ರದರ್ಶನಗಳು, ಧರಣಿ, ರ್‍ಯಾಲಿ ಮುಂತಾದವುಗಳನ್ನು ನಡೆಸಿ ಮುಷ್ಕರದಲ್ಲಿ ಭಾಗವಹಿಸಿದರು. ಹಲವೆಡೆ ಅವರು ದಮನ, ಬುಡಮೇಲು ಪ್ರಯತ್ನಗಳನ್ನು ಎದುರಿಸಬೇಕಾಯಿತು. ಆದರೂ ಗುಜರಾತ ಮತ್ತು ಜಮ್ಮು–ಕಾಶ್ಮೀರವೂ ಸೇರಿದಂತೆ ದೇಶಾದ್ಯಂತ ಈ ಕಾರ್ಯಾಚರಣೆ ಯಶಸ್ವಿಯಾಗಿ ನಡೆದಿದೆ ಎಂದು ವೇದಿಕೆಯ ಮುಖಂಡರು ಹೇಳಿದ್ದಾರೆ.

ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ಯುಟಿಯುಸಿಗೆ ಸೇರಿದ ಸ್ಕೀಂ ಕಾರ್ಮಿಕರ ಸಂಘಟನೆಗಳು ಜಂಟಿಯಾಗಿ ಈ ಕಾರ್ಯಾಚರಣೆಗೆ ಕರೆ ನೀಡಿದ್ದವು. ದೇಶದಲ್ಲಿ ಹಲವೆಡೆ ಇನ್ನೂ ಕೊವಿಡ್ ಬಾಧಕಗಳು ಇದ್ದರೂ, ಹಿಂದಿನ ಎಲ್ಲ ಐಕ್ಯ ಹೋರಾಟಗಳಿಗಿಂತ ಈ ಬಾರಿಯ ಮುಷ್ಕರ ಹೆಚ್ಚು ವ್ಯಾಪಕವಾಗಿ ಐಕ್ಯತೆಯಿಂದ ನಡೆದಿದೆ, ಈ ಬಾರಿ ಸ್ಕೀಂ ಕಾರ್ಮಿಕರ ವಿವಿಧ ವಿಭಾಗಗಳ ನಡುವೆ, ಮತ್ತು ಕಾರ್ಮಿಕ ಸಂಘಗಳ ನಡುವೆ ಹೆಚ್ಚು ಸಂಯೋಜನೆ ಇತ್ತು ಎಂದು ವೇದಿಕೆಯ ಮುಖಂಡರು ಹರ್ಷ ವ್ಯಕ್ತಪಡಿಸಿದ್ದಾರೆ.

ಕೊವಿಡ್ ಕರ್ತವ್ಯಕ್ಕೆ ನಿಯೋಜಿಸಲ್ಪಟ್ಟವರು ಮತ್ತು ಕೊವಿಡ್ ನಿರ್ವಹಣೆಯ ಕೆಲಸದಲ್ಲಿ ತೊಡಗಿರುವವರು ಎಲ್ಲರಿಗೂ ಸುರಕ್ಷತಾ ಉಡುಪುಗಳನ್ನು, ರಿಸ್ಕ್ ಭತ್ಯೆ ಮತ್ತು ವಿಮಾ ರಕ್ಷಣೆ ಒದಗಿಸಬೇಕು ಎಂಬ ಬೇಡಿಕೆಯೂ ಸೇರಿದಂತೆ, ಈ ಸ್ಕೀಂ ಕಾರ್ಮಿಕರ ದೀರ್ಘ ಕಾಲದ, ಇನ್ನೂ ಈಡೇರದೇ ಉಳಿದಿರುವ ತಮ್ಮನ್ನು ಕಾರ್ಮಿಕರೆಂದು ಪರಿಗಣಿಸಬೇಕು, ಕನಿಷ್ಟ ಕೂಲಿ ಮತ್ತು ಸಾಮಾಜಿಕ ಭದ್ರತೆ, ಪೆನ್ಶನ್ ಮುಂತಾದ ಬೇಡಿಕೆಗಳನ್ನು ಈ ಮುಷ್ಕರದಲ್ಲಿ ಮತ್ತೆ ಎತ್ತಲಾಗಿತ್ತು, ಎಲ್ಲ ಕೇಂದ್ರಗಳಲ್ಲಿ ಸಂಘಗಳಿಂದ ಪ್ರಧಾನ ಮಂತ್ರಿಗಳಿಗೆ ಮನವಿ ಪತ್ರಗಳನ್ನು ಸಲ್ಲಿಸಲಾಯಿತು. ಇದರಲ್ಲಿ ಕಾರ್ಮಿಕರ ಬೇಡಿಕೆಗಳಲ್ಲದೆ, ಜನತೆಯ ಆರೋಗ್ಯದ, ಪೌಷ್ಟಿಕತೆಯ ಹಕ್ಕುಗಳನ್ನು ಹಾಗೂ ಇದಕ್ಕಾಗಿ ಸಾಕಷ್ಟು ಬಜೆಟ್ ಅನುದಾನಗಳನ್ನು ಕೊಡಬೇಕು ಎಂದೂ ಒತ್ತಾಯಿಸಲಾಗಿದೆ. ಈ ಮುಷ್ಕರಕ್ಕೆ ವಿವಿಧ ಜನವಿಭಾಗಗಳಿಂದಲೂ ವ್ಯಾಪಕ ಬೆಂಬಲ ದೊರಕಿದೆ.

ಸಿಪಿಐ(ಎಂ) ರಾಜ್ಯ ಸಮ್ಮೇಳನಗಳು: ದಿಲ್ಲಿ ಮತ್ತು ಹಿಮಾಚಲ ಪ್ರದೇಶ

ಸಿಪಿಐ(ಎಂ)ನ 23 ನೇ ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ರಾಜ್ಯಸಮ್ಮೇಳನಗಳು ಆರಂಭವಾಗಿವೆ.



ದಿಲ್ಲಿ ರಾಜ್ಯಸಮ್ಮೇಳನ ಸಪ್ಟಂಬರ್ 24ರಿಂದ 26 ರವರೆಗೆ ನಡೆದಿದ್ದು ಪ್ರಧಾನ ಕಾರ್ಯದರ್ಶಿ ಇದರ ಉದ್ಘಾಟನೆ ನಡೆಸಿದರು. ಬಹಿರಂಗ ಅಧಿವೇಶನವನ್ನು ಉದ್ದೇಶಿಸಿ ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಮಾತನಾಡಿದರು. ಇನ್ನೊಬ್ಬ ಪೊಲಿಟ್‌ಬ್ಯುರೊ ಸದಸ್ಯ ಪ್ರಕಾಶ ಕಾರಟ್ ಪ್ರತಿನಿಧಿಗಳ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದರು.

158 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. ಇವರಲ್ಲಿ 52 ಮಹಿಳೆಯರು. ರಾಜ್ಯ ಕಾರ್ಯದರ್ಶಿ ಕೆ ಎಂ ತಿವಾರಿಯವರು ಮಂಡಿಸಿದ ವರದಿಯ ಮೇಲಿನ ಏಳು ಗಂಟೆಗಳ ಚರ್ಚೆಯಲ್ಲಿ 66 ಪ್ರತಿನಿಧಿಗಳು ಭಾಗವಹಿಸಿದರು.


ಸಮ್ಮೇಳನ ಕೆ ಎಂ ತಿವಾರಿಯವರನ್ನು ರಾಜ್ಯ ಕಾರ್ಯದರ್ಶಿಯಾಗಿ ಮರು ಆಯ್ಕೆ ಮಾಡಿತು.

ಈಗಾಗಲೇ ಕೇಂದ್ರ ಸಮಿತಿಯ ಮಾರ್ಗಸೂಚಿಗಳನ್ನು ಅಂಗೀಕರಿಸಿರುವ ದಿಲ್ಲಿ ರಾಜ್ಯ ಸಮಿತಿ ರಾಜ್ಯಸಮಿತಿಗೆ ಗರಿಷ್ಠ ಪ್ರವೇಶ ವಯಸ್ಸು 62 ಮತ್ತು ಸೇವಾ ನಿವೃತ್ತಿ ವಯಸ್ಸು 72 ವರ್ಷ ಎಂದು ನಿಗದಿ ಮಾಡಿದ್ದು, ಹೊಸ ರಾಜ್ಯಸಮಿತಿಯ ಸರಾಸರಿ ವಯಸ್ಸು 53 ಆಗಿದೆ. 30 ಸದಸ್ಯರಿರುವ ಹೊಸ ರಾಜ್ಯ ಸಮಿತಿಯಲ್ಲಿ 9 ಮಂದಿ ಹೊಸಬರಿದ್ದಾರೆ. 9 ಸದಸ್ಯರಿರುವ ಕಾರ್ಯದರ್ಶಿ ಮಂಡಳಿಯನ್ನು ಸಮ್ಮೇಳನ ಆರಿಸಿತು.

ಹಿಮಾಚಲ ಪ್ರದೇಶದ ರಾಜ್ಯ ಸಮ್ಮೇಳನ ಸಪ್ಟಂಬರ್ 25–26ರಂದು ಕುಲುನಲ್ಲಿ ನಡೆಯಿತು.

ಪೊಲಿಟ್‌ಬ್ಯುರೊ ಸದಸ್ಯ ತಪನ್ ಸೆನ್ ಉದ್ಘಾಟಿಸಿದ ಸಮ್ಮೇಳನದಲ್ಲಿ 195 ಪ್ರತಿನಿಧಿಗಳು ಭಾಗವಹಿಸಿದರು. ಒಟ್ಟು 26 ಪ್ರತಿನಿಧಿಗಳು ಸಮ್ಮೇಳನದ ರಾಜಕೀಯ ಮತ್ತು ಸಂಘಟನಾ ವರದಿಗಳ ಮೇಲೆ ಚರ್ಚೆಯಲ್ಲಿ ಭಾಗವಹಿಸಿದರು.

ಸಮ್ಮೇಳನ 30 ಸದಸ್ಯರಿರುವ ರಾಜ್ಯಸಮಿತಿಯನ್ನು ಮತ್ತು ಏಳು ಸದಸ್ಯರಿರುವ ಕಾರ್ಯದರ್ಶಿ ಮಂಡಳಿಯನ್ನು ಚುನಾಯಿಸಿತು. ಓಂಕಾರ್ ಶಾಡ್ ಸರ್ವಸಮ್ಮತಿಯಿಂದ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.



ಹೊಸದಾಗಿ ಆಯ್ಕೆಯಾಗಿರುವ ಹಿಮಾಚಲ ಪ್ರದೇಶ ಸಿಪಿಐ(ಎಂ) ರಾಜ್ಯ ಸಮಿತಿಯ ಸದಸ್ಯರು



ಕೇರಳ: 100 ದಿನಗಳ ಕಾರ್ಯಕ್ರಮದಲ್ಲಿ 65 ಸಾವಿರ ಉದ್ಯೋಗಗಳ ನಿರ್ಮಾಣ

ಕೇರಳದ ಎಲ್‌ಡಿಎಫ್ ಸರಕಾರ ಅಧಿಕಾರ ವಹಿಸಿಕೊಂಡ 15 ದಿನಗಳಲ್ಲಿ, ಮುಖ್ಯಮಂತ್ರಿ ಪಿಣರಾಯಿ ವಿಜಯನ್ 100 ದಿನಗಳ ಕಾರ್ಯಕ್ರಮಗಳನ್ನು ಪ್ರಕಟಿಸಿದ್ದರು. ಇದರಲ್ಲಿ ಸಾರ್ವಜನಿಕ ಕಾಮಗಾರಿ ಇಲಾಖೆ, ಕೇರಳ ಪುನರ್ನಿರ್ಮಾಣ ಉಪಕ್ರಮ ಮತ್ತು ಕೇರಳ ಮೂಲರಚನೆ ಹೂಡಿಕೆ ನಿಧಿಯ ಮೂಲಕ 2464.92 ಕೋಟಿ ರೂ.ಗಳ ಪರಿಯೋಜನೆಗಳು ಇದ್ದವು. ಕೊವಿಡ್‌ನಿಂದ ಉಂಟಾಗಿರುವ ಆರ್ಥಿಕ ನಿಧಾನಗತಿಯನ್ನು ಎದುರಿಸಲು ಇದನ್ನು ಯೋಜಿಸಲಾಗಿದೆ.

ಈ ಅವಧಿ ಮುಗಿಯುವ ವೇಳೆಗೆ 178ರಲ್ಲಿ 132 ಪ್ರಾಜೆಕ್ಟ್‌ಗಳು ಪೂರ್ಣಗೊಂಡಿವೆ, ಉಳಿದ 46 ಬೇಗನೇ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಹೇಳಲಾಗಿದೆ. ಪೂರ್ಣಗೊಂಡಿರುವ ಪರಿಯೋಜನೆಗಳಲ್ಲಿ 12067 ಮನೆಗಳು, 92 ಹೊಸ ಶಾಲಾ ಕಟ್ಟಡಗಳು, 1000 ಗ್ರಾಮೀಣ ರಸ್ತೆಗಳು ಮತ್ತು ಮೂರು ಫುಟ್‌ಬಾಲ್ ಅಕಾಡೆಮಿಗಳು ಸೇರಿವೆ.

36 ಅಪಾರ್ಟ್‌ಮೆಂಟ್ ಸಂಕೀರ್ಣಗಳಲ್ಲಿ 2207 ಫ್ಲಾಟ್‌ಗಳ ನಿರ್ಮಾಣ ನಡೆದಿದೆ. ಇನ್ನೂ 17 ಅಪಾರ್ಟ್‌ಮೆಂಟ್‌ಗಳನ್ನು ಕೈಗೆತ್ತಿಕೊಳ್ಳಲಾಗುವುದು. ಎಲ್‌ಡಿಎಫ್‌ನ ಚುನಾವಣಾ ಪ್ರಣಾಳಿಕೆ ಈ ಐದು ವರ್ಷಗಳಲ್ಲಿ ವಸತಿಹೀನತೆಯನ್ನು ತೊಡೆದು ಹಾಕುವ ಆಶ್ವಾಸನೆ ನೀಡಿತ್ತು.

ಮನೆಗಳಲ್ಲದೆ, ಈ 100 ದಿನಗಳ ಕಾರ್ಯಕ್ರಮದ ಭಾಗವಾಗಿ 13534 ಭೂಮಿ ಪಟ್ಟಾಗಳನ್ನು ಹಂಚಲಾಗಿದೆ. ಇದಕ್ಕಾಗಿ 14 ಜಿಲ್ಲಾ ಕೇಂದ್ರಗಳು ಮತ್ತು 77 ತಾಲೂಕು ಕೇಂದ್ರಗಳಲ್ಲಿ 'ಪಟ್ಟಯಾ ಮೇಳಾ' ನಡೆಸಲಾಗಿದೆ. ಇದು ಎಲ್ಲ ಭೂಹೀನ ಕುಟುಂಬಗಳಿಗೆ ಭೂಮಿಯನ್ನು ಲಭ್ಯಗೊಳಿಸುವ ಆಶ್ವಾಸನೆಯ ಭಾಗವಾಗಿದೆ.

ಸಪ್ಟಂಬರ್ 14ರಂದು ಮುಖ್ಯಮಂತ್ರಿಗಳು 92 ಹೊಸ ಶಾಲಾ ಕಟ್ಟಡಗಳು, 48 ಉಚ್ಚ ಮಾಧ್ಯಮ ಪ್ರಯೋಗಾಲಯಗಳು ಮತ್ತು ಮೂರು ಗ್ರಂಥಾಲಯಗಳನ್ನು ಉದ್ಘಾಟಿಸಿದರು. ಇದು ಕೇರಳ ಸ್ಥಳೀಯ ಆಡಳಿತ ಸಂಸ್ಥೆ (ಕೆಐಎಲ್‌ಎ) ಕೈಗೊಂಡಿರುವ ಪರಿಯೋಜನೆ.


ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿವಿಧ ಪರಿಯೋಜನೆಗಳನ್ನು ಪೂರ್ಣಗೊಳಿಸಿದೆ.

ಆಧುನಿಕ ತರಬೇತಿ ಸೌಲಭ್ಯಗಳಿಂದ ಸಜ್ಜಿತವಾಗಿರುವ ಮೂರು ಫುಟ್‌ಬಾಲ್ ಅಕಾಡೆಮಿಗಳಲ್ಲಿ ಎರಡು ಮಹಿಳೆಯರಿಗಾಗಿಯೇ ಮೀಸಲಾಗಿರುವಂತವುಗಳು ಎಂಬುದು ಗಮನಾರ್ಹ. ಈ ಸಂದರ್ಭದಲ್ಲಿ 40 ಹೊಸ ಫುಟ್‌ಬಾಲ್ ಮೈದಾನಗಳನ್ನು ತೆರೆಯುವ ಯೋಜನೆಯನ್ನು ಪ್ರಕಟಿಸಲಾಯಿತು.

ಈ ಕಾರ್ಯಕ್ರಮದ ಭಾಗವಾಗಿ ಪ್ರಕಟಿಸಿರುವ ಮತ್ತೊಂದು ಉಪಕ್ರಮ ಎಂದರೆ ಹಿರಿಯ ವಯಸ್ಸಿನವರಿಗೆ ಮತ್ತು ದೈಹಿಕ, ಮಾನಸಿಕ ವಿಕಲತೆಗಳಿರುವವರಿಗೆ ಸರಕಾರೀ ಸೇವೆಗಳನ್ನು ಅವರ ಮನೆ ಬಾಗಿಲಲ್ಲೇ ತಲುಪಿಸುವ 'ವತಿಪಾಡಿ ಸೇವನಂ'. ಈ ಪ್ರಾಜೆಕ್ಟಿನ ಮೊದಲ ಹಂತದಲ್ಲಿ ಜೀವನ ಪ್ರಮಾಣ ಪತ್ರ, ಪೆನ್ಶನ್, ಜೀವವುಳಿಸುವ ಔಷಧಿಗಳು ಮುಂತಾದವುಗಳನ್ನು 50 ಪಂಚಾಯ್ತುಗಳಲ್ಲಿ ಆಶಾ ಕಾರ್ಯಕರ್ತೆಯರು, ಕುಡುಂಬಶ್ರೀ ಸದಸ್ಯರು ಮತ್ತು 'ಸಾಮೂಹಿಕ ಸನ್ನದ ಸೇನಾ'ದ ಸ್ವಯಂಸೇವಕರು ತಲುಪಿಸುತ್ತಾರೆ. ಈ ಪಂಚಾಯ್ತುಗಳಲ್ಲಿ ಮೂರು ತಿಂಗಳ ಪ್ರಾಯೋಗಿಕ ಕ್ರಮದ ನಂತರ ಇದನ್ನು ಡಿಸೆಂಬರ್‌ನಲ್ಲಿ ಇಡೀ ರಾಜ್ಯಕ್ಕೆ ವಿಸ್ತರಿಸುವ ಗುರಿಯನ್ನು ರಾಜ್ಯ ಸರಕಾರ ಇಟ್ಟುಕೊಂಡಿದೆ.

ನಿಜವಾದ ಹಣದುಬ್ಬರವನ್ನು ಲೆಕ್ಕ ಹಾಕದ ಸೂಚ್ಯಂಕಗಳು

ಲಾಕ್‌ಡೌನ್‌ನಿಂದಾಗಿ ಅರ್ಥವ್ಯವಸ್ಥೆಯು ಅನುಭವಿಸಿದ ಆಘಾತದ ದುಷ್ಪರಿಣಾಮದೊಂದಿಗೆ ಬೆಲೆಯೇರಿಕೆಗಳ ದುಷ್ಪರಿಣಾಮವನ್ನೂ ಜನಗಳುಲೆದುರಿಸಬೇಕಾಗಿದೆ. ವಾಸ್ತವವಾಗಿ ಈ ಬೆಲೆಯೇರಿಕೆಯ ಹೊರೆ ಸರಕಾರದ ಅಧಿಕೃತ ಸೂಚ್ಯಾಂಕಗಳು ತೋರಿಸುವುದಕ್ಕಿಂತಲೂ ಹೆಚ್ಚಾಗಿದೆ. ಏಕೆಂದರೆ, ಹಣದುಬ್ಬರ ದರವು ಬೆಲೆ ಏರಿಕೆಯನ್ನು ನಿಖರವಾಗಿ ಅಳೆಯುತ್ತಿಲ್ಲ. ಲಾಕ್‌ಡೌನ್ ಜನಗಳ ಆದಾಯಗಳನ್ನು ಹಿಂಡಿರುವುದರಿಂದ ಅವರ ಜೀವನ ವೆಚ್ಚದ ಮಾದರಿಯೂ ಬದಲಾಗಿದೆ. ಇದಕ್ಕೆ ಅನುಗುಣವಾಗಿ ಬೆಲೆ ಸೂಚ್ಯಂಕದ ಏರಿಳಿಕೆಗಳನ್ನು ಲೆಕ್ಕಹಾಕುವ ವಿಧಾನವನ್ನು ಮಾರ್ಪಡಿಸುವ ಅಗತ್ಯವಿದೆ. ಶ್ರೀಮಂತರಲ್ಲದವರು ಎರಡು ರೀತಿಯ ಹೊಡೆತ ತಿಂದಿದ್ದಾರೆ – ತಮ್ಮ ಆದಾಯಗಳ ಇಳಿಕೆಯಿಂದಾದ ನಷ್ಟ ಮತ್ತು ಸರಕುಗಳ ಬೆಲೆ ಏರಿಕೆಯಿಂದಾಗಿ ಅನುಭವಿಸಿದ ಇನ್ನೂ ಹೆಚ್ಚಿನ ನಷ್ಟ. ಈ ವಿದ್ಯಮಾನವು ಒಟ್ಟು ಬೇಡಿಕೆಯನ್ನು ಮೊಟಕುಗೊಳಿಸುತ್ತದೆ.



ಪ್ರೊ. ಆರ್. ಅರುಣ ಕುಮಾರ್
ಅನು: ಕೆ.ಎಂ. ನಾಗರಾಜ್

ದಿನ-ನಿತ್ಯದ ಬಳಕೆಯ ವಸ್ತುಗಳ ಬೆಲೆಗಳು ಕಳೆದ ನಾಲ್ಕಾರು ತಿಂಗಳುಗಳಿಂದಲೂ ಸತತವಾಗಿ ಏರುತ್ತಿವೆ. ಬೆಲೆ ಏರಿಕೆಯ ಈ ವಿದ್ಯಮಾನವನ್ನು ತಾಂತ್ರಿಕ ಪರಿಭಾಷೆಯಲ್ಲಿ ಹಣದುಬ್ಬರ ಎನ್ನುತ್ತಾರೆ. ಬೆಲೆಗಳ ಏರಿಕೆಯ ಮಟ್ಟವನ್ನು ಎರಡು ಸ್ತರಗಳಲ್ಲಿ – ಸಗಟು ವ್ಯಾಪಾರದ ಮತ್ತು ಚಿಲ್ಲರೆ ವ್ಯಾಪಾರದ ಮಟ್ಟದಲ್ಲಿ – ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತದೆ. ಸರಕು ಸರಂಜಾಮುಗಳ ಉತ್ಪಾದಕರು ಮಾರುವ ಬೆಲೆಗಳ ಏರಿಳಿಕೆಗಳನ್ನು ಪ್ರತಿವಾರವೂ ಪ್ರಕಟವಾಗುವ ಸಗಟು ಬೆಲೆ ಸೂಚ್ಯಂಕವು ತಿಳಿಸುತ್ತದೆ. ಈ ವಸ್ತುಗಳನ್ನು ಚಿಲ್ಲರೆಯಾಗಿ ಮಾರುವ ಬೆಲೆಗಳ ಏರಿಳಿಕೆಗಳನ್ನು ಪ್ರತಿ ತಿಂಗಳೂ ಪ್ರಕಟವಾಗುವ ಗ್ರಾಹಕ ಬೆಲೆ ಸೂಚ್ಯಂಕವು ತಿಳಿಸುತ್ತದೆ. ಸಗಟು ಬೆಲೆ ಸೂಚ್ಯಂಕವು ಆಗಸ್ಟ್ ತಿಂಗಳಲ್ಲಿ ಶೇ.11.39ರಷ್ಟು ಏರಿದೆ. ಎರಡಂಕಿಯಲ್ಲಿ ಏರಿಕೆಯಾಗುತ್ತಿರುವ ಈ ಹಣದುಬ್ಬರವು ಕಳೆದ ಐದು ತಿಂಗಳುಗಳಿಂದಲೂ ಸತತವಾಗಿ ಮುಂದುವರಿಯುತ್ತಿದೆ. ಆಹಾರ ವಸ್ತುಗಳ ಬೆಲೆಗಳು ಇಳಿಮುಖವಾಗಿದ್ದರೂ ಸಹ, ಸಗಟು ಬೆಲೆಗಳ ಸೂಚ್ಯಂಕದ ಏರಿಕೆಯು ಕಳವಳಕಾರಿಯಾಗಿದೆ. ಗ್ರಾಹಕ ಬೆಲೆ ಸೂಚ್ಯಂಕವು ಜೂನ್ ನಲ್ಲಿ 6% ಗಡಿಯನ್ನು ದಾಟಿದೆ. ಈ ಮಟ್ಟದ ಏರಿಕೆಯು ಭಾರತೀಯ ರಿಸರ್ವ್ ಬ್ಯಾಂಕ್‌ನ ನಿರೀಕ್ಷೆಗಿಂತಲೂ ಹೆಚ್ಚು ಕಳವಳಕಾರಿಯಾಗಿದೆ. ಏಕೆಂದರೆ, ಒಟ್ಟು ಬೇಡಿಕೆಯು ಇಳಿಕೆಯಾಗಿರುವ, ನಿರುದ್ಯೋಗ ಹೆಚ್ಚುತ್ತಿರುವ, ಬಹು ದೊಡ್ಡ ಸಂಖ್ಯೆಯ ಜನರು ತಮ್ಮ ಆದಾಯವನ್ನು ಕಳೆದುಕೊಂಡಿರುವ ಮತ್ತು ಬಡತನ ಉಲ್ಬಣಗೊಂಡಿರುವ ಸಮಯದಲ್ಲಿ ಹಣದುಬ್ಬರ ಈ ರೀತಿಯಲ್ಲಿ ಏರುತ್ತಿದೆ. ಆದ್ದರಿಂದ, ಹಣದುಬ್ಬರವು ಈ ರೀತಿಯಲ್ಲಿ ಏರಲು ಕಾರಣವೇನು? ಮತ್ತು, ಈ ಅಧಿಕೃತ ಸೂಚ್ಯಂಕಗಳ ದತ್ತಾಂಶವು ನೈಜ ಚಿತ್ರವನ್ನು ತೋರಿಸುತ್ತಿದೆಯೇ?

ದತ್ತಾಂಶಗಳಿಗೆ ಸಂಬಂಧಿಸಿದ ಸಮಸ್ಯೆಗಳು

2020ರ ಏಪ್ರಿಲ್ ಮತ್ತು ಮೇ ಈ ಎರಡೂ ತಿಂಗಳುಗಳಲ್ಲಿ ಕೊರೊನಾ ಸಂಬಂಧವಾಗಿ ಹೇರಿದ ಒಂದು ಕಠಿಣ ಲಾಕ್‌ಡೌನ್‌ನಿಂದಾಗಿ ಸರಕು ಸಾಮಗ್ರಿಗಳ ಉತ್ಪಾದನೆಗೆ ಸಂಬಂಧಿಸಿದ ದತ್ತಾಂಶ ಮತ್ತು ಅವುಗಳ ಚಿಲ್ಲರೆ ಮಾರಾಟದ ಬೆಲೆಗಳ ದತ್ತಾಂಶವನ್ನು ಸಂಗ್ರಹಿಸಲು ಸಾಧ್ಯವಾಗಿರಲಿಲ್ಲ. 2020ರ ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಈ ನಿರ್ಬಂಧಗಳನ್ನು ನಿಧಾನವಾಗಿ ಸಡಿಲಿಸಲಾಗಿತ್ತಾದರೂ, ವ್ಯಾಪಾರ-ವಹಿವಾಟುಗಳು ಎಂದಿನ ಮಟ್ಟಕ್ಕೆ ಹಿಂತಿರುಗಿರಲಿಲ್ಲ. ಆದ್ದರಿಂದ, 2021ರ ಏಪ್ರಿಲ್ ನಿಂದ ಜುಲೈ ತಿಂಗಳುಗಳ ಬೆಲೆಗಳ ದತ್ತಾಂಶವನ್ನು 2020ರ ಅದೇ ತಿಂಗಳುಗಳೊಂದಿಗೆ ಹೋಲಿಸಲಾಗದು. ಹಾಗಾಗಿ, 2021ರ ಏಪ್ರಿಲ್ ನಿಂದ ಜುಲೈ ತಿಂಗಳುಗಳ ಅಧಿಕೃತ ಹಣದುಬ್ಬರದ ಅಂಕಿ-ಅಂಶಗಳು ನೈಜ ಪರಿಸ್ಥಿತಿಯನ್ನು ಪ್ರತಿಬಿಂಬಿಸುವುದಿಲ್ಲ.

ಅದೇನೇ ಇರಲಿ, ಹಣದುಬ್ಬರವನ್ನು ಪ್ರತಿನಿಧಿಸುವ ಈ ಒಂದು ಏಕ ಸಂಖ್ಯೆಯು ವಿವಿಧ ಸರಕುಗಳು ಮತ್ತು ಸೇವೆಗಳನ್ನು ಒಟ್ಟುಗೂಡಿಸಿ ಲೆಕ್ಕ ಹಾಕಿ ತೆಗೆದ ಒಂದು ಪ್ರಾತಿನಿಧಿಕ ಸಂಖ್ಯೆಯಾಗಿರುತ್ತದೆ. ವಾಸ್ತವವಾಗಿ, ವಿವಿಧ ಪ್ರಕಾರದ ಬಳಕೆಯ ವಸ್ತುಗಳ ಬೆಲೆ ಏರಿಕೆಯು ಭಿನ್ನ ಭಿನ್ನವಾಗಿಯೇ ಇರುತ್ತದೆ. ಆದ್ದರಿಂದ, ಒಟ್ಟಾರೆಯಾಗಿ ಈ ಸರಕುಗಳು ಮತ್ತು ಸೇವೆಗಳಿಗೆ ಒಂದೊಂದಕ್ಕೂ ಪ್ರತ್ಯೇಕವಾಗಿ ಈ ಸೂಚ್ಯಂಕದಲ್ಲಿ ಇಂತಿಷ್ಟು ತೂಕ ಎಂದು ನಿಗದಿಪಡಿಸಿ ಅವೆಲ್ಲವನ್ನೂ ಒಟ್ಟುಗೂಡಿಸಿ ಲೆಕ್ಕ ಹಾಕುವ ಮೂಲಕ ಒಂದು ಸಂಖ್ಯೆಯನ್ನು ಪಡೆಯಲಾಗುತ್ತದೆ. ಸಗಟು ಸೂಚ್ಯಂಕವನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ, ವಿವಿಧ ಸರಕುಗಳ ಬೆಲೆಗಳನ್ನು ಅವುಗಳ ಉತ್ಪಾದನೆಯ ಸಮಯದಲ್ಲಿ ಪ್ರತಿಯೊಂದಕ್ಕೂ ನಿಗದಿಪಡಿಸಿದ ತೂಕಕ್ಕೆ ತಕ್ಕಂತೆ ಲೆಕ್ಕ ಹಾಕಲಾಗುತ್ತದೆ. ಆದರೆ, ಬಳಕೆದಾರ ಸೂಚ್ಯಂಕವನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ, ಕೆಲವು ನಿರ್ದಿಷ್ಟ ವಸ್ತುಗಳನ್ನೊಳಗೊಂಡ ಒಂದು ಬುಟ್ಟಿಯ ಬೆಲೆಯನ್ನು ಪರಿಗಣಿಸಲಾಗುತ್ತದೆ. ಆದರೆ, ಜನರ ಬಳಕೆಯ ಬುಟ್ಟಿಯ ವಸ್ತುಗಳು ಭಿನ್ನ ಭಿನ್ನವಾಗಿರುತ್ತವೆ. ಬಡವರ ಬಳಕೆಯ ಬುಟ್ಟಿಯು ಮಧ್ಯಮ ವರ್ಗದವರಿಗಿಂತ ಹೆಚ್ಚು ಭಿನ್ನವಾಗಿರುತ್ತದೆ. ಶ್ರೀಮಂತರ ಬಳಕೆಯ ಬುಟ್ಟಿಯು ಮಧ್ಯಮ ವರ್ಗಗಳು ಮತ್ತು ಬಡವರಿಗಿಂತ ಇನ್ನೂ ಹೆಚ್ಚು ಭಿನ್ನವಾಗಿರುತ್ತದೆ. ಆದ್ದರಿಂದ, ಈ ಪ್ರತಿಯೊಂದು ವರ್ಗದ ಸೂಚ್ಯಂಕವು ವಿಭಿನ್ನವಾಗಿರುತ್ತದೆ. ಹಾಗಾಗಿ, ಈ ಎಲ್ಲಾ ವರ್ಗಗಳ ಬುಟ್ಟಿಯ ಸಂಯೋಜಿತ ಸೂಚ್ಯಂಕದ ಒಂದು ಸರಾಸರಿಯನ್ನು ಲೆಕ್ಕ ಹಾಕುವ ಅಗತ್ಯವಿದೆ. ಆದ್ದರಿಂದ, ಒಂದು ಅರ್ಥದಲ್ಲಿ, ಪ್ರಸಕ್ತ ಸೂಚ್ಯಂಕವು ಈ ಯಾವುದೇ ವರ್ಗವನ್ನೂ ಪ್ರತಿನಿಧಿಸುವುದಿಲ್ಲ.

2020ರ ಲಾಕ್‌ಡೌನ್ ಸಮಯದಲ್ಲಿ ಮತ್ತು ಅದನ್ನು ಸಡಿಲಗೊಳಿಸಿದ (ಅನ್‌ಲಾಕ್) ಅವಧಿಯಲ್ಲಿ, ಜನರು ಬಹುತೇಕ ಕೆಲವೇ ಕೆಲವು ಅಗತ್ಯ ವಸ್ತುಗಳನ್ನು ಬಳಸಿದರು. ಈ ಅಂಶವನ್ನು ರಿಸರ್ವ್ ಬ್ಯಾಂಕಿನ ಅಂಕಿ ಅಂಶಗಳು ಪುಷ್ಟೀಕರಿಸುತ್ತವೆ. ಗ್ರಾಹಕರ ವಿಶ್ವಾಸ ಸೂಚ್ಯಂಕವು ಜನವರಿ 2020ರಲ್ಲಿ 105 ರಿಂದ ಜನವರಿ 2021ರ ವೇಳೆಗೆ 55.5ಕ್ಕೆ ತೀವ್ರವಾಗಿ ಕುಸಿದಿದೆ ಎಂದು ಆರ್‌ಬಿಐ ಅಂಕಿ ಅಂಶಗಳು ಹೇಳುತ್ತವೆ. ಅಂದರೆ, ಅರ್ಥವ್ಯವಸ್ಥೆಯು ಬೆಳೆಯುತ್ತಿದೆ ಎಂದು ಅಧಿಕೃತವಾಗಿ ಹೇಳುತ್ತಿದ್ದ ಅವಧಿಯಲ್ಲಿ, ಗ್ರಾಹಕರ ವಿಶ್ವಾಸವು ಚೇತರಿಸಿಕೊಂಡಿರಲಿಲ್ಲ. ಬದಲಿಗೆ, ಈ ಅವಧಿಯಲ್ಲಿ ಉದ್ಯೋಗಗಳು ನಾಶವಾಗುತ್ತಿದ್ದವು ಮತ್ತು ಆದಾಯಗಳು ಇಳಿಕೆಯಾಗುತ್ತಿದ್ದವು. ಒಂದು ವರದಿಯ ಪ್ರಕಾರ, ಈ ಅವಧಿಯಲ್ಲಿ 230 ಮಿಲಿಯನ್ ಜನರು ಬಡತನ ರೇಖೆಯ ಕೆಳಗೆ ತಳ್ಳಲ್ಪಟ್ಟರು. ಈ ಎಲ್ಲ ಅಂಶಗಳೂ, ವಿವಿಧ ವರ್ಗಗಳ ಜನರ ಬಳಕೆಯ ಬುಟ್ಟಿ (ಅಂದರೆ, ಅದು ಒಳಗೊಂಡ ವಸ್ತುಗಳು) ಬದಲಾಗಿದೆ ಎಂಬುದನ್ನು ಸೂಚಿಸುತ್ತವೆ. ಶ್ರೀಮಂತರ ಬಳಕೆಯ ಮಾದರಿಯಲ್ಲಿ ಬದಲಾವಣೆ ಅಲ್ಪವೇ ಇದ್ದರೂ ಸಹ, ಬಡವರು ಮತ್ತು ಮಧ್ಯಮ ವರ್ಗದವರು, ಅದರಲ್ಲೂ ವಿಶೇಷವಾಗಿ ಉದ್ಯೋಗ ಕಳೆದುಕೊಂಡವರು ಮತ್ತು ಆದಾಯದ ಕಡಿತಕ್ಕೊಳಗಾದವರು ತಮ್ಮ ಬಳಕೆಯನ್ನು ಬಹಳಷ್ಟು ಕಡಿತಗೊಳಿಸಿದರು. ಹೀಗಾಗಿ, ಗ್ರಾಹಕ ಬಳಕೆ ಸೂಚ್ಯಂಕವು ಒಳಗೊಂಡ ಹಲವು ವಸ್ತುಗಳಿಗೆ ನಿಗದಿಪಡಿಸಿದ ತೂಕ ಸಂಬಂಧಗಳು ಬದಲಾದವು. ಹಾಗಾಗಿ, ಹಣದುಬ್ಬರವನ್ನು ಮರು ಲೆಕ್ಕ ಹಾಕುವ ಅಗತ್ಯವಿತ್ತು, ಆದರೆ ಅದನ್ನು ಮಾಡಲಿಲ್ಲ. ಕೋವಿಡ್-19 ಎರಡನೇ ಅಲೆಯ ಪರಿಣಾಮವಾಗಿ ಗ್ರಾಹಕರ ವಿಶ್ವಾಸವು ಜುಲೈ 2021 ರಲ್ಲಿ 48.6 ಕ್ಕೆ ಇಳಿದಿದೆ.

ಮೇಲಾಗಿ, ಈ ಬಳಕೆ ಬುಟ್ಟಿಯು ಒಳಗೊಂಡಿರುವ ಅಂಶಗಳಲ್ಲಿ ಸೇವೆಗಳ ಆಯಾಮವನ್ನು, ಹಣದುಬ್ಬರ ದತ್ತಾಂಶದಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿ ಪರಿಗಣಿಸಲಾಗಿದೆ. ಉತ್ಪಾದನೆಯಲ್ಲಿ ಜಿಡಿಪಿಯ ಸುಮಾರು 55% ಭಾಗ ಇರುವ ಸೇವೆಗಳು ಸಗಟು ಮಾರಾಟ ಬೆಲೆ ಸೂಚ್ಯಂಕದಲ್ಲಿ ಯಾವುದೇ ಪ್ರಾತಿನಿಧ್ಯವನ್ನು ಹೊಂದಿಲ್ಲ. ಗ್ರಾಹಕ ಬೆಲೆ ಸೂಚ್ಯಂಕದಲ್ಲಿ ಸೇವೆಗಳು ಸುಮಾರು 40% ಪ್ರಾತಿನಿಧ್ಯ ಹೊಂದಿವೆ. ಸಾಂಕ್ರಾಮಿಕದ ಅವಧಿಯಲ್ಲಿ ಆರೋಗ್ಯ ಸಂಬಂಧವಾಗಿ ಜನರು ಲೆಕ್ಕವಿಲ್ಲದಷ್ಟು ಹಣ ಖರ್ಚುಮಾಡಿದ್ದಾರೆ. ಈ ಅಂಶವನ್ನು ಹಣದುಬ್ಬರದ ಲೆಕ್ಕಾಚಾರದಲ್ಲಿ ಪರಿಗಣಿಸಲಾಗಿದೆಯೇ? ಅದೇ ರೀತಿಯಲ್ಲಿ, ಸಾಂಕ್ರಾಮಿಕದ ಅವಧಿಯಲ್ಲಿ, ಮೊಬೈಲ್ ಫೋನ್‌ಗಳು, ಲ್ಯಾಪ್ ಟಾಪ್‌ಗಳು ಮತ್ತು ವೈ-ಫೈಗಳು ಒಂದು ಅನಿವಾರ್ಯ ಅಗತ್ಯವಾಗಿ ಶೈಕ್ಷಣಿಕ ಉದ್ದೇಶಗಳಿಗೆ ಬಳಕೆಯಾದುದರಿಂದ ಶಿಕ್ಷಣದ ಬಾಬ್ತು ಜನರು ಅಪಾರ ಹಣ ಖರ್ಚು ಮಾಡಿದ್ದಾರೆ. ಅನೇಕ ರೀತಿಯ ಇತರ ಸೇವೆಗಳನ್ನು ಈ ಅವಧಿಯಲ್ಲಿ ಬಳಸಿಕೊಳ್ಳಲಾಗಿಲ್ಲ. ಉದಾಹರಣೆಗೆ, ಮನೆಯ ಹೊರಗೆ ಊಟ-ತಿಂಡಿಗಾಗಿ ಮಾಡುವ ವೆಚ್ಚಗಳು ಮತ್ತು ಪ್ರವಾಸ-ಪ್ರಯಾಣದ ವೆಚ್ಚಗಳನ್ನು ಹಣದುಬ್ಬರದ ಲೆಕ್ಕಾಚಾರದಿಂದ ಹೊರಗಿಡಬೇಕಿತ್ತು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಪದೇ ಪದೇ ಹೇರಿದ ಲಾಕ್‌ಡೌನ್‌ಗಳ ಆಘಾತವು ದತ್ತಾಂಶ ಸಂಗ್ರಹಣೆಯನ್ನು ಕಷ್ಟಕರಗೊಳಿಸಿತು. ಆದ್ದರಿಂದ, ಗ್ರಾಹಕ ಬೆಲೆ ಸೂಚ್ಯಂಕವನ್ನು ಲೆಕ್ಕಹಾಕುವಾಗ ಬಳಕೆಯ ಬುಟ್ಟಿಯಲ್ಲಿ ಕಂಡು ಬಂದ ಬದಲಾವಣೆಗಳನ್ನು ಪರಿಗಣಿಸಬೇಕಿತ್ತು.

ಹಣದುಬ್ಬರವು ಗ್ರಾಹಕರ ಜೇಬುಗಳಿಗೆ ಕತ್ತರಿ ಹಾಕುತ್ತದೆ. ಹಣದುಬ್ಬರವು ಶೇ.10ರ ಪ್ರಮಾಣದಲ್ಲಿದ್ದಾಗ, ಒಬ್ಬ ವ್ಯಕ್ತಿಯು, ಹಿಂದಿನ ವರ್ಷಕ್ಕೆ ಹೋಲಿಸಿದರೆ ಅಷ್ಟೇ ಪ್ರಮಾಣದ ಸರಕು-ಸೇವೆಗಳನ್ನು ಖರೀದಿಸಲು 10% ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ವ್ಯಕ್ತಿಯ ಆದಾಯವೂ 10% ನಷ್ಟು ಏರಿಕೆಯಾದರೆ ಮಾತ್ರ ಈ ಹಣದುಬ್ಬರದಿಂದ ತೊಂದರೆ ಇಲ್ಲ ಅಥವಾ ಅದು ಮುಖ್ಯವಾಗುವುದಿಲ್ಲ. ಆದರೆ, ವ್ಯಕ್ತಿಯ ಆದಾಯದ ಹೆಚ್ಚಳವು ಒಂದು ವೇಳೆ 10% ಗಿಂತ ಕಡಿಮೆ ಪ್ರಮಾಣದಲ್ಲಿದ್ದರೆ, ಅವನ ಬಜೆಟ್ ಮೇಲೆ ಅದು ಪ್ರತಿಕೂಲ ಪರಿಣಾಮ ಬೀರುತ್ತದೆ. ಹಾಗಾಗಿ, ಮಧ್ಯಮ ವರ್ಗದವರ ಅಗತ್ಯ ವಸ್ತುಗಳ ಬಳಕೆ ಮತ್ತು ಅವರ ಉಳಿತಾಯ ಎರಡೂ ಕಡಿಮೆಯಾಗುತ್ತವೆ. ಆದರೆ, ಉಳಿತಾಯ ಮಾಡಲಾಗದ ಬಡವರು, ತಮ್ಮ ಅಗತ್ಯದ ಬಳಕೆಯನ್ನೂ ಕಡಿಮೆ ಮಾಡಿಕೊಳ್ಳಬೇಕಾಗುತ್ತದೆ.

ಭಾರತದಲ್ಲಿ ಶೇ.94 ರಷ್ಟು ದುಡಿಯುವ ಜನರು ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿದ್ದು, ಅವರ ಆದಾಯಗಳು ಕೆಳ ಮಟ್ಟದಲ್ಲಿರುವುದರಿಂದಾಗಿ ಅವರ ಉಳಿತಾಯವು ಶೂನ್ಯವೇ. ಅಸಂಘಟಿತ ವಲಯದ ವ್ಯಾಖ್ಯಾನವೇ, ಬೆಲೆಗಳು ಹೆಚ್ಚುತ್ತಿದ್ದರೂ ಸಹ ಅಲ್ಲಿ ದುಡಿಯುವವರು ಹೆಚ್ಚಿನ ಆದಾಯಕ್ಕಾಗಿ ಚೌಕಾಶಿ ಮಾಡಲು ಸಾಧ್ಯವಿಲ್ಲ ಎಂಬುದನ್ನು ತಿಳಿಸುತ್ತದೆ. ಆದ್ದರಿಂದ, ಅವರು ಹಣದುಬ್ಬರದ ಹೊಡೆತಕ್ಕೆ ಒಳಗಾಗುತ್ತಾರೆ. ಅದೂ ಅಲ್ಲದೆ, ಲಾಕ್‌ಡೌನ್‌ಗಳಿಂದಾಗಿ, ಅಸಂಘಟಿತ ಮತ್ತು ಸಂಘಟಿತ ವಲಯಗಳಲ್ಲಿ ಕೆಲಸ ಮಾಡುವ ಅನೇಕರ ವೇತನಗಳು ಇಳಿದಿವೆ. ಇದು ಅವರ ಕುಟುಂಬದ ಬಜೆಟ್ ಮೇಲೆ ಪರಿಣಾಮ ಬೀರಿದೆ.

ಪರಿಣಾಮವಾಗಿ, ಅಗತ್ಯವಲ್ಲದ ವಸ್ತುಗಳಿಗಷ್ಟೇ ಅಲ್ಲ, ಅಗತ್ಯ ವಸ್ತುಗಳಿಗೂ ಸಹ ಬೇಡಿಕೆ ಇಳಿದಿದೆ. ಈ ಅಂಶವು, ಒಂದು ವಿಷವರ್ತುಲದ ರೀತಿಯಲ್ಲಿ, ಆರ್ಥಿಕ ಚೇತರಿಕೆಯನ್ನು ಮತ್ತು ಉದ್ಯೋಗ ಸೃಷ್ಟಿಯನ್ನು ನಿಧಾನಗೊಳಿಸಿದೆ. ಅಷ್ಟೇ ಅಲ್ಲದೆ, ಸರ್ಕಾರದ ಆದಾಯವೂ ಇಳಿದಿದೆ. ಅದರಿಂದಾಗಿ ಬಜೆಟ್ ಕೊರತೆ ಹೆಚ್ಚಿದೆ. ಹಾಗಾಗಿ, ಬಜೆಟ್‌ನಲ್ಲಿ ಮಾಡಿದ್ದ ಅಂದಾಜು ವೆಚ್ಚಗಳನ್ನು, ಅದರಲ್ಲೂ ವಿಶೇಷವಾಗಿ ಸಾಮಾಜಿಕ ವಲಯಕ್ಕೆ ಸಂಬಂಧಿಸಿ ನಿಗದಿಪಡಿಸಿದ್ದ ವೆಚ್ಚಗಳನ್ನು, ಕಡಿತಗೊಳಿಸುವ ಒತ್ತಡ ಸರ್ಕಾರದ ಮೇಲೆ ಬೀಳುತ್ತದೆ. ಈ ವಿದ್ಯಮಾನವು ಬಡತನವನ್ನು ಉಲ್ಬಣಗೊಳಿಸುತ್ತದೆ ಮತ್ತು ಬೇಡಿಕೆಯನ್ನು ಮತ್ತಷ್ಟು ತಗ್ಗಿಸುತ್ತದೆ. ಹೀಗಾಗಿ, ಬೇಡಿಕೆ ತಗ್ಗಿದ ಸಮಯದಲ್ಲಿ ಮತ್ತು ಅದರ ಜತೆಯಲ್ಲಿ ಆದಾಯಗಳೂ ಇಳಿಕೆಯಾದ ಸಮಯದಲ್ಲಿ, ಹಣದುಬ್ಬರವು ಅರ್ಥವ್ಯವಸ್ಥೆಯನ್ನು ನಿಧಾನಗೊಳಿಸುವ ಒಂದು ವಿಷವರ್ತುಲ ಉಂಟಾಗಲು ಕಾರಣವಾಗುತ್ತದೆ. ಇದು, ಬಡವರು ಮತ್ತು ನಿರುದ್ಯೋಗಿಗಳ ಜೀವನವನ್ನು ಹೆಚ್ಚು ಹೆಚ್ಚು ಯಾತನಾಮಯವಾಗಿಸುತ್ತದೆ.

ಹಣದುಬ್ಬರಕ್ಕೆ ಮೂಲವಾದ ಅಂಶಗಳು

ಸಂಪನ್ಮೂಲಗಳನ್ನು ಸಂಗ್ರಹಿಸುವ ಒಂದು ಸಾಧನವಾಗಿ ಸರ್ಕಾರವು ಇಂಧನದ (ಪೆಟ್ರೋಲಿಯಂ ಉತ್ಪನ್ನಗಳ) ಮೇಲಿನ ತೆರಿಗೆಗಳನ್ನು ಹೆಚ್ಚಿಸಿದೆ. ಎಲ್ಲಾ ರೀತಿಯ ಉತ್ಪಾದನೆಗಳಿಗೂ ಇಂಧನ-ಶಕ್ತಿಯನ್ನು ಬಳಸುವುದರಿಂದ, ಎಲ್ಲಾ ಸರಕುಗಳ ಮತ್ತು ಸೇವೆಗಳ ಬೆಲೆಗಳು ಏರುತ್ತವೆ ಮತ್ತು ಹಣದುಬ್ಬರ ಹೆಚ್ಚುವಲ್ಲಿ ಪರಿಣಮಿಸುತ್ತವೆ. ಮೇಲಾಗಿ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಗಳು ಪರೋಕ್ಷ ತೆರಿಗೆಗಳಾಗಿರುವ ಕಾರಣದಿಂದಾಗಿ, ಈ ತೆರಿಗೆಗಳ ಹೆಚ್ಚಳವು ಒಂದು ತಿರೋಗಾಮಿ ಕ್ರಮವಾಗಿದೆ. ಈ ಪರೋಕ್ಷ ತೆರಿಗೆಗಳಿಂದಾಗಿ ಬಡವರಿಗೆ ಅತಿ ಹೆಚ್ಚು ಪೆಟ್ಟು ಬೀಳುತ್ತದೆ. ಜೊತೆಗೆ, ಹಣದುಬ್ಬರವನ್ನು ನಿಯಂತ್ರಿಸುವ ಹೊಣೆ ಹೊತ್ತ ಆರ್‌ಬಿಐನ ಜವಾಬ್ದಾರಿಯನ್ನೂ ಕಷ್ಟಕರವಾಗಿಸುತ್ತದೆ.

ಲಾಕ್‌ಡೌನ್‌ಗಳು ಸರಕು-ಸೇವೆಗಳ ಪೂರೈಕೆಗೆ ಅಡ್ಡಿಯಾದವು ಮತ್ತು ಅವುಗಳ ಅಭಾವಕ್ಕೂ ಮತ್ತು ಬೆಲೆ ಏರಿಕೆಗೂ ಕಾರಣವಾದವು. ಔಷಧಿಗಳು ಮತ್ತು ವೈದ್ಯಕೀಯ ಉಪಕರಣಗಳ ಬೆಲೆಗಳಂತೂ ಹೇಳತೀರದಷ್ಟು ಅಸಾಧಾರಣವಾಗಿ ಏರಿಕೆಯಾದವು. ದಿನ ನಿತ್ಯದ ಬಳಕೆಯ ವಸ್ತುಗಳ ಬೆಲೆಗಳೂ ಸಹ ಏರಿದವು. ನಗರ ಮಾರುಕಟ್ಟೆಗಳನ್ನು ತಲುಪಲು ಸಾಧ್ಯವಾಗದ ಕಾರಣ, ಹಣ್ಣು ಮತ್ತು ತರಕಾರಿ ಬೆಲೆಗಳು ಏರಿದವು. ಅವುಗಳ ಬೆಲೆಗಳು ಗ್ರಾಮೀಣ ಪ್ರದೇಶಗಳಲ್ಲಿ ಕುಸಿಯುತ್ತಿದ್ದಾಗ, ನಗರ ಪ್ರದೇಶಗಳಲ್ಲಿ ಅವು ಯದ್ವಾ-ತದ್ವಾ ಏರಿದವು. ಅಸಂಘಟಿತ ವಲಯದಿಂದ ಪೈಪೋಟಿ ಮಾರಾಟ ಎದುರಾಗದ ಸನ್ನಿವೇಶದಲ್ಲಿ ದೊಡ್ಡ ದೊಡ್ಡ ಉದ್ಯಮಗಳು ಬೆಲೆಗಳನ್ನು ಹೆಚ್ಚಿಸಿದವು. ತಮ್ಮ ಕೆಲಸಗಾರರಿಗೆ ಅತಿ ಕಡಿಮೆ ಸಂಭಾವನೆ ಕೊಡುತ್ತಿದ್ದುದರ ಹೊರತಾಗಿಯೂ, ಈ ದೊಡ್ಡ ದೊಡ್ಡ ಉದ್ದಿಮೆಗಳು ಮಾರಾಟದ ಬೆಲೆಗಳನ್ನು ಏರಿಸಿದವು. ಪರಿಣಾಮವಾಗಿ, ಕಾರ್ಪೊರೇಟ್ ವಲಯದ ಲಾಭವು ತೀವ್ರವಾಗಿ ಏರಿದೆ.

ಅಂತರರಾಷ್ಟ್ರೀಯ ವಿದ್ಯಮಾನಗಳು ಕೆಲವು ಸರಕುಗಳ ಬೆಲೆಗಳು ಏರುವಲ್ಲಿಯೂ ಪರಿಣಮಿಸಿವೆ. ಪ್ರಮುಖ ಅರ್ಥವ್ಯವಸ್ಥೆಗಳ ಪೈಕಿ ಹೆಚ್ಚಿನವು ಚೇತರಿಸಿಕೊಂಡಿವೆ. ಕಚ್ಚಾ ಸಾಮಗ್ರಿಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಆದರೆ, ವಾಹನಗಳಿಗೆ ಬಳಸುವ ಇಲೆಕ್ಟ್ರಾನಿಕ್ ಚಿಪ್‌ನಂತಹ ಕೆಲವು ಸಾಮಗ್ರಿಗಳ ಪೂರೈಕೆಯಲ್ಲಿ ಅಡಚಣೆ ಉಂಟಾಗಿದೆ. ಲೋಹಗಳಂತಹ ಕೆಲವು ಸರಕುಗಳ ಬೆಲೆಗಳು ಏರಿವೆ. ಆದ್ದರಿಂದ, ಲಾಗುವಾಡುಗಳ ಬೆಲೆ ಹೆಚ್ಚಳವು ಬೆಲೆ ಏರಿಕೆಯ ಮೂಲವೆಂದು ಉದ್ದಿಮೆಗಳು ಹೇಳುತ್ತವೆ. ರೂಪಾಯಿ ದುರ್ಬಲಗೊಂಡಿರುವುದೂ ಸಹ ಹಣದುಬ್ಬರವನ್ನೂ ಹೆಚ್ಚಿಸಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಲಾಕ್‌ಡೌನ್‌ನಿಂದಾಗಿ ಅರ್ಥವ್ಯವಸ್ಥೆಯು ಅನುಭವಿಸಿದ ಒಂದು ಆಘಾತದ ನಂತರದ ಪ್ರಸ್ತುತ ಅಧಿಕೃತ ಹಣದುಬ್ಬರ ದರವು ಬೆಲೆ ಏರಿಕೆಯನ್ನು ನಿಖರವಾಗಿ ಅಳೆದಿಲ್ಲ. ಬೆಲೆ ಸೂಚ್ಯಂಕದ ಏರಿಳಿಕೆಗಳನ್ನು ಲೆಕ್ಕಹಾಕುವ ವಿಧಾನವನ್ನು ಮಾರ್ಪಡಿಸುವ ಅಗತ್ಯವಿದೆ. ಶ್ರೀಮಂತರಲ್ಲದವರು ಎರಡು ರೀತಿಯ ಹೊಡೆತ ತಿಂದಿದ್ದಾರೆ – ತಮ್ಮ ಆದಾಯಗಳ ಇಳಿಕೆಯಿಂದಾದ ನಷ್ಟ ಮತ್ತು ಸರಕುಗಳ ಬೆಲೆ ಏರಿಕೆಯಿಂದಾಗಿ ಅನುಭವಿಸಿದ ಇನ್ನೂ ಹೆಚ್ಚಿನ ನಷ್ಟ. ಈ ವಿದ್ಯಮಾನವು ಒಟ್ಟು ಬೇಡಿಕೆಯನ್ನು ಮೊಟಕುಗೊಳಿಸುತ್ತದೆ. ಇದು ಆರ್ಥಿಕ ಬೆಳವಣಿಗೆಯನ್ನು ನಿಧಾನಗೊಳಿಸುತ್ತದೆ.

ಜರ್ಮನಿ: ಬಲಪಂಥಕ್ಕೆ ಹಿನ್ನಡೆ, ನಡು-ಎಡಪಂಥೀಯ ಸರಕಾರದತ್ತ



ಜರ್ಮನಿಯ ಪಾರ್ಲಿಮೆಂಟರಿ ಚುನಾವಣಾ ಫಲಿತಾಂಶ ಪ್ರಕಟವಾಗಿದ್ದು 4 ಅವಧಿಗಳಿಂದ (16 ವರ್ಷಗಳಿಂದ) ಇದ್ದ ಮೆರ್ಕೆಲ್ ಸರಕಾರ ಕೊನೆಯಾಗುವ ಲಕ್ಷಣಗಳಿವೆ. ನಡು-ಬಲಪಂಥಿಯ ಮತ್ತು ಉಗ್ರ ಬಲಪಂಥೀಯ ಪಕ್ಷಗಳಿಗೆ ಹಿನ್ನಡೆಯಾಗಿದೆ. ನಡು-ಎಡಪಂಥೀಯ ಪಕ್ಷಗಳು ಮುನ್ನಡೆ ಸಾಧಿಸಿವೆ. ಪ್ರಮುಖ ನಡು-ಎಡಪಂಥೀಯ ಪಕ್ಷವಾದ ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷ (ಎಸ್.ಡಿ.ಪಿ) ಕಳೆದ ಎರಡು ದಶಕಗಳಲ್ಲೇ ಅತ್ಯಂತ ಹೆಚ್ಚು ಮತ ಗಳಿಸಿ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದೆ.

ಕೋಷ್ಟಕ-1 ಜರ್ಮನ್ ಪಾರ್ಲಿಮೆಂಟರಿ ಚುನಾವಣೆ 2021/2017 ಫಲಿತಾಂಶ ಹೋಲಿಕೆ

ಪಕ್ಷ	2017 ಸೀಟು	2021 ಸೀಟು	ಸೀಟು ಹೆಚ್ಚಳ /ಕುಸಿತ	2017 ಮತ ಪಾಲು %	2021 ಮತ ಪಾಲು %	ಮತ ಪಾಲು ಹೆಚ್ಚಳ /ಕುಸಿತ
ಎಸ್.ಡಿ.ಪಿ	153	206	+53	20.5	25.7	+5.2
ಸಿ.ಡಿ.ಯು/ಸಿ.ಎಸ್.ಯು	246	196	-50	32.9	24.1	-8.8
ಗ್ರೀನ್	67	118	+51	8.9	14.8	+5.9
ಎಫ್.ಡಿಪಿ.	80	92	+12	10.7	11.5	+0.8
ಎ.ಎಫ್.ಡಿ	94	83	-11	12.6	10.3	-2.3
ಎಡಪಕ್ಷ	69	39	-30	9.2	4.9	-4.3

ಇನ್ನೊಂದು ನಡು-ಎಡಪಂಥೀಯ ಪಕ್ಷವಾದ ಗ್ರೀನ್ ಪಕ್ಷ ಅದರ ಚರಿತ್ರೆಯಲ್ಲೇ ಅತ್ಯಂತ ಹೆಚ್ಚು ಮತಪಾಲು ಪಡೆದು ಮೂರನೇಯ ಸ್ಥಾನ ಗಳಿಸಿದೆ. ಪ್ರಮುಖ ನಡು-ಬಲಪಂಥೀಯ ಪಕ್ಷವಾದ ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಪಕ್ಷ (ಸಿ.ಡಿ.ಯು/ಸಿ,ಎಸ್,ಯು) ಶೇ.9 ರಷ್ಟು ಮತಗಳಿಕೆ ಕಳೆದುಕೊಂಡು 70 ವರ್ಷಗಳಲ್ಲೇ ಅತ್ಯಂತ ಕಡಿಮೆ ಮತಗಳಿಸಿದೆ. ಇನ್ನೊಂದು ನಡು-ಬಲಪಂಥೀಯ ಪಕ್ಷವಾದ ಫ್ರೀ ಡೆಮೊಕ್ರಾಟಿಕ್ ಪಕ್ಷ(ಎಫ್.ಡಿ.ಪಿ) ಸಣ್ಣ ಮುನ್ನಡೆ ಸಾಧಿಸಿದೆ. ಅದೇ ರೀತಿ ಉಗ್ರ ಬಲಪಂಥೀಯ ಪಕ್ಷ "ಜರ್ಮನಿಗೆ ಬದಲಿ" (ಎ.ಎಫ್.ಡಿ). ಮತ್ತು ಎಡಪಕ್ಷ ಸಹ ಗಮನಾರ್ಹ ಪ್ರಮಾಣದಲ್ಲಿ ಮತಪಾಲು ಕಳೆದುಕೊಂಡಿವೆ. ಚುನಾವಣೆ ಫಲಿತಾಂಶಗಳ ವಿವರಗಳು ಮತ್ತು 2017ರ ಫಲಿತಾಂಶಗಳೊಂದಿಗೆ ಹೋಲಿಕೆ ಕೋಷ್ಟಕ-1ರಲ್ಲಿದೆ. ನಡು-ಎಡಪಂಥೀಯ ಪಕ್ಷಗಳು (ಎಸ್.ಡಿ.ಪಿ, ಗ್ರೀನ್) ಶೇ. 29.4 ರಿಂದ ಶೇ.40.4ಕ್ಕೆ ತಮ್ಮ ಮತಪಾಲು ಹೆಚ್ಚಿಸಿಕೊಂಡರೆ, ನಡು-ಬಲಪಂಥೀಯ ಪಕ್ಷಗಳ (ಸಿ.ಡಿ.ಯು/ಸಿ. ಎಸ್.ಯು, ಎಫ್.ಡಿ.ಪಿ) ಮತಪಾಲು ಕಳೆದ ಬಾರಿಗೆ ಹೋಲಿಸಿದರೆ ಶೇ. 43.6 ರಿಂದ ಶೇ.35.6 ಕ್ಕೆ ಕುಸಿದಿದೆ.

ಜರ್ಮನ್ ಮತದಾರರು ಬದಲಾವಣೆ ಬಯಸಿದ್ದಾರೆ ಎಂಬುದು ಸ್ಪಷ್ಟ. ಜಾಗತಿಕ ಮಾಧ್ಯಮ ಹಾಡಿ ಹೊಗಳುತ್ತಿದ್ದ ಮೆರ್ಕೆಲ್ ಅವರ ನವ-ಉದಾರವಾದಿ ಸರಕಾರವನ್ನು ತಿರಸ್ಕರಿಸಿದ್ದಾರೆ. ಈ ಚುನಾವಣೆಯಲ್ಲಿ ಹವಾಮಾನ ಬದಲಾವಣೆಯ ಫಲವಾಗಿ ದೇಶದಲ್ಲಿ ಭಾರೀ ಸಾವು-ನೋವು ನಷ್ಟ ಉಂಟಾಗಿದ್ದು, ಹಿಂದಿನ ಸರಕಾರ ಈ ನಿಟ್ಟಿನಲ್ಲಿ ದೂರದರ್ಶಿ ಕ್ರಮಗಳನ್ನು ತೆಗೆದುಕೊಳ್ಳದ್ದು ಪ್ರಮುಖ ವಿಷಯವಾಗಿತ್ತು. ವಿವಿಧ ಪಕ್ಷಗಳು ವಿವಿಧ ಭವಿಷ್ಯದ ಯೋಜನೆಗಳನ್ನು ಮಂಡಿಸಿದ್ದರು. ಪರಿಸರವಾದಿ ಪಕ್ಷವಾದ ಗ್ರೀನ್ ಪಕ್ಷ ಅತ್ಯಂತ ಹೆಚ್ಚು ಮತಪಾಲು ಹೆಚ್ಚಳ ಸಾಧಿಸಿದ್ದಕ್ಕೆ ಬಹುಶಃ ಇದೇ ಕಾರಣ.

ಯಾವುದೇ ಒಂದು ಪಕ್ಷಕ್ಕೆ ನಿಚ್ಚಳ ಬಹುಮತ ಬರದ್ದರಿಂದ, ಮುಂದಿನ ಸರಕಾರ ರಚಿಸಲು ಮೈತ್ರಿಕೂಟದ ರಚನೆಯ ಕಸರತ್ತು ಆರಂಭವಾಗಿದೆ. ಪ್ರಮುಖವಾಗಿ ಮೊದಲ ನಾಲ್ಕು ಪಕ್ಷಗಳು ವಿವಿಧ ಸಾಧ್ಯತೆಗಳ ಅನ್ವೇಷಣೆಯಲ್ಲಿ ತೊಡಗಿವೆ. ಜರ್ಮನ್ ಪಾರ್ಲಿಮೆಂಟಿನಲ್ಲಿ 735 ಸೀಟುಗಳಿದ್ದು ಸರಕಾರ ರಚಿಸಬೇಕಾದ ಮೈತ್ರಿಕೂಟಕ್ಕೆ 368 ಸೀಟುಗಳು ಅಗತ್ಯ. ಮೊದಲ ಎರಡು ಪಕ್ಷಗಳಾದ ಎಸ್.ಡಿ.ಪಿ, ಮತ್ತು ಸಿ.ಡಿ.ಯು ಎರಡೂ ಮೂರನೆಯ/ನಾಲ್ಕನೆಯ ಸ್ಥಾನದಲ್ಲಿರುವ ಗ್ರೀನ್ ಮತ್ತು ಎಫ್.ಡಿ.ಪಿಗಳೊಂದಿಗೆ ಮಾತುಕತೆ ಆರಂಭಿಸಿವೆ. ಗ್ರೀನ್ ಮತ್ತು ಎಫ್.ಡಿ.ಪಿ ಪಕ್ಷಗಳು ಸಹ ತಮ್ಮ ಪ್ರಣಾಳಿಕೆ ನೀತಿ-ಧೋರಣೆಗಳಲ್ಲಿ ಇರುವ ವ್ಯತ್ಯಾಸಗಳನ್ನು ಕಡಿಮೆ ಮಾಡುವ ಕುರಿತು ಚರ್ಚೆ ನಡೆಸುತ್ತಿವೆ. ಈಗಾಗಲೇ ಎರಡು ಸುತ್ತಿನ ಮಾತುಕೆಗಳನ್ನು ನಡೆಸಲಾಗುತ್ತಿದೆ.

ಎಸ್.ಡಿ.ಪಿ ಗೆ ಗ್ರೀನ್ ಮತ್ತು ಎಫ್.ಡಿ.ಪಿ ಪಕ್ಷಗಳ ಜತೆ ಮೈತ್ರಿಕೂಟ ಸರಕಾರ ರಚಿಸುವುದು ಮೊದಲ ಆದ್ಯತೆಯಾಗಿದೆ. ಸಿ.ಡಿ.ಯು ಗೆ ಸಹ ಇದೇ ಮೊದಲ ಆದ್ಯತೆ. ಗ್ರೀನ್ ಪಕ್ಷ ನಡು-ಎಡಪಂಥೀಯ ಪಕ್ಷವಾಗಿದ್ದು ಪರಿಸರ ನೀತಿ-ಧೋರಣೆಗಳ ಕುರಿತು ಬಿಗಿ ಅಭಿಪ್ರಾಯಗಳನ್ನು ಹೊಂದಿದೆ. ಗ್ರೀನ್ ಪಕ್ಷದಲ್ಲಿ ಸಾಕಷ್ಟು ಪ್ರಬಲವಾದ ಎಡಪಂಥೀಯ ಬಣವಿದ್ದು ದುಡಿಯುವ ಜನರ ಪರವಾದ ಮತ್ತು ಸಾಮಾಜಿಕ ಸಾಮುದಾಯಿಕ ಆದ್ಯತೆಗಳ ಸಲುವಾಗಿ ಬಂಡವಾಳಶಾಹಿಯ ಲಾಭಕೋರತನದ ಮೇಲೆ ಕಡಿವಾಣ ಹಾಕುವ ತೆರಿಗೆ ಹಾಕುವುದಕ್ಕೆ ಪರವಾಗಿದೆ. ಆದರೆ ಎಫ್.ಡಿ.ಪಿ ಮಾರುಕಟ್ಟೆಯಲ್ಲಿ ನಂಬಿಕೆಯಿಡುವ ಮತ್ತು ಹೆಚ್ಚಿನ ತೆರಿಗೆಗೆ ವಿರೋಧವಿರುವ ನಡು-ಬಲಪಂಥೀಯ ಪಕ್ಷ. ಎಸ್.ಡಿ.ಪಿ, ಮತ್ತು ಸಿ.ಡಿ.ಯು ನಾಯಕತ್ವದ ಎರಡೂ ಮೈತ್ರಿಕೂಟಗಳು ಸಫಲವಾಗಬೇಕಾದರೆ ಗ್ರೀನ್ ಮತ್ತು ಎಫ್.ಡಿ.ಪಿ ಗಳ ನಡುವಿನ ನೀತಿ-ಧೋರಣೆಗಳ ಕುರಿತು ಒಮ್ಮತ ಅವಶ್ಯ.

2017ರಲ್ಲಿ ಈ ಎರಡು ಪಕ್ಷಗಳು ಯಾವುದೇ ಒಮ್ಮತಕ್ಕೆ ಬಾರದೆ ಎಸ್.ಡಿ.ಪಿ, ಮತ್ತು ಸಿ.ಡಿ.ಯು ನಡುವೆ ಮಹಾಮೈತ್ರಿ ಸರಕಾರ ರಚನೆಯಾಗಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಬಾರಿಯು ತಾವು ವಿಫಲವಾದರೆ ಇದೇ ಉಳಿದಿರುವ ದಾರಿ ಎಂಬ ಅರಿವಿರುವ ಗ್ರೀನ್ ಮತ್ತು ಎಫ್.ಡಿ.ಪಿ, ಈ ಬಾರಿ ಸಹಮತ ಮೂಡಿಸಲು ಗರಿಷ್ಠ ಪ್ರಯತ್ನ ಮಾಡುತ್ತವೆ ಎಂದು ನಿರೀಕ್ಷಿಸಲಾಗಿದೆ. ಸಿ.ಡಿ.ಯು ಜತೆ ಮಹಾಮೈತ್ರಿ ಸರಕಾರ ಅನಿವಾರ್ಯವಾಗುವ ಪರಿಸ್ಥಿತಿ ಬರುವುದು ಮೊದಲ ಸ್ಥಾನ ಪಡೆದ ಎಸ್.ಡಿ.ಪಿ,ಗೂ ಇಷ್ಟವಿಲ್ಲ. ಆದ್ದರಿಂದ ಗ್ರೀನ್ ಮತ್ತು ಎಫ್.ಡಿ.ಪಿ ಗಳ ಜತೆ ವಿವರವಾದ ಮಾತುಕತೆ ನಡೆಸಿ ನೀತಿ-ಧೋರಣೆಗಳ ಸಹಮತ ಮೂಡಿಸಿ ಮೈತ್ರಿಕೂಟದ ಕನಿಷ್ಠ ಕಾರ್ಯಕ್ರಮವನ್ನು ರೂಪಿಸಲು ಶತಪ್ರಯತ್ನ ಮಾಡಲಿದೆ. ಈಗಿನ ಸೂಚನೆಗಳ ಪ್ರಕಾರ ಎಸ್.ಡಿ.ಪಿ-ಗ್ರೀನ್-ಎಫ್.ಡಿ.ಪಿ ಮೈತ್ರಿಕೂಟ ಸರಕಾರದ ಸಾಧ್ಯತೆಯೇ ಅತಿ ಹೆಚ್ಚಿದೆ ಎನ್ನಲಾಗಿದೆ. ಹಿಂದಿನ ಸರಕಾರದಲ್ಲಿ ಹಣಕಾಸು ಸಚಿವರಾಗಿದ್ದ ಎಸ್.ಪಿ.ಡಿ ಪಕ್ಷದ ನಾಯಕ ಶೋಲಫ್ ಶೋಲ್ಝ್ ಹೊಸ ಸರಕಾರದ ಚಾನ್ಸಲರ್ (ನಮ್ಮ ಪ್ರಧಾನಿಯಂಯಹ ಹುದ್ದೆ) ಆಗುವ ಸಾಧ್ಯತೆ ಹೆಚ್ಚು. ಆದರೆ ಸಿ.ಡಿಯು ಪಕ್ಷದ ಆರ್ಮಿನ್ ಲಾಶೆಟ್ ಚಾನ್ಸಲರ್ ಹುದ್ದೆ ಪಡೆಯುವ ಪೈಪೋಟಿ ನಡೆಸಲಿದ್ದಾರೆ.

ಐದನೆಯ ಮತ್ತು ಆರನೆಯ ಸ್ಥಾನಗಳಿಸಿರುವ ಉಗ್ರ ಬಲಪಂಥೀಯ ಎ.ಎಫ್.ಡಿ ಮತ್ತು ಎಡಪಕ್ಷ ಗಳನ್ನು ಸರಕಾರ ರಚನೆಯ ಕಸರತ್ತಿನಲ್ಲಿ ಪರಿಗಣಿಸಲಾಗುತ್ತಿಲ್ಲ ಎಂಬುದನ್ನು ಗಮನಿಸಬಹುದು. ಎಸ್.ಡಿ.ಪಿ-ಗ್ರೀನ್-ಎಡಪಕ್ಷ ಮೈತ್ರಿಕೂಟಗಳು ಹಲವು ರಾಜ್ಯಗಳಲ್ಲಿ ಪ್ರದೇಶಗಳಲ್ಲಿ ನಗರಗಳಲ್ಲಿ (ರಾಜಧಾನಿ ಬರ್ಲಿನ್ ಸೇರಿದಂತೆ) ಸರಕಾರ ರಚಿಸಿದ್ದು, ಅದರ ಸಾಧ್ಯತೆಯನ್ನು ನಿರೀಕ್ಷಿಸಲಾಗಿತ್ತು. ಆದರೆ ಈ ಮೈತ್ರಿಕೂಟಕ್ಕೆ 363 ಸೀಟುಗಳಿದ್ದು ಬಹುಮತಕ್ಕೆ 5 ಸೀಟುಗಳ ಕೊರತೆಯಿದೆ. ಆದ್ದರಿಂದ ನಡು-ಎಡಪಂಥೀಯ ಸರಕಾರ ಸಾಧ್ಯವಿಲ್ಲ. ಉಗ್ರ ಬಲಪಂಥೀಯ ಎ.ಎಫ್.ಡಿ ಈ ಕಸರತ್ತಿನಲ್ಲಿ 'ಅಸ್ಪೃಶ್ಯ'ರಂತಿದ್ದು ಯಾವ ಪಕ್ಷವೂ ಅದನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲ ಎಂದು ಗಮನಿಸಬೇಕು. ಸಿ.ಡಿಯು-ಎಫ್,ಡಿ.ಪಿ-ಎ. ಎಫ್,ಡಿ ಗೆ ಅಗತ್ಯ ಬಹುಮತವಿದ್ದರೂ ಸಿ.ಡಿ.ಯು ಈ ಸಾಧ್ಯತೆಯನ್ನು ಪರಿಗಣಿಸಿಲ್ಲ.

ಜರ್ಮನಿಯ ಸಂವಿಧಾನದ ಪ್ರಕಾರ ಸರಕಾರದ ರಚನೆಗೆ ಯಾವುದೇ ಸಮಯದ ಮಿತಿಯಿಲ್ಲ. 2017ರಲ್ಲಿ ಸರಕಾರ ರಚನೆಯ ಪ್ರಕ್ರಿಯೆಗೆ ಹಲವು ತಿಂಗಳುಗಳ ಕಾಲ ಹಿಡಿದಿತ್ತು. ಸಂಪ್ರದಾಯದ ಪ್ರಕಾರ ಮೊದಲ ಅತಿ ದೊಡ್ಡ ಪಕ್ಷವನ್ನು ಅಧ್ಯಕ್ಷರು ಸರಕಾರ ರಚಿಸಲು ಆಹ್ವಾನಿಸುತ್ತಾರೆ. ಆ ಪ್ರಯತ್ನ ವಿಫಲವಾದರೆ ಎರಡನೆಯ ಅತಿ ದೊಡ್ಡ ಪಕ್ಷಕ್ಕೆ ಅವಕಾಶವಿರುತ್ತದೆ. ಹಿಂದೆ ಮೂರು ಬಾರಿ ಎರಡನೆಯ ಅತಿ ದೊಡ್ಡ ಪಕ್ಷ ಮೈತ್ರಿಕೂಟ ಸರಕಾರ ರಚಿಸಿದ ಉದಾಹರಣೆಗಳಿವೆ. ಅಂದರೆ ಬಹುಮತವಿರುವ ಮೈತ್ರಿಕೂಟ ಯಾರು ರಚಿಸುತ್ತಾರೋ ಅವರಿಗೆ ಸರಕಾರ ಮಾಡುವ ಅವಕಾಶವಿರುತ್ತದೆ.

ಜರ್ಮನಿಯಲ್ಲಿ ಸರಕಾರ ರಚನೆ ಮತ್ತು ಅದು ಯಾವ ಧೋರಣೆಗಳ ಸರಕಾರವಾಗಿರುತ್ತದೆ ಎಂಬುದನ್ನು ಜರ್ಮನ್ ಮಾತ್ರವಲ್ಲ, ಇಡೀ ಯುರೋಕೂಟದ ಜನತೆ ಕಾತರದಿಂದ ನೋಡುತ್ತಿದ್ದಾರೆ. ಯುರೋಪಿನ ಅತಿ ದೊಡ್ಡ ಆರ್ಥಿಕವಾಗಿ, ಯುರೋಕೂಟದ ಸಹಜ ನಾಯಕನಾಗಿ ಮತ್ತು ಯುರೋಕೂಟದ ಅಧ್ಯಕ್ಷಗಿರಿಯನ್ನು 2022 ಜನವರಿಯಿಂದ ವಹಿಸಿಕೊಳ್ಳುತ್ತಿರುವ ದೇಶವಾಗಿ ಜರ್ಮನಿಯಲ್ಲಿ ಉತ್ತಮ ಭದ್ರ ಸರಕಾರ ರಚನೆ ಅಗತ್ಯ. ಕ್ವಾಡ್, ಔಕಸ್ ರಚನೆಯ ನಂತರ ಯುರೋಕೂಟ ಮತ್ತು ಯು.ಎಸ್ ನಡುವೆ ಬದಲಾಗುತ್ತಿರುವ ಸಂಬಂಧಗಳ ಸಂದರ್ಭದಲ್ಲಿ ಸಹ ಇದು ಮಹತ್ವ ಪಡೆದಿದೆ.

ಯು.ಕೆ ಯಲ್ಲಿ ಪೆಟ್ರೋಲ್ ಬಂಕ್ ಮುಂದೆ ಮೈಲುದ್ದ ಕ್ಯೂ ಏಕೆ?



ಸೆಪ್ಟೆಂಬರ್ ಕೊನೆಯಲ್ಲಿ ಯು.ಕೆ ಯ ಉದ್ದಗಲಕ್ಕೂ ಪೆಟ್ರೋಲ್ ಬಂಕ್ ಗಳ ಮುಂದೆ ಹಲವು ಮೈಲುಗಳುದ್ದಕ್ಕೂ ಕಾರುಗಳು ಮತ್ತಿತರ ವಾಹನಗಳು ಕ್ಯೂ ನಿಂತಿರುವ ದೃಶ್ಯಗಳು ಕಂಡು ಬಂದವು. ಕೊವಿದ್ ಮಹಾಸೋಂಕಿನ ನಿರ್ಬಂಧಗಳ ನಂತರ ಸಹಜ ಸ್ಥಿತಿಗೆ ಮರಳುತ್ತಿದ್ದ ದೇಶದಲ್ಲಿ ಆತಂಕ ಆವರಿಸಿತ್ತು. ಯಾವುದೇ ಅಗತ್ಯ ವಸ್ತು ಕೊರತೆಯಾದಾಗ ಆಗುವಂತೆ ಬೆಲೆ ಏರಿಕೆ, ಕಾಳಸಂತೆ, ಗಾಬರಿಯ ಅತಿ ಖರೀದಿ ಎಲ್ಲ ಕಂಡು ಬಂದವು. ತೈಲದ ಕೊರತೆಯಿಲ್ಲ. ಗಾಬರಿಯ ಅತಿ ಖರೀದಿ ಮತ್ತು ಕಾಳಸಂತೆಯಿಂದ ಕೃತಕ ಕೊರತೆಯುಂಟಾಗಿದೆ ಎಂಬ ಯು.ಕೆ ಸರಕಾರದ ಹೇಳಿಕೆಯನ್ನು ನಂಬುವವರಿಲ್ಲ. ಮಾತ್ರವಲ್ಲ ಸರಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಯು.ಕೆ ಯ ಸ್ವತಂತ್ರ 5500 ಪೆಟ್ರೋಲ್ ಬಂಕ್ ಗಳಲ್ಲಿ ಮೂರನೆಯ ಎರಡರಷ್ಟು ಬಂಕ್ ಗಳಲ್ಲಿ ಪೆಟ್ರೋಲ್ ಖಾಲಿಯಾಗಿತ್ತು. ಹಲವು ಪೆಟ್ರೋಲ್ ಬಂಕ್ ಗಳಲ್ಲಿ ಖಾಲಿಯಾಗುವ ಮೊದಲು ಸಾಮಾನ್ಯ ಪರಿಸ್ಥಿತಿಯ 2-3 ಪಟ್ಟು ಮಾರಾಟ ನಡೆಯಿತು. ತೈಲದ ಕೊರತೆ ಎಷ್ಟು ಗಂಭೀರವಾಗಿತ್ತೆಂದರೆ ಬ್ರಿಟಿಷ್ ಮೆಡಿಕಲ್ ಅಸೋಸಿಯೇಶನ್ ಅಗತ್ಯ ಸೇವಾ ಸಿಬ್ಬಂಧಿಗೆ ಆದ್ಯತೆಯಲ್ಲಿ ತೈಲ ಲಭ್ಯಮಾಡಬೇಕೆಂದು ಒತ್ತಾಯಿಸಿತು. ಇಲ್ಲದಿದ್ದರೆ ವೈದ್ಯಕೀಯ ಸೇರಿದಂತೆ ಹಲವು ಅಗತ್ಯ ಸೇವೆಗಳು ಕುಸಿದು ಬೀಳಬಹುದು ಎಂದು ಎಚ್ಚರಿಕೆ ನೀಡಿದೆ.

⇨⇨



ಹರಿಯಾಣ: ಪ್ರತಿಭಟನಾನಿರತ ರೈತರ ಮೇಲೆ ಜಲಫಿರಂಗಿ ಪ್ರಯೋಗ

ಜಜ್ಜರ್: ಕೇಂದ್ರದ ಬಿಜೆಪಿ ಸರ್ಕಾರವು ಜಾರಿಗೊಳಿಸಲು ಹೊರಟಿರುವ ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸಬೇಕೆಂದು ಪ್ರತಿಭಟನೆ ನಡೆಸುತ್ತಿರುವ ವೇಳೆ ರೈತರು ಮತ್ತು ಭದ್ರತಾ ಸಿಬ್ಬಂದಿ ನಡುವೆ ಘರ್ಷಣೆ ನಡೆದಿದೆ. ಪ್ರತಿಭಟನಾ ನಿರತರ ರೈತರನ್ನು ಚದುರಿಸಲು ಪೊಲೀಸರು ಜಲಫಿರಂಗಿ ಪ್ರಯೋಗಿಸಿರುವ ಘಟನೆ ನಡೆದಿದೆ.

ಇಂದು ಬೆಳಿಗ್ಗೆ ನಿಗದಿತ ಕಾರ್ಯಕ್ರಮದಲ್ಲಿ ಭಾಗವಹಿಸಲು ಜಜ್ಜರ್‌ಗೆ ಆಗಮಿಸಿದ ಹರಿಯಾಣ ಉಪ ಮುಖ್ಯಮಂತ್ರಿ ದುಷ್ಯಂತ್ ಚೌಟಾಲಾ ವಿರುದ್ಧ ರೈತರು ಪ್ರತಿಭಟನೆ ಮುಂದಾದರು ಹಾಗೂ ಮುತ್ತಿಗೆ ಹಾಕಲು ಯತ್ನಿಸಿದರು. ಈ ಸಂದರ್ಭದಲ್ಲಿ ಘರ್ಷಣೆ ನಡೆದಿದೆ. ಚೌಟಾಲಾ ಪ್ರತಿಭಟನಾ ಸ್ಥಳಕ್ಕೆ ತಲುಪಿದಾಗ ರೈತರು ಕಪ್ಪು ಬಾವುಟಗಳನ್ನು ತೋರಿಸಿದರು.

ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಪ್ರತಿಭಟನಾಕಾರರನ್ನು ನಿಯಂತ್ರಿಸಲು ಪೊಲೀಸರು ಬಿಗಿ ಭದ್ರತೆ ಕಲ್ಪಿಸಿದ್ದರು. ಅಲ್ಲದೆ, ಅರೆ ಸೇನಾ ಪಡೆಯನ್ನು ನಿಯೋಜಿಸಿದ್ದರು. ಗಂಭೀರ ಸ್ವರೂಪ ಪಡೆದ ಪ್ರತಿಭಟನೆಯನ್ನು ನಿಯಂತ್ರಣಗೊಳಿಸಿಲು ಪೊಲೀಸರು ಜಲಫಿರಂಗಿ ಪ್ರಯೋಗಿಸಿದ್ದಾರೆ.

ಪ್ರತಿಭಟನಾ ಸ್ಥಳಕ್ಕೆ ಪೊಲೀಸ್ ಉಪ ಆಯುಕ್ತ ಶ್ಯಾಮ್ ಲಾಲ್ ಪೂನಿಯಾ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದಾರೆ.

ಕೇಂದ್ರ ಸರ್ಕಾರದ ವಿವಾದಿತ ಕೃಷಿ ಕಾನೂನುಗಳ ವಿರುದ್ಧ ರೈತರು ಕಳೆದ ಒಂದು ವರ್ಷದಿಂದ ದೆಹಲಿ ಸುತ್ತಮುತ್ತ ಹಾಗೂ ಗಡಿ ಭಾಗಗಳು ಮತ್ತು ಹರಿಯಾಣ, ಉತ್ತರ ಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದಾರೆ.

ಹರಿಯಾಣ ರೈತರು ಮತ್ತು ಪೊಲೀಸರ ನಡುವೆ ಘರ್ಷಣೆಯು ಇದು ಸತತ ಎರಡನೇ ದಿನವಾಗಿದ್ದು, ಗುರುವಾರದಂದು ಕರ್ನಾಲ್‌ನಲ್ಲಿ ನಿಗದಿಯಾಗಿದ್ದ ಬಿಜೆಪಿ ಕಾರ್ಯಕ್ರಮ ಆರಂಭಕ್ಕೂ ಮುನ್ನ ಘರ್ಷಣೆ



ನಡೆದಿದೆ.

ರೈತರು ಹರಿಯಾಣದ ಹಲವು ಭಾಗಗಳಲ್ಲಿ ಆಡಳಿತ ಪಕ್ಷ ಮತ್ತು ಅದರ ನಾಯಕರ ಯಾವುದೇ ಕಾರ್ಯಕ್ರಮಗಳನ್ನು ನಡೆಸಲು ಅವಕಾಶ ನೀಡುವುದಿಲ್ಲ, ಅವರು ಭಾಗವಹಿಸುವ ಎಲ್ಲೆಡೆ ಕೇಂದ್ರದ ರೈತರ ವಿರೋಧಿ ಕೃಷಿ ಕಾನೂನುಗಳನ್ನು ವಾಪಸ್ಸು ಪಡೆಯಲು ಆಗ್ರಹಿಸಲಾಗುತ್ತದೆ ಎಂದು ಘೋಷಿಸಿದ್ದಾರೆ.

ಅಸ್ಸಾಂ ಗುಡಿಸಲುವಾಸಿಗಳ ಮೇಲೆ ಬಿಜೆಪಿ ಸರಕಾರದ ಗೋಲಿಬಾರ್ ದೌರ್ಜನ್ಯ ಪ್ರಕರಣ ಸ್ವತಂತ್ರ ನ್ಯಾಯಾಂಗ ತನಿಖೆಗೊಳಪಡಿಸಿ

ಅಸ್ಸಾಂನಲ್ಲಿ ಗುಡಿಸಲವಾಸಿಗಳ ಮೇಲೆ ಅಲ್ಲಿನ ಬಿಜೆಪಿ ಸರಕಾರ ನಡೆಸಿದ ಗೋಲಿಬಾರ್ ದೌರ್ಜನ್ಯ, ಗ್ರಾಮಸ್ಥರ ಹತ್ಯೆ ಖಂಡಿಸಿ ರವಿವಾರ ನಗರದ ವಿ.ಕೃ ಗೋಕಾಕ್ ಪ್ರತಿಮೆ ಎದುರು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್‌ಎಫ್‌ಐ) ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ವಿದ್ಯಾರ್ಥಿ, ಯುವಜನರು ಪ್ರತಿಭಟನೆ ನಡೆಸಿ, ಸರಕಾರದ ವಿರುದ್ಧ ಘೋಷಣೆ ಕೂಗಿದರು.

ಈ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಮಾತನಾಡಿ, ಅಸ್ಸಾಂನ ದೋಲ್‌ಪುರದಲ್ಲಿ ಗುಡಿಸಲವಾಸಿ ಬಡಜನರನ್ನು ರಾಜ್ಯ ಸರಕಾರ ಒಕ್ಕಲೆಬ್ಬಿಸುವಾಗ ಪ್ರತಿರೋಧಿಸಿದ ಬಡ ನಿವೇಶನರಹಿತರ ಮೇಲೆ ಪೋಲೀಸರನ್ನು ಛೂ



ಬಿಟ್ಟು ಗೋಲಿಬಾರ್ ನಡೆಸಿ ಇಬ್ಬರನ್ನು ಕ್ರೂರವಾಗಿ ಕೊಂದಿರುವದು ಅತ್ಯಂತ ಹೇಯ ಕೃತ್ಯ ಎಂದು ಖಂಡಿಸಿದರು.

ತನ್ನ ರಾಜ್ಯದ ಸಾವಿರಾರು ನಿವೇಶನ ರಹಿತ ಜನರಿಗೆ ಸರಕಾರವೇ ಖಾಯಂ ಆಗಿ ನಿವೇಶನ ಹಾಗೂ ಮನೆ ಒದಗಿಸಬೇಕಾದ ಬಿಜೆಪಿ ನೇತೃತ್ವದ ರಾಜ್ಯ ಸರಕಾರ ಕೋಮು ವಿಭಜನೆಯಲ್ಲಿ ತೊಡಗಿದೆ. ಇದನ್ನು ವಿರೋಧಿಸಿದವರನ್ನು ಪೊಲೀಸ್ ಬಲ ದುರುಪಯೋಗ ಪಡಿಸಿಕೊಂಡು ಲಾಠಿಗಳಿಂದ ಕ್ರೂರವಾಗಿ ದೌರ್ಜನ್ಯವೆಸಗುವ, ಗೋಲಿಬಾರ್ ಮೂಲಕ ಕೊಲ್ಲುವ ಕೊಲೆಗಡುಕತನ ಮೆರೆಯುತ್ತಿದೆ ಎಂದು ಕಿಡಿಕಾರಿದರು.

ನಿರಾಯುಧ ಪ್ರತಿಭಟನಾಕಾರರ ಎದೆಗೆ ಗುಂಡಿಟ್ಟು ಕೊಂದು, ಮೃತ ಶರೀರದ ಮೇಲೆ ಪೊಲೀಸ್ ಮತ್ತು ಸರಕಾರಿ ಪತ್ರಕರ್ತನೊಬ್ಬ ನಡೆಸಿದ ಪೈಶಾಚಿಕ ಕೃತ್ಯ ಮಾನವ ಕುಲವು ತಲೆತಗ್ಗಿಸುವಂತೆ ಮಾಡಿದೆ ಎಂದರು.

ರಾಜ್ಯ ಸರಕಾರ ಕೂಡಲೇ ಈ ಗೋಲಿಬಾರ್ ಪ್ರಕರಣವನ್ನು ಸ್ವತಂತ್ರ ನ್ಯಾಯಾಂಗ ತನಿಖೆಗೊಳಪಡಿಸಿ, ಕಠಿಣ ಶಿಕ್ಷೆ ನೀಡಬೇಕು. ಮೃತರ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಹಾಗೂ ವಸತಿ ರಹಿತರಿಗೆ ಪುನರ್ವಸತಿಯನ್ನು ಕಲ್ಪಿಸಬೇಕು. ಇಲ್ಲವಾದಲ್ಲಿ ಈಗಾಗಲೇ ಹಸಿವು, ವಸತಿ, ಉದ್ಯೋಗವಿಲ್ಲದೇ ಹತಾಶಾರಗಿರುವ ಯುವಜನತೆ ದಂಗೇ ಏಳಬೇಕಾದೀತು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ಅಮರೇಶ ಕಡಗದ, ಮಾಜಿ ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ, ವಕೀಲ ನಾರಾಯಣ ಕಾಳೆ, ಎಸ್‌ಎಫ್‌ಐ–ಡಿವೈಎಫ್‌ಐ ಮುಖಂಡರಾದ ಮಾಬುಲಿ ಮದರಂಗಿ, ಗಣೇಶ ರಾಠೋಡ್, ಬಿರೇಶ ನೆಟಗಲಣ್ಣವರ, ಕಾವ್ಯ, ಸುಮಾ ಎಸ್.ಎಚ್, ಹೊನ್ನಪ್ಪ ದೇವರಗುಡ್ಡ, ಅರುಣ ಕಡಕೋಳ, ಅಕ್ಬರ್, ಗಗನ್ ವಡ್ಡರ, ರವಿ ಬಂಕಾಪುರ, ಭುವನ್ ಚಿಕ್ಕೆರೂರು ಸೇರಿದಂತೆ ಉಪಸ್ಥಿತರಿದ್ದರು.

⇨⇨ ಸರಕಾರ ಮಾತ್ರವಲ್ಲ ಯು,ಕೆಯ ಮೂರು ದೊಡ್ಡ ತೈಲ ಕಂಪನಿಗಳು ಸಹ ದೇಶದಲ್ಲಿ ತೈಲ ಕೊರತೆಯಿಲ್ಲವೆಂದು ಹೇಳಿವೆ. ಹಾಗಾದರೆ ಪೆಟ್ರೋಲ್ ಬಂಕ್ ಗಳಲ್ಲಿ ಯಾಕೆ ಕೊರತೆಯುಂಟಾಗಿದೆ? ಕೇಳಿದರೆ ಆಶ್ಚರ್ಯವಾಗಬಹುದು. ಇದು ತೈಲ ಸಾಗಾಣಿಕೆಯಲ್ಲಿ ಉಂಟಾಗಿರುವ ತೀವ್ರ ವ್ಯತ್ಯಯಗಳಿಂದ. ಭಾರಿ ಸರಕು ಸಾಗಾಣಿಕಾ ಟ್ರಕ್ ಗಳನ್ನು ಚಲಾಯಿಸಲು ಚಾಲಕರ ತೀವ್ರ ಕೊರತೆಯುಂಟಾಗಿದೆ. ಸುಮಾರು 1 ಲಕ್ಷ ಚಾಲಕರ ಕೊರತೆಯಿದೆ ಎಂದು ಹೇಳಲಾಗಿದೆ. ಹಾಗಾಗಿ ತೈಲ ಕೊರತೆ ಇತರ ಅಗತ್ಯ ವಸ್ತುಗಳಿಗೂ ಹರಡಬಹುದು ಎಂಬ ಆತಂಕ ಹರಡಿದೆ. ತೈಲ ಮುಂತಾದ ಅಪಾಯಕಾರಿ ರಾಸಾಯನಿಕ ಸಾಗಾಣಿಕೆ ಟ್ರಕ್ ಡ್ರೈವಿಂಗ್ ಲೈಸೆನ್ಸ್ ಪಡೆಯಲು ಇನ್ನಷ್ಟು ಹೆಚ್ಚಿನ ಷರತ್ತುಗಳು ನಿರ್ಬಂಧಗಳು ಇದ್ದು ಅಂತಹ ಡ್ರೈವರ್ ಗಳ ಕೊರತೆ ಇನ್ನಷ್ಟು ತೀವ್ರವಾಗಿದೆ.

ಡ್ರೈವರ್ ಕೊರತೆಗೆ ಬ್ರೆಕ್ಸಿಟ್ ಮತ್ತು ಕೊವಿದ್ ಪ್ರಮುಖವಾಗಿ ಕಾರಣವಿದ್ದರೂ ಇತರ ಹಲವು ಕಾರಣಗಳಿವೆ ಎನ್ನಲಾಗಿದೆ. ಬ್ರೆಕ್ಸಿಟ್ ಘೋಷಣೆಯಾಗುತ್ತಿದ್ದಂತೆ ಯುರೋಕೂಟದ ದೇಶಗಳ ಡ್ರೈವರ್ ಗಳು ತಮ್ಮ ದೇಶಗಳಿಗೆ ವಾಪಸಾದರು. 2020ರಲ್ಲೇ 25–30 ಸಾವಿರ ಯುರೋಕೂಟದ ದೇಶಗಳ ಡ್ರೈವರ್ ಗಳು ವಾಪಸಾದರು. ಮುಂದಿನ ಸರದಿ ಕೊವಿದ್ ನದಾಗಿತ್ತು. ಕೊವಿದ್ ಲಾಕ್ ಡೌನ್ ಜಾರಿಯಾಗಿ ಓಡಾಟಕ್ಕೆ ತೊಂದರೆಯಾದಾಗ ಇನ್ನಷ್ಟು ಡ್ರೈವರ್ ಗಳು ಯು.ಕೆ ಬಿಟ್ಟು ಹೋದರು. ಹಲವರು ತಮ್ಮ ದೇಶಗಳಿಗೆ ಹೋದವರು ವಾಪಸಾಗಲು ಸಾಧ್ಯವಾಗಲಿಲ್ಲ. ಬ್ರೆಕ್ಸಿಟ್ ನಂತರ ಯುರೋ ಕೂಟದ ದೇಶಗಳವರಿಗೆ ಬಂದ ಹೊಸ ವೀಸಾ ಷರತ್ತುಗಳು ಇನ್ನಷ್ಟು ಡ್ರೈವರ್ ಗಳನ್ನು ಯು.ಕೆ ಯಿಂದ ಹೊರಗಿಟ್ಟವು. ಇಷ್ಟು ಸಾಲದೆಂಬಂತೆ ಭಾರಿ ಸರಕು ಸಾಗಾಣಿಕಾ ಟ್ರಕ್ ಗಳ ಡ್ರೈವಿಂಗ್ ಲೈಸೆನ್ಸ್ ಪಡೆಯಲು 40 ಸಾವಿರ ಜನ ಅರ್ಜಿ ಹಾಕಿ ಕಾಯುತ್ತಿದ್ದಾರೆ. ಯು.ಕೆ ಯಲ್ಲಿ ಭಾರೀ ಸಾಗಾಣಿಕೆ ಡ್ರೈವರ್ ಗಳಿಗೆ ಬರುವ ಸಂಬಳ, ಸವಲತ್ತು ಇತರ ಯುರೋದೇಶಗಳಿಗೆ ಹೋಲಿಸಿದರೆ ಕಡಿಮೆ. ಹೆದ್ದಾರಿಗಳಲ್ಲಿ ಸವಲತ್ತುಗಳು ಸಹ ಕಳಪೆಯಾಗಿವೆ. ಉತ್ತಮ ಸೇವಾ ಪರಿಸ್ಥಿತಿ ಇಲ್ಲದಿರುವುದರಿಂದ ಈ ಕೆಲಸಕ್ಕೆ ಯಾರೂ ಬರುತ್ತಿಲ್ಲ. ಯುಕೆ ಯ ಭಾರೀ ಸಾಗಾಣಿಕೆ ಡ್ರೈವರ್ ಗಳ ಸರಾಸರಿ ವಯಸ್ಸು 57 ಎಂಬುದೇ ಇದನ್ನು ಸಾಬೀತು ಪಡಿಸುತ್ತದೆ. ಯು.ಕೆ ಸರಕಾರ ಮಿಲಿಟರಿ ಡ್ರೈವರುಗಳನ್ನು ನಿಯೋಜಿಸುವ, ವಿದೇಶಿ ಡ್ರೈವರುಗಳಿಗೆ ವೀಸಾ, ಡ್ರೈವಿಂಗ್ ಲೈಸೆನ್ಸ್ ಅರ್ಜಿಗಳನ್ನು ತ್ವರಿತಗೊಳಿಸುವ, ಸಂಬಳ ಸವಲತ್ತುಗಳನ್ನು ಹೆದ್ದಾರಿ ಸವಲತ್ತುಗಳನ್ನು ನೀಡುವ ಕೆಲವು ತುರ್ತು ಕ್ರಮಗಳನ್ನು ಕೈಗೊಂಡಿದೆ. ಆದರೆ ಇವು ಈ ಬಿಕ್ಕಟ್ಟನ್ನು ಎಷ್ಟರ ಮಟ್ಟಿಗೆ ಪರಿಹರಿಸಬಹುದು ಎಂದು ಕಾದು ನೋಡಬೇಕಾಗಿದೆ.



ಹೊಸ ಬಸ್ ಪಾಸ್ ವಿತರಣೆ ಮಾಡುವವರೆಗೂ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಪ್ರಯಾಣ ಕಲ್ಪಿಸಲು ಆಗ್ರಹ

2020–21ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ಪದವಿ/ ಡಿಪ್ಲೋಮಾ/ ಐ.ಟಿ.ಐ/ವೃತ್ತಿಪರ ಕೋರ್ಸ್/ ವಸತಿ ಕಾಲೇಜು/ಪಿ.ಎಚ್.ಡಿ ವಿದ್ಯಾರ್ಥಿಗಳ ತರಗತಿ/ ಪರೀಕ್ಷೆಗಳು ಮುಕ್ತಾಯವಾಗದೇ ಇರುವ ಹಿನ್ನೆಲೆಯಲ್ಲಿ ಇಂತಹ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಠಿಯಿಂದ ಪರೀಕ್ಷಾ ದಿನಾಂಕ ಮುಕ್ತಾಯ ಗರಿಷ್ಠ ನವೆಂಬರ್ ಸದರಿ ಬಸ್ ಪಾಸ್ ಅವಧಿ ವಿಸ್ತರಿಸಿ ಸಂಸ್ಥೆಯ ಬಸ್ಸುಗಳಲ್ಲಿ ಉಚಿತ ಪ್ರಯಾಣಕ್ಕೆ ಅನುಮತಿಸಲಾಗಿದನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾವೇರಿ ಜಿಲ್ಲಾ ಸಮಿತಿಯು ಸ್ವಾಗತಿಸಿ ಉಳಿದ ಎಲ್ಲಾ ವಿದ್ಯಾರ್ಥಿಗಳಿಗೂ ಹೊಸ ಬಸ್ ಪಾಸ್ ವಿತರಣೆ ಮಾಡುವವರೆಗೂ ಉಚಿತ ಪ್ರಯಾಣ ಕಲ್ಪಿಸ ಕೊಡಬೇಕೆಂದು ಎಸ್‌ಎಫ್‌ಐ ಆಗ್ರಹಿಸಿದೆ.

JANASHAKTHI KANNADA VARA PATRIKE October 4-10, 2021 Price: Rs. 10/- Date of Publication: 1 October 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ರಾಜ್ಯದ ಹಲವೆಡೆ ಪ್ರತಿಭಟನೆಯ ಬಿಸಿ: ಕೇಂದ್ರದ ವಿರುದ್ಧ ಮೊಳಗಿದ ರಣಕಹಳೆ


ಬೆಂಗಳೂರು


ಮಂಗಳೂರು



ಉಡುಪಿ


ಯಾದಗಿರಿ



ಹಾಸನ


ಕಲಬುರಗಿ


ಚಿಕ್ಕಬಳ್ಳಾಪುರ


ದೊಡ್ಡ ಬಳ್ಳಾಪುರ


ಕೋಲಾರ



ಹಗರಿಬೊಮ್ಮನಹಳ್ಳಿ


ಮೈಸೂರು


ಕೊಪ್ಪಳ



ಗದಗ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**